ಅಹ್ಮದಿಯಾ ಜಮಾಅತಿನ ಸ್ಥಾಪಕ
ಹಝ್‌ರತ್ ಮಿರ್ಝಾ ಗ಼ುಲಾಂ ಅಹ್ಮದ್ ಅಲೈಹಿಸ್ಸಲಾಮರ
ಗ್ರಂಥಗಳಿಂದ

# ಆಯ್ದ ಭಾಗಗಳು



# ಅಹ್ಮದಿಯಾ ಜಮಾಅತಿನ ಸ್ಥಾಪಕ
# ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್
# ಅಲೈಹಿಸ್ಸಲಾಮರ ಗ್ರಂಥಗಳಿಂದ ಆಯ್ದ ಭಾಗಗಳು

# AHMADIYYA JAMA’ATINA STHAPAKARA GRANTHAGALINDA AAYDA BHAGAGALU

Kannada Translation of

**Muntakhab Tahreerat** (Urdu)


| | |
|---|---|
| Translated by | M.Ubeidullah. B.A., LL.B. |
| Second Edition Revised by | Muhammad Yusuf. B.com. |
| Assisted by | Moulavi  Inamullah |
| Type Setting | Moulavi Inamullah |
| Published by | Nazarat Nashro – Isha’at, Qadian Distt. Gurdaspur, Punjab - 143516 |
| First Edition | 1989 |
| Second Edition | 2017 |
| Copies | 1000 |
| Printed at | Fazl-e-Umar Printing Press, Qadian. |

# ಜಾಗತಿಕ ಅಹ್ಮದಿಯಾ ಜಮಾಅತಿನ ಶತವಾರ್ಷಿಕ ಸಮಾರಂಭದ ಹರ್ಷದಲ್ಲಿ:

ಏಕದೇವ ವಿಶ್ವಾಸವನ್ನೂ ಮುಹಮ್ಮದ್ ಪೈಗಂಬರರ[ಸ] ಪ್ರವಾದಿತ್ವವನ್ನೂ ವ್ಯಕ್ತಗೊಳಿಸುವ ಇಸ್ಲಾಮಿನ ಮೂಲಭೂತ ವಚನದ (ಕಲಿಮಯೇ ತೌಹೀದ್‌ನ) ಮೇಲೆ ಸ್ನೇಹವನ್ನು ಪ್ರಕಟಿಸಿದ "ಅಪರಾಧ"ಕ್ಕಾಗಿ ಕಠಿಣ ಶಿಕ್ಷೆಗಳಿಗೂ ಕಷ್ಟಗಳಿಗೂ ಗುರಿಯಾದ, ಅಲ್ಲಾಹನ ಮಾರ್ಗದಲ್ಲಿ ಹುತಾತ್ಮರಾದ ಮತ್ತು ಹಝ್ರತ್ ಬಿಲಾಲ್‌ರ*[ರ] ಮನೋಸ್ಥೈರ್ಯ ಹೊಂದಿದವರಾದ ಅಹ್ಮದೀ ಮುಸ್ಲಿಮರ ಪರವಾಗಿ ಒಂದು ಪವಿತ್ರ ಕಾಣಿಕೆ.

* ಹಝ್ರತ್ ಬಿಲಾಲ್[ರ] ಹಝ್ರತ್ ಪೈಗಂಬರರ[ಸ] ಒಬ್ಬ ಶಿಷ್ಯರಾಗಿದ್ದರು. ಅವರು ಇಸ್ಲಾಮ್ ಧರ್ಮ ಸ್ವೀಕರಿಸಿದ ನಂತರ ಅವರನ್ನು ನಾನಾವಿಧದ ಹಿಂಸಾಚಾರಗಳಿಗೆ ಗುರಿಪಡಿಸಲಾಯಿತು. ಆದರೆ ಅವರು ತನ್ನ ವಿಶ್ವಾಸವನ್ನು ತ್ಯಜಿಸುವುದಕ್ಕಿಂತ ದೇವಮಾರ್ಗದಲ್ಲಿ ತನ್ನನ್ನು ಬಲಿಗೊಡುವುದೇ ಉತ್ತಮವೆಂದು ಬಗೆದಿದ್ದರು. ಅವರನ್ನು ಹಿಂಸಿಸುತ್ತಿರುವಾಗ ಅವರು ತನ್ನ ವಿಶ್ವಾಸವನ್ನು ಉಚ್ಚಸ್ವರದಲ್ಲಿ ಇನ್ನಷ್ಟು ಸ್ಪಷ್ಟವಾಗಿ ಬಹಿರಂಗಗೊಳಿಸುತ್ತಿದ್ದರು.

# ವಿಷಯಾನುಕ್ರಮಣಿಕೆ


| ಕ್ರ.ಸಂ. | ಪರಿವಿಡಿ | ಪು.ಸಂ. |
|---|---|---|
| 1 | ಪ್ರಕಾಶಕರ ನುಡಿ | VII |
| 2 | ಮುನ್ನುಡಿ | IX |
| 3 | ಮಹೋನ್ನತನಾದ ದೇವ | 1 |
| 4 | ದೇವದರ್ಶನ | 3 |
| 5 | ದೇವನು ತನಗೆ ನಿಷ್ಠರಾದವರೊಂದಿಗೆ ವರ್ತಿಸುವ ರೀತಿ | 4 |
| 6 | ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ | 11 |
| 7 | ಪವಿತ್ರ ಖುರ್ಆನ್ | 23 |
| 8 | ದೇವನ ಸಂದೇಶವಾಣಿ | 30 |
| 9 | ನಮ್ಮ ನಂಬಿಕೆಗಳೂ ವಿಶ್ವಾಸಗಳೂ | 33 |
| 10 | ಹಝ್ರತ್ ಮಸೀಹ್ ಮೌಊದ್(ಅ) (ವಾಗ್ದತ್ತ ಮಸೀಹ್) ಅವರ ಸ್ಥಾನಮಾನ | 36 |
| 11 | ಹೊಸ ಜಮಾಅತಿನ ಸ್ಥಾಪನೆ ಮತ್ತು ಉಪದೇಶಗಳು | 39 |
| 12 | ಅಹ್ಮದಿಯಾ ಜಮಾಅತಿನ ಮುಂದಿನ ಸ್ಥಿತಿ | 48 |
| 13 | ಅಂತಿಮ ವಿಜಯ | 49 |
| 14 | ಆತ್ಮ | 50 |
| 15 | ಮರಣಾನಂತರ ಜೀವಿತ | 52 |
| 16 | ಲೋಕದಲ್ಲಿರುವ ವಿವಿಧ ಧರ್ಮಗಳು | 53 |
| 17 | ಪಾಪ | 54 |
| 18 | ಮೋಕ್ಷ | 55 |
| 19 | ಅಲ್ಲಾಹನ ಮಾರ್ಗದಲ್ಲಿ ಕಠಿಣ ಪರಿಶ್ರಮ (ಜಿಹಾದ್ ಫೀ ಸಬೀಲಿಲ್ಲಾಹ್) | 56 |
| 20 | ಪ್ರಾರ್ಥನೆಗಳು | 58 |
| 21 | ಮಾನವರೊಂದಿಗೆ ಸಹಾನುಭೂತಿ | 59 |
| 22 | ದಿವ್ಯ ದೂತರು (ಮಲಾಯಿಕ) | 60 |
| 23 | ಯಅ್ಜೂಜ್ ಮಅ್ಜೂಜ್ ಎಂದರೆ ಯಾರು ? | 62 |
| 24 | ಪ್ರಕಾಶದ ಕಾಲ | 63 |

# ಪ್ರಕಾಶಕರ ನುಡಿ

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗ಼ುಲಾಂ ಅಹ್ಮದ್ ಅಲೈಹಿಸ್ಸಲಾಮ್ ನಮ್ಮ ಪ್ರಿಯ ನೇತಾರರಾದ ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆತ್ಮೀಯ ಪುತ್ರರಾಗಿರುವರು. ಅಲ್ಲಾಹನು ಅವರನ್ನು ಈ ಕಾಲದಲ್ಲಿ ಮನುಕುಲದ ಮಾರ್ಗದರ್ಶನಕ್ಕಾಗಿ ವಾಗ್ದತ್ತ ಮಸೀಹ್ ಮತ್ತು ಅಂತಿಮ ಕಾಲಘಟ್ಟದ ಇಮಾಮರಾಗಿ ನಿಯೋಜಿಸಿರುವನು.

ಅವರು ತಮ್ಮ ನಿಯೋಗದ ನಂತರ ಇಸ್ಲಾಮಿನ ಪರವಾಗಿ ಲೇಖನಿಯ ಮೂಲಕ ತಮ್ಮ ಮಹತ್ತಾದ ಜಿಹಾದನ್ನು ಪ್ರಾರಂಭಿಸಿ ಅಲ್ಲಾಹನಿಂದ "ಸುಲ್ತಾನುಲ್ ಖಲಮ್" (ಲೇಖನಿಯ ಸುಲ್ತಾನ) ಎಂಬ ಬಿರುದನ್ನು ಪಡೆದರು. ಅವರ ಲಿಖಿತಗಳು ಲೋಕದಲ್ಲಿ ಮಹತ್ತಾದ ಪರಿವರ್ತನೆಯನ್ನು ಉಂಟುಮಾಡಿತು ಮತ್ತು ಇಸ್ಲಾಮೀ ಲೋಕದಲ್ಲಿ ಒಂದು ಹೊಸ ಜೀವಿತವನ್ನು ಸೃಷ್ಟಿಸಿತು. ಇದರಿಂದ ಮುಸ್ಲಿಮರ ಬಾಡಿದ ಮುಖಗಳು ಪ್ರಸನ್ನತೆಯಿಂದ ತುಂಬಿದವು.

ಯಥಾರ್ಥ ಇಸ್ಲಾಮಿನ ಧ್ವಜವಾಹಕರಾದ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು 1889ರಲ್ಲಿ ಅಲ್ಲಾಹನ ಇಚ್ಛೆ ಪ್ರಕಾರ ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದರು. ಹೀಗೆ ಲೋಕದಲ್ಲಿ ಇಸ್ಲಾಮಿನ ಪುನರುಜ್ಜೀವನದ ಆಕಾಶೀಯ ಯೋಜನೆ ವ್ಯವಸ್ಥಾಪಿತವಾಗಿ ಪ್ರಾರಂಭವಾಯಿತು. 1989ರಲ್ಲಿ ಅಹ್ಮದಿಯಾ ಜಮಾಅತಿನ ಅನುಗ್ರಹೀತ ಶತವಾರ್ಷಿಕ ಸಮಾರಂಭದ ಸಂದರ್ಭದಲ್ಲಿ ಜಾಗತಿಕ ಮಟ್ಟದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಯ್ದ ಲಿಖಿತಗಳ ಭಾಷಾಂತರವನ್ನು ಲೋಕದ ವಿವಿಧ ಭಾಷೆಗಳಲ್ಲಿ ಪ್ರಕಟಿಸಲಾಗಿತ್ತು.

ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸರ(ಅಯ್ಯದಹುಲ್ಲಾಹ್) ಅನುಮತಿ ಮತ್ತು ಮಂಜೂರಾತಿಯಿಂದ ಜಮಾಅತಿನ ಸಹೋದರರ ಆವಶ್ಯಕತೆಯನ್ನು ಮುಂದಿರಿಸಿ ನಝ಼ಾರತ್ ನಶ್‌ರೋ ಇಶಾಅತ್ ಖಾದಿಯಾನ್ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಯ್ದ ಲಿಖಿತಗಳನ್ನು ಜನಸಾಮಾನ್ಯರ ಪ್ರಯೋಜನಕ್ಕಾಗಿ ಪ್ರಕಟಿಸುತ್ತಿದೆ. ಅಲ್‌ಹಮ್ದುಲಿಲ್ಲಾಹ್.

ಅಲ್ಲಾಹನು ಈ ಪುಸ್ತಕದ ಪ್ರಕಾಶನವನ್ನು ಎಲ್ಲ ರೀತಿಯಲ್ಲಿ ಅನುಗ್ರಹೀತವನ್ನಾಗಿ ಮಾಡಲಿ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪರಿಶುದ್ಧ ಬರಹಗಳಿಂದ ಸರಿಯಾದ ಪ್ರಯೋಜನ ಪಡೆಯಲು ನಮಗೆಲ್ಲರಿಗೂ ಸೌಭಾಗ್ಯ ನೀಡಲಿ. ಆಮೀನ್

ವಿನೀತ

ಹಾಫಿಝ಼್ ಮಖ಼್ದೂಮ್ ಶರೀಫ್

**ನಾಝ಼ಿರ್ ನಶ್ರೋ ಇಶಾಅತ್ ಖಾದಿಯಾನ್**

# ಮುನ್ನುಡಿ

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (1835–1908) ಅಲ್ಲಾಹನಿಂದ ನಿಯುಕ್ತರಾದ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಭವಿಷ್ಯ ನುಡಿದ ಅಂತಿಮ ಕಾಲದ ಧರ್ಮಸುಧಾರಕ ತಾನೆಂದು ವಾದಿಸಿದ ನಂತರ ನೂರ ಇಪ್ಪತ್ತೈದು ವರ್ಷಗಳು ದಾಟಿಹೋಗಿರುವುವು. ಈ ಕಾಲಾವಧಿಯಲ್ಲಿ ಅಲ್ಲಾಹನ ಸಹಾಯ ಮತ್ತು ನೆರವಿನಿಂದ ಅತ್ಯಂತ ಪ್ರತಿಕೂಲ ಪರಿಸ್ಥಿತಿಗಳು ಮತ್ತು ಎಲ್ಲ ರೀತಿಯ ವಿರೋಧಗಳನ್ನು ಎದುರಿಸಬೇಕಾಗಿ ಬಂದರೂ ಅಹ್ಮದಿಯಾ ಜಮಾಅತ್ ಲೋಕದ ಎಲ್ಲ ಭಾಗಗಳಲ್ಲಿ ತ್ವರಿತವಾಗಿ ವೃದ್ಧಿಗೊಳ್ಳುತ್ತಾ ಇದ್ದು ಈಗ 209 ದೇಶಗಳಲ್ಲಿ ಸ್ಥಾಪಿತವಾಗಿದೆ.

ಅಹ್ಮದಿಯಾ ಜಮಾಅತಿನ ಸಂದೇಶ, ಅದರ ಮೌಲ್ಯಗಳು ಮತ್ತು ಅದರ ಕಾರ್ಯಕ್ರಮಗಳನ್ನು ಅರಿತುಕೊಳ್ಳಲಿಕ್ಕಿರುವ ಉತ್ತಮ ಮತ್ತು ಸ್ಪಷ್ಟವಾದ ಮಾರ್ಗ ಹಝ್ರತ್ ಮಸೀಹ್ ಮೌಊದರ[ಅ] (ವಾಗ್ದತ್ತ ಮಸೀಹ್) ಲಿಖಿತಗಳನ್ನು ನಿಷ್ಪಕ್ಷಪಾತಿಯಾಗಿ ಅಧ್ಯಯನ ಮಾಡುವುದಾಗಿದೆ.

ಈ ಪುಸ್ತಕದಲ್ಲಿ ಅವರ ಗ್ರಂಥಗಳಿಂದ ಆಯ್ದ ಕೆಲವು ಗದ್ಯ ಮತ್ತು ಪದ್ಯ ಭಾಗಗಳು ಇವೆ. ಇವು ಧರ್ಮದ ಮೂಲ ತತ್ವಗಳು ಮತ್ತು ಜಮಾಅತಿನ ಅಧ್ಯಾಪನೆಗಳ ಮೇಲೆ ಪ್ರಕಾಶ ಬೀರುತ್ತವೆ. ಈ ಪುಸ್ತಕದ ಅಧ್ಯಯನದಿಂದಾಗಿ ಅವರು ಬರೆದಿರುವ ಎಂಬತ್ತಕ್ಕಿಂತಲೂ ಹೆಚ್ಚು ಗ್ರಂಥಗಳ ಬಗ್ಗೆ ಓದುಗರಿಗೆ ಒಂದು ಅಭಿಪ್ರಾಯ ಉಂಟಾಗುವುದರೊಂದಿಗೆ ಅವರ ಹೃದಯ ಮತ್ತು ಆತ್ಮಗಳನ್ನು ಅದು ಪ್ರಕಾಶಿಸಲಿ ಎಂದು ನಾವು ಆಶಿಸುತ್ತೇವೆ.

ವಿವಿಧ ಹೆಸರುಗಳಿಂದ ಮತ್ತು ವಿವಿಧ ಪದವಿಗಳಿಂದ ವಿವಿಧ ಧರ್ಮೀಯರು ಪ್ರತೀಕ್ಷಿಸುತ್ತಿದ್ದ ಧರ್ಮಸುಧಾರಕ ತಾನೆಂದು ಈ ಸಂಘಟನೆಯ ಸ್ಥಾಪಕ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ವಾದಿಸಿದರು. ಹಿಂದುಗಳು ಕಲ್ಕಿ ಅವತಾರವನ್ನೂ ಕ್ರೈಸ್ತರು ಯೇಸುಕ್ರಿಸ್ತರ ಪುನರಾಗಮನವನ್ನೂ ಬೌದ್ಧರು ಮಹಾತ್ಮ ಬುದ್ಧರ ಪುನರಾಗಮನವನ್ನೂ ಮುಸ್ಲಿಮರು ಇಮಾಮ್ ಮಹ್‌ದೀ ಮತ್ತು ಮಸೀಹ್ ಮೌಊದರನ್ನೂ ಪ್ರತೀಕ್ಷಿಸುತ್ತಿದ್ದರು. ವಿವಿಧ ಭವಿಷ್ಯವಾಣಿಗಳ ಪ್ರಕಾರ ಬರಲಿರುವ ವ್ಯಕ್ತಿ ಒಬ್ಬನೇ ಒಬ್ಬ ಎಂದೂ ಆ ಒಬ್ಬ ವ್ಯಕ್ತಿಯೇ ಪ್ರತಿಯೊಂದು ಧರ್ಮದವರಿಗೆ ವಿವಿಧ ಹೆಸರು ಮತ್ತು ಪದವಿಗಳಿಂದ ವಾಗ್ದಾನ ನೀಡಲ್ಪಟ್ಟ

ಧರ್ಮೋದ್ಧಾರಕರನ್ನು ಪ್ರತಿನಿಧೀಕರಿಸುವರೆಂದೂ ಹಾಗೆ ಆಗಮಿಸುವ ಧರ್ಮೋದ್ಧಾರಕರ ಆಗಮನದ ಉದ್ದೇಶ ವಿವಿಧ ಧರ್ಮದ ಜನರನ್ನು ಒಂದೇ ಒಂದು ಜಾಗತಿಕ ಧರ್ಮದಲ್ಲಿ ಜಮಾಯಿಸುವುದಾಗಿದೆಯೆಂದೂ ಹಾಗೆ ಆಗಮಿಸುವ ಧರ್ಮೋದ್ಧಾರಕ ಹಝ್ರತ್ ಮುಹಮ್ಮದ್ ಪೈಗಂಬರರ[ಸ] (ಅವರ ಮೇಲೆ ಅಲ್ಲಾಹನ ಇಷ್ಟಾಶೀರ್ವಾದಗಳೂ ಶಾಂತಿಯೂ ಸುರಿಯಲಿ) ಹಿಂಬಾಲಕನಾಗಿರುವರೆಂದೂ ಅವರು ಸ್ಪಷ್ಟಪಡಿಸಿದರು.

ಅವರ ಆಗಮನದ ಉದ್ದೇಶ ಕೊನೆಯ ಮತ್ತು ಪರಿಪೂರ್ಣ ಧರ್ಮಸಂಹಿತೆಯಾದ ಇಸ್ಲಾಮ್ ಧರ್ಮದ ಪತಾಕೆಯಡಿಯಲ್ಲಿ ಸಕಲ ಮನುಕುಲವನ್ನು ಒಟ್ಟುಸೇರಿಸುವುದಾಗಿದೆ. ಮನುಕುಲ ಪ್ರತೀಕ್ಷಿಸುತ್ತಿದ್ದ ಶಾಂತಿ ಮತ್ತು ಮೈತ್ರಿಯ ಜಾಗತಿಕ ಧರ್ಮ ಸ್ಥಾಪನೆಯ ಸುವರ್ಣ ಕಾಲ ತನ್ನ ಆಗಮನದ ನಂತರದ ಕಾಲವೆಂದು ಅವರು ಘೋಷಿಸಿದ್ದರು.

ಅವರು ಕ್ರಿಸ್ತಶಕ 1889ರಲ್ಲಿ ಅಲ್ಲಾಹನಿಂದ ಈ ದೈವಿಕ ಜಮಾಅತಿನ ಸ್ಥಾಪನೆಗಾಗಿ ನಿಯುಕ್ತರಾದರು. ಅವರ ಆಗಮನದ ಉದ್ದೇಶಲಕ್ಷ್ಯಗಳನ್ನು ಈಡೇರಿಸಲಿಕ್ಕಾಗಿ ಈ ಜಮಾಅತ್ ಸ್ಥಾಪಿತವಾಯಿತು. ಅವರು ಕ್ರಿಸ್ತಶಕ 1889ನೇ ಮಾರ್ಚ್ 23ನೇ ದಿನಾಂಕ ಪಂಜಾಬಿನ ಒಂದು ಪಟ್ಟಣವಾದ ಲುಧಿಯಾನದಲ್ಲಿ ತನ್ನ ಶಿಷ್ಯರಿಂದ ತನ್ನ ಎಲ್ಲ ವಾದಗಳನ್ನು ಒಪ್ಪಿ ನಿಷ್ಠೆಯಿಂದ ನಡೆಯುವ ಬಗ್ಗೆ ಪ್ರತಿಜ್ಞೆಗಳನ್ನು ಸ್ವೀಕರಿಸಿದರು. (ಇದನ್ನು ಅರಬಿ ಭಾಷೆಯಲ್ಲಿ "ಬೈಅತ್" ಎಂದು ಹೇಳಲಾಗುತ್ತದೆ.) ಈ ರೀತಿ ಈ ಜಮಾಅತ್ ಪ್ರಾರಂಭಗೊಂಡುದನ್ನು ಪ್ರಕಟಿಸಲಾಯಿತು.

1908ರಲ್ಲಿ ಅವರ ಮರಣದ ನಂತರ ಅವರ ಜಮಾಅತಿನಲ್ಲಿ ಖಿಲಾಫತಿನ ವ್ಯವಸ್ಥೆ ಸ್ಥಾಪಿತಗೊಂಡಿತು. ಭಾರತದ ವಿಭಜನೆ (ಕ್ರಿಸ್ತಶಕ 1947) ನಂತರ ಈ ಜಮಾಅತಿನ ಜಾಗತಿಕ ಕೇಂದ್ರ ಭಾರತದಿಂದ ಪಾಕಿಸ್ತಾನಕ್ಕೆ ಸ್ಥಳಾಂತರಿಸಲ್ಪಟ್ಟಿತು. ಅಲ್ಲಿ ಈ ಸಂಘಟನೆ "ರಬ್ವ" ಎಂಬ ಪಟ್ಟಣವನ್ನು ಸ್ಥಾಪಿಸಿತು.

ವಿರೋಧಿಗಳಿಂದ ಅಹ್ಮದಿಯಾ ಜಮಾಅತಿನ ವಿರುದ್ಧ ಶತ್ರುತ್ವದಿಂದ ಕೂಡಿದ ಅನೇಕ ಆಂದೋಲನಗಳು ನಡೆದಿದ್ದುವು. ಅವುಗಳಲ್ಲಿ ಹೆಚ್ಚು ಪ್ರಸಿದ್ಧವಾದುದು ಕ್ರಿಶ್ತಶಕ 1953, 1974 ಮತ್ತು 1984ರ ಆಂದೋಲನಗಳಾಗಿವೆ. ಕೊನೆಯ ಆಂದೋಲನ ಪಾಕಿಸ್ತಾನ ಸರಕಾರದ ಪೂರ್ಣ ಸಹಕಾರ ಮತ್ತು ಸಹಾಯದೊಂದಿಗೆ ಕಾರ್ಯಪ್ರವೃತ್ತವಾಗಿತ್ತು. ಪಾಕಿಸ್ತಾನದ ಆಗಿನ ಸರ್ವಾಧಿಕಾರಿ ಜನರಲ್ ಝಿಯಾಉಲ್ ಹಖ್

1984ರಲ್ಲಿ ತನ್ನ ಕುಖ್ಯಾತ ಆರ್ಡಿನೆನ್ಸ್ ನಂಬರ್ 20ನ್ನು ಜಾರಿಗೊಳಿಸಿ, ಅದರ ಮೂಲಕ ಈ ಜಮಾಅತಿನ ಪ್ರಗತಿಯನ್ನು ತಡೆಯುವ ಮತ್ತು ಅಹ್ಮದೀ ಮುಸ್ಲಿಮರನ್ನು ಮೂಲಭೂತ ಮಾನವೀಯ ಹಕ್ಕುಗಳಿಂದ ವಂಚಿತರನ್ನಾಗಿ ಮಾಡಲು ಅನೇಕ ಉಪಾಯಗಳನ್ನು ಅಳವಡಿಸಿದರು.

ಹೀಗೆ ಸಾವಿರಾರು ಅಹ್ಮದೀ ಮುಸ್ಲಿಮರನ್ನು ದೌರ್ಜನ್ಯ ಮತ್ತು ಹಿಂಸಾಚಾರಗಳಿಗೆ ಗುರಿಮಾಡಲಾಯಿತು. ಅವರ ಮೇಲೆ ಮೊಕದ್ದಮೆ ಹೂಡಲಾಯಿತು, ಅವರನ್ನು ಸೆರೆಮನೆಗಳಲ್ಲಿ ಮತ್ತು ಪ್ರತಿಬಂಧಕಾವಸ್ಥೆಯಲ್ಲಿ ಇಡಲಾಯಿತು, ಶಾರೀರಿಕವಾದ ಪೀಡನೆಗಳನ್ನು ನೀಡಲಾಯಿತು. ಮಾತ್ರವಲ್ಲ ಅನೇಕ ಅಹ್ಮದಿಯರ ಹತ್ಯೆ ಮಾಡಲಾಯಿತು.

ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತಿನ ವ್ಯಕ್ತಿಗಳು ಅತ್ಯಂತ ಸಹನೆಯಿಂದ ಅತುಲ್ಯವಾದ ತ್ಯಾಗ ಬಲಿದಾನಗಳನ್ನು ನೀಡಿ ಸರಕಾರದ ಮತ್ತು ಅದರ ಸಹಾಯಕರಾದ ಮತ ಪಂಡಿತರ ಪ್ರಯತ್ನಗಳನ್ನು ಪರಾಜಿತಗೊಳಿಸಿದರು.

ಈ ವಿರೋಧಗಳ ಪರಿಣಾಮವಾಗಿ ಲೋಕದ ಇನ್ನಿತರ ಭಾಗಗಳಲ್ಲಿರುವ ಅಹ್ಮದೀ ಮುಸ್ಲಿಮರಲ್ಲಿ ಅತುಲ್ಯವಾದೊಂದು ಆಧ್ಯಾತ್ಮಿಕ ಉತ್ಸಾಹ ಉಂಟಾಯಿತು ಮತ್ತು ಈ ಜಮಾಅತ್ ಹಿಂದಿಗಿಂತ ಹಲವು ಪಟ್ಟು ಹೆಚ್ಚಿನ ಪ್ರಗತಿಯನ್ನು ಪಡೆಯಿತು.

ಅಹ್ಮದಿಯಾ ಜಮಾಅತಿನ ಶತವಾರ್ಷಿಕ ಸಮಾರಂಭಗಳು ಜರಗಿದ 1989ರಲ್ಲಿ ದೇವನಿಗೆ ಕೃತಜ್ಞತೆಯರ್ಪಿಸಲು ರೂಪಿಸಿದ ಜಾಗತಿಕ ಕಾರ್ಯಕ್ರಮಗಳಲ್ಲಿ ಅತ್ಯಂತ ಪ್ರಧಾನವಾದುದು ಪವಿತ್ರ ಖುರ್‌ಆನಿನ ಆಯ್ದವಚನಗಳು, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಆಯ್ದ ವಚನಗಳು ಮತ್ತು ಹಝ್ರತ್ ಮಸೀಹ್ ಮೌಊದರ(ಅ) (ವಾಗ್ದತ್ತ ಮಸೀಹ್) ಆಯ್ದ ಲಿಖಿತಗಳ ಭಾಷಾಂತರಗಳನ್ನು ಒಂದು ನೂರಕ್ಕಿಂತ ಹೆಚ್ಚು ಭಾಷೆಗಳಲ್ಲಿ ಪ್ರಕಟಿಸುವುದಾಗಿತ್ತು. ಈ ಕಿರು ಪುಸ್ತಕ ಈ ಮಹತ್ತಾದ ಮತ್ತು ಅನುಗ್ರಹೀತ ಯೋಜನೆಯ ಭಾಗವಾಗಿದೆ.

**ನಝ್ಝಾರತ್ ಇಶಾಅತ್ ರಬ್ವ**

# ಮಹೋನ್ನತನಾದ ದೇವ

ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ.

*(ಕಿಶ್ತೀ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 21 – 22)*

ಆಲಿಸಲು ಇಚ್ಛಿಸುವವರೇ, ಆಲಿಸಿರಿ. ದೇವನು ನಿಮ್ಮಿಂದ ಬಯಸುವುದಾದರೂ ಏನನ್ನು? ಅವನು ಬಯಸುವುದು ಇಷ್ಟು ಮಾತ್ರವಾಗಿದೆ – ನೀವು ಅವನಿಗೆ ಸೇರಿದವರಾಗಬೇಕು. ನೀವು ಅವನಿಗೆ ಸರಿಸಾಟಿಗಳಾಗಿ ಭೂಮಿಯಲ್ಲಾಗಲೀ ಆಕಾಶದಲ್ಲಾಗಲೀ ಯಾರನ್ನೂ ಕಲ್ಪಿಸಬಾರದು. ಗತಕಾಲದಲ್ಲಿ ಜೀವಂತವಾಗಿ ಇದ್ದ ಹಾಗೆ ಈಗಲೂ ಜೀವಂತವಾಗಿ ಇರುವವನೇ ನಮ್ಮ ದೇವ. ಅವನು ಮುಂಚಿನ ಕಾಲದಲ್ಲಿ ಮಾತನಾಡುತ್ತಿದ್ದ ಹಾಗೆ ಈಗಲೂ ಮಾತನಾಡುತ್ತಾನೆ. ಅವನು ಹಿಂದಿನ ಕಾಲದಲ್ಲಿ ಆಲಿಸುತಿದ್ದ ಹಾಗೆ ಈಗಲೂ ಆಲಿಸುತ್ತಾನೆ. ಅವನು ಇಂದಿನ ಕಾಲದಲ್ಲಿ ಆಲಿಸುತ್ತಾನೆ ಆದರೆ ಮಾತನಾಡುವುದಿಲ್ಲ ಎಂಬ ಕಲ್ಪನೆ

ನಿರಾಧಾರವಾಗಿದೆ. ಅವನು ಇಂದೂ ಆಲಿಸುತ್ತಲೂ ಮಾತನಾಡುತ್ತಲೂ ಇದ್ದಾನೆ. ಅವನ ಗುಣಗಳು ಅನಾದಿ ಮತ್ತು ಅನಂತವಾಗಿವೆ. ಅವನ ಯಾವುದೇ ಗುಣ ಸ್ಥಗಿತವಾಗಿಲ್ಲ. ಅವನ ಯಾವುದೇ ಗುಣ ಎಂದೂ ಸ್ಥಗಿತವಾಗಲಾರದು. ಅವನು ಪುತ್ರನಾಗಲೀ ಪತ್ನಿಯಾಗಲೀ ಇಲ್ಲದ ಏಕನೂ ಸರಿಸಾಟಿಗಳಿಲ್ಲದವನೂ ಆಗಿರುವನು. ಅವನು ಅನುಪಮೇಯನೂ ಅದ್ವಿತೀಯನೂ ಆಗಿದ್ದಾನೆ..... ಅವನ ವಿಶಿಷ್ಟ ಗುಣಗಳಲ್ಲಿ ಯಾವುದಾದರೂ ಒಂದನ್ನು ಅವನ ಹಾಗೆಯೇ ಹೊಂದಿದವನು ಬೇರೆ ಯಾರೂ ಇಲ್ಲ..... ಅವನ ಯಾವುದೇ ಶಕ್ತಿ ಸಾಮರ್ಥ್ಯ ಕುಂದಿಹೋಗುತ್ತಾ ಇಲ್ಲ. ಅವನು ದೂರವಾಗಿದ್ದರೂ ಸಮೀಪವಾಗಿಯೇ ಇದ್ದಾನೆ. ಅವನು ಸಮೀಪವಾಗಿದ್ದರೂ ದೂರವಾಗಿಯೇ ಇದ್ದಾನೆ..... ಅವನು ಎಲ್ಲರಿಗಿಂತಲೂ ಮೇಲೆ ಇದ್ದಾನೆ. ಆದರೆ ಅವನ ಕೆಳಕಡೆ ಅವನಿಂದ ದೂರವಾಗಿ ಯಾರಾದರೂ ಇರುವರೆಂದು ಹೇಳಲಾರೆವು. ಅವನು ಆಕಾಶದಲ್ಲಿ ಸಿಂಹಾಸನಾರೂಢನಾಗಿದ್ದರೂ ಅವನು ಭೂಮಿಯಲ್ಲಿಲ್ಲವೆಂದು ಹೇಳಲಾರೆವು. ಅವನು ಎಲ್ಲ ಪರಿಪೂರ್ಣ ಗುಣಗಳನ್ನು ತನ್ನಲ್ಲಿ ಒಗ್ಗೂಡಿಸಿಕೊಂಡವನಾಗಿದ್ದಾನೆ. ಅವನು ಎಲ್ಲ ಸತ್ಯಸಂಧವಾದ ಸ್ತುತಿಗಳಿಗೆ ಅರ್ಹನಾಗಿದ್ದಾನೆ. ಅವನು ಎಲ್ಲ ಒಳಿತುಗಳ ಒರತೆಯಾಗಿದ್ದಾನೆ. ಅವನು ಎಲ್ಲ ಶಕ್ತಿಗಳನ್ನು ಒಟ್ಟಿಗೆ ಸೇರಿಸಿಕೊಳ್ಳುವವನಾಗಿದ್ದಾನೆ. ಅವನು ಎಲ್ಲ ಅನುಗ್ರಹಗಳ ಉಗಮಸ್ಥಾನವಾಗಿದ್ದಾನೆ. ಅವನು ಎಲ್ಲ ವಸ್ತುಗಳು ಮರಳಿ ಹೋಗುವ ಗಮ್ಯಸ್ಥಾನವೂ ಆಗಿದ್ದಾನೆ. ಅವನು ಎಲ್ಲ ಲೋಕಗಳ ಅಧಿಪತಿಯಾಗಿದ್ದಾನೆ. ಅವನು ಎಲ್ಲ ಶ್ರೇಷ್ಠತೆಗಳನ್ನು ಹೊಂದಿರುವವನೂ ಪ್ರತಿಯೊಂದು ನ್ಯೂನತೆ ಮತ್ತು ಬಲಹೀನತೆಯಿಂದ ಮುಕ್ತನೂ ಪರಿಶುದ್ಧನೂ ಆಗಿರುವನು. ಅವನು ಆಕಾಶದಲ್ಲೂ ಭೂಮಿಯಲ್ಲೂ ಇರುವವರೆಲ್ಲರಿಂದ ಆರಾಧಿಸಲ್ಪಡಲು ಅರ್ಹನು ಎಂಬ ವಿಶಿಷ್ಟತೆಯನ್ನು ಪಡೆದವನಾಗಿದ್ದಾನೆ.

*(ಅಲ್‌ವಸಿಯ್ಯತ್; ರೂಹಾನೀ ಖಝಾಇನ್ ಸಂಪುಟ 20, ಪುಟ 309 – 310)*

# ದೇವದರ್ಶನ

ತನ್ನ ಸಂಶಯವನ್ನು ನೀಗಿಸಿಕೊಳ್ಳದೆಯಿರುವವನು ಶಿಕ್ಷೆಯಿಂದ ರಕ್ಷಿತನಾಗಲಾರನು. ಈ ಲೋಕದಲ್ಲಿ ದೇವನನ್ನು ಕಾಣುವ ಭಾಗ್ಯವನ್ನು ಪಡೆಯದವನು ಪರಲೋಕದಲ್ಲಿಯೂ ಅಂಧಕಾರದಲ್ಲಿ ಬೀಳುವನು. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆಂದಿರುವನು:

مَن كَانَ فِي هٰذِهِ أَعْمَىٰ فَهُوَ فِي الْآخِرَةِ أَعْمَىٰ

*"ಈ ಲೋಕದಲ್ಲಿ ಅಂಧನಾಗಿರುವವನು ಪರಲೋಕದಲ್ಲಿಯೂ ಅಂಧನಾಗಿಯೇ ಇರುವನು." (17:73)*

*(ಕಿತಾಬುಲ್ ಬರಿಯ್ಯ; ರೂಹಾನೀ ಖ಼ಝಾಇನ್ ಸಂಪುಟ 13, ಪುಟ 65)*

## ದೇವನು ತನಗೆ ನಿಷ್ಠರಾದವರೊಂದಿಗೆ ವರ್ತಿಸುವ ರೀತಿ

ದೇವನು ಯಥಾರ್ಥವಾಗಿಯೂ ಬಹಳ ಬಲಿಷ್ಠನೂ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವನೂ ಆಗಿದ್ದಾನೆ. ಅವನ ಕಡೆಗೆ ಪ್ರೇಮ ಮತ್ತು ನಿಷ್ಠೆಯಿಂದ ಬಾಗುವವರು ಎಂದೂ ನಾಶಗೊಳಿಸಲ್ಪಡಲಾರರು. ಶತ್ರು ಹೀಗೆ ಹೇಳುತ್ತಾನೆ: "ನಾನು ನನ್ನ ಕುತಂತ್ರಗಳಿಂದ ಅವರನ್ನು ನಾಶಗೊಳಿಸುವೆನು" ಮತ್ತು ದುಷ್ಟಭಾವನೆಗಳನ್ನು ಹೊಂದಿರುವವನು ಅವರನ್ನು ನಜ್ಜುಗುಜ್ಜಾಗಿಸಲು ನಿರ್ಧರಿಸುತ್ತಾನೆ. ಆದರೆ ದೇವನು ಹೀಗೆ ಹೇಳುತ್ತಾನೆ: "ಎಲವೋ ಮೂರ್ಖ, ನೀನು ನನ್ನ ವಿರುದ್ಧ ಹೋರಾಡಬಲ್ಲೆಯಾ? ನನಗೆ ಪ್ರಿಯನಾದವನನ್ನು ನೀನು ಅಪಮಾನಕ್ಕೊಳಪಡಿಸಬಲ್ಲೆಯಾ?" ವಾಸ್ತವಿಕ ಸಂಗತಿಯೇನೆಂದರೆ, ಆಕಾಶದಲ್ಲಿ ನಿರ್ಧಾರಿತವಾಗದೆ ಯಾವುದೇ ಘಟನೆ ಭೂಮಿಯಲ್ಲಿ ಆಗಲಾರದು. ಲೋಕದಲ್ಲಿ ಯಾವುದೇ ಕೈಯು ಆಕಾಶದಲ್ಲಿ ಅದಕ್ಕೆ ಚಾಚಲು ವಿಧಿಸಲಾದ ಪರಿಧಿಗಿಂತ ಹೆಚ್ಚಿನ ದೂರಕ್ಕೆ ಚಾಚಲಾರದು. ಆದುದರಿಂದ ದೌರ್ಜನ್ಯದ ಯೋಜನೆಗಳನ್ನು ಹಮ್ಮಿಕೊಳ್ಳುವವರು ತಿಳಿಗೇಡಿಗಳಾಗಿದ್ದಾರೆ. ಅವರು ತಮ್ಮ ದುಷ್ಟ ಮತ್ತು ನಿಂದಾರ್ಹವಾದ ತಂತ್ರಗಳನ್ನು ಯೋಜಿಸುವಾಗ ಆ ಮಹತ್ತಾದ ಶಕ್ತಿಶಾಲಿ ದೇವನನ್ನು ನೆನಪಿನಲ್ಲಿಟ್ಟುಕೊಳ್ಳುವುದಿಲ್ಲ. ಅವನ ನಿರ್ಧಾರಕ್ಕೆ ಹೊರತಾಗಿ ಒಂದು ಎಲೆ ಸಹ ಬೀಳಲಾರದು. ಆದುದರಿಂದ ತಮ್ಮ ನಿರ್ಧಾರಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಅವರು ಯಾವಾಗಲೂ ಪರಾಜಿತರೂ ಅಪಮಾನಿತರೂ ಆಗುತ್ತಾರೆ. ಅವರ ದುಷ್ಕೃತ್ಯಗಳಿಂದ ಸತ್ಯವಂತರಿಗೆ ಯಾವುದೇ ಹಾನಿಯುಂಟಾಗುವುದಿಲ್ಲ. ಅದಕ್ಕೆ ಪ್ರತಿಯಾಗಿ ದೇವನ ಅನೇಕ ದೃಷ್ಟಾಂತಗಳು ಪ್ರಕಟವಾಗುತ್ತವೆ ಮತ್ತು ಜನರಿಗೆ ದೇವನ ಬಗ್ಗೆ ಜ್ಞಾನ ವರ್ಧಿಸುತ್ತದೆ. ಶಕ್ತಿಶಾಲಿಯೂ ಸರ್ವಸಮರ್ಥನೂ ಆದ ದೇವನು ಈ ಕಣ್ಣುಗಳಿಗೆ ಕಾಣಿಸಿಕೊಳ್ಳುವುದಿಲ್ಲವಾದರೂ ಅವನು ತನ್ನ ಅದ್ಭುತ ದೃಷ್ಟಾಂತಗಳಿಂದ ತನ್ನ ಇರುವಿಕೆಯನ್ನು ಬಹಿರಂಗಪಡಿಸುತ್ತಾನೆ.

*(ಕಿತಾಬುಲ್ ಬರ್ರಿಯಾ – ಮುಖದ್ದಿಮ; ರೂಹಾನೀ ಖಝಾಇನ್ ಸಂಪುಟ 13, ಪುಟ 19 – 20)*

ದೇವನು ಆಕಾಶ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ. ಎತ್ತರ ಮತ್ತು ತಗ್ಗುಗಳಲ್ಲಿ ಕಾಣುವ ಪ್ರತಿಯೊಂದು ವಿಧದ ಪ್ರಕಾಶ - ಅದು ಆತ್ಮಗಳಲ್ಲಿದ್ದರೂ ಶರೀರಗಳಲ್ಲಿದ್ದರೂ ಅದು ಮೂಲಭೂತವಾಗಿದ್ದರೂ

ಇನ್ನೊಂದರಿಂದ ಗಳಿಸಿದುದಾಗಿದ್ದರೂ ಅದು ಬಹಿರಂಗವಾಗಿದ್ದರೂ ರಹಸ್ಯವಾಗಿದ್ದರೂ ಅದು ಬೌದ್ಧಿಕವಾಗಿದ್ದರೂ ಶಾರೀರಿಕವಾಗಿದ್ದರೂ - ಅದು ಅವನ ಕೃಪೆಯ ಒಂದು ಕೊಡುಗೆಯಾಗಿದೆ. ಸಕಲಲೋಕಗಳ ಸೃಷ್ಟಿಕರ್ತನ ಕೃಪೆಯು ಎಲ್ಲ ವಸ್ತುಗಳನ್ನು ಆವರಿಸಿಕೊಂಡಿದೆಯೆಂದೂ ಯಾವುದೇ ವಸ್ತುವು ಅವನ ಕೃಪೆಯನ್ನು ಪಡೆಯುವುದರಿಂದ ವಂಚಿತವಾಗಿಲ್ಲವೆಂದೂ ಅದು ಸೂಚಿಸುತ್ತದೆ. ಅವನೇ ಎಲ್ಲ ಕೃಪೆಗಳ ಉದ್ಭವ ಸ್ಥಾನವಾಗಿದ್ದಾನೆ ಮತ್ತು ಎಲ್ಲ ಪ್ರಕಾಶಗಳ ಮೂಲಕಾರಣನೂ ಆಗಿದ್ದಾನೆ. ಅವನು ಎಲ್ಲ ಭಾಗ್ಯಾನುಗ್ರಹಗಳ ಕಾರಂಜಿಯೂ ಆಗಿದ್ದಾನೆ. ಅವನ ಅಸ್ತಿತ್ವವೇ ಸಕಲ ಲೋಕಗಳ ನೆಲೆನಿಲ್ಲುವಿಕೆಗೆ ಕಾರಣವಾಗಿದ್ದು ಮೇಲೆ ಮತ್ತು ಕೆಳಗೆ ಇರುವ ಎಲ್ಲ ವಸ್ತುಗಳ ಆಶ್ರಯದಾತನು ಅವನೇ ಆಗಿದ್ದಾನೆ. ಅವನೇ ಪ್ರತಿಯೊಂದು ವಸ್ತುವನ್ನು ಅಸ್ತಿತ್ವವಿಲ್ಲದಿರುವಿಕೆಯೆಂಬ ಅಂಧಕಾರದಿಂದ ಹೊರತಂದು ಅಸ್ತಿತ್ವವೆಂಬ ಉಡುಗೆಯನ್ನು ಅನುಗ್ರಹಿಸಿದನು. ಅವನ ಹೊರತು ಯಾವುದೇ ವಸ್ತು ಸ್ವತಃ ನೆಲೆನಿಲ್ಲಲಾರದು ಮತ್ತು ಶಾಶ್ವತವಾಗಿ ಉಳಿಯಲಾರದು. ಅವನ ಕೃಪೆಗೆ ಪಾತ್ರವಾಗದ್ದು ಯಾವುದೂ ಇಲ್ಲ. ಭೂಮಿ ಮತ್ತು ಆಕಾಶಗಳು, ಮನುಷ್ಯ ಮತ್ತು ಮೃಗಗಳು, ಕಲ್ಲು ಮತ್ತು ಮರಗಳು, ಆತ್ಮ ಮತ್ತು ಶರೀರಗಳು ಅವನ ಕೃಪೆಯಿಂದಲೇ ಅಸ್ತಿತ್ವಕ್ಕೆ ಬಂದಿವೆ.

*(ಬರಾಹೀನೆ ಅಹ್ಮದಿಯಾ ಭಾಗ 3; ರೂಹಾನೀ ಖ಼ಝ಼ಾಇನ್ ಸಂಪುಟ 1, ಪುಟ 191 – 192)*

ಹಮ್‌ದೋ ಸನಾ ಉಸೀ ಕೋ ಜೋ ಝ಼ಾತ್ ಜಾವಿದಾನೀ
ಹಮ್‌ಸರ್ ನಹೀ ಹೇ ಉಸ್‌ಕಾ ಕೋಯೀ ನ ಕೋಯೀ ಸಾನೀ
ಅರ್ಥ: ಎಲ್ಲ ಸ್ತುತಿಗಳು ಶಾಶ್ವತವಾದ ಅಸ್ತಿತ್ವವುಳ್ಳವನಿಗೆ ಸಲ್ಲುತ್ತವೆ.
ಅವನಿಗೆ ಸಮಾನರು ಯಾರೂ ಇಲ್ಲ; ಸರಿಸಾಟಿಗಳೂ ಇಲ್ಲ.

ಬಾಖ಼ೀ ವಹೀ ಹಮೇಶ ಗ೬ರ್ ಉಸ್‌ಕೇ ಸಬ್ ಹೈಂ ಫಾನೀ
ಗ೬ರೋಂ ಸೇ ದಿಲ್ ಲಗಾನ ಝೂಟೀ ಹೇ ಸಬ್ ಕಹಾನೀ
ಅರ್ಥ: ಅವನೇ ಸದಾಕಾಲ ನಾಶವಾಗದೆ ಉಳಿಯುವವನು.
ಅವನ ಹೊರತು ಎಲ್ಲರೂ ನಶ್ವರರು.
ಅನ್ಯರೊಂದಿಗೆ ಹೃದಯಬಂಧ ಸ್ಥಾಪಿಸುವುದು
ಸುಳ್ಳು ಕತೆಯ ಹಾಗೆ ನಿರರ್ಥಕ.

ಸಬ್ ಗೈರ್ ಹೈಂ ವಹೀ ಹೇ ಇಕ್ ದಿಲ್ ಕಾ ಯಾರೆ ಜಾನೀ
ದಿಲ್ ಮೇ ಮೆರೆ ಯಹೀ ಹೇ ಸುಬ್‌ಹಾನ ಮೈಯ್ಯರಾನೀ
ಅರ್ಥ: ಅವನೊಬ್ಬನೇ ನನ್ನ ಪ್ರಾಣಮಿತ್ರ.
ಉಳಿದವರೆಲ್ಲರೂ ನನಗೆ ಅನ್ಯರು
ನನ್ನ ಹೃದಯದಲ್ಲಿ ಇದು ಮಾತ್ರವಿದೆ.
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.

ಸಬ್ ಕಾ ವಹೀ ಸಹಾರಾ ರಹ್ಮತ್ ಹೇ ಆಶ್‌ಕಾರಾ
ಹಮ್ ಕೋ ವಹೀ ಪ್ಯಾರಾ ದಿಲ್‌ಬರ್ ವಹೀ ಹಮಾರಾ
ಅರ್ಥ: ಎಲ್ಲರಿಗೂ ಅವನೇ ಆಶ್ರಯದಾತನಾಗಿರುವನು –
ಅವನ ಕೃಪೆ ಬಹಿರಂಗವಾಗಿದೆ.
ಅವನು ನಮಗೆ ಅತ್ಯಂತ ಪ್ರಿಯಕರ,
ನಮ್ಮ ಹೃದಯಗಳಲ್ಲಿ ಅವನೇ ಇರುವನು.

ಉಸ್‌ಬಿನ್ ನಹೀ ಗುಝಾರಾ, ಗೈರ್ ಉಸ್‌ಕೇ ಝೂಟ್ ಸಾರಾ
ಯೆಃ ರೋಝ್ ಕರ್ ಮುಬಾರಕ್ ಸುಬ್‌ಹಾನ ಮಯ್ಯರಾನೀ

ಅರ್ಥ: ಅವನ ಹೊರತು ನಾವು ಜೀವಿಸಲಾರೆವು;
ಅವನ ಹೊರತು ಎಲ್ಲವೂ ಮಿಥ್ಯ
ಈ ದಿನವನ್ನು ಅನುಗ್ರಹೀತವನ್ನಾಗಿ ಮಾಡು –
ನನ್ನನ್ನು ವೀಕ್ಷಿಸುವವನು ಪರಿಶುದ್ಧನು.
*(ಮಹ್‌ಮೂದ್ ಕೀ ಆಮೀನ್; ರೂಹಾನೀ ಖಝಾಇನ್*
*ಸಂಪುಟ 12, ಪುಟ 319)*

ನಾನು ಸತ್ಯವಾಗಿ ನಿಮಗೆ ಒತ್ತಿ ಹೇಳುತ್ತೇನೆ: ಆತ್ಮಗಳಲ್ಲಿ ಸತ್ಯವನ್ನು ಹುಡುಕುವ ಯಥಾರ್ಥ ಅಭಿಲಾಷೆಯುಂಟಾದರೆ ಮತ್ತು ಹೃದಯಗಳಲ್ಲಿ ಜ್ಞಾನಾರ್ಜನೆಗಾಗಿರುವ ನಿಜವಾದ ದಾಹವುಂಟಾದರೆ ಜನರು ಈ ಮಾರ್ಗವನ್ನು ಹುಡುಕುವರು ಮತ್ತು ಈ ದಾರಿಯ ಅನ್ವೇಷಣೆಯಲ್ಲಿ ಮಗ್ನರಾಗುವರು. ಆದರೆ ಈ ದಾರಿ ಯಾವ ರೀತಿ ತೆರೆಯಲ್ಪಡುವುದು ಮತ್ತು ಪರದೆ ಯಾವ ರೀತಿ ಎತ್ತಲ್ಪಡುವುದು? ನಾನು ಎಲ್ಲ ಸತ್ಯಾನ್ವೇಷಿಗಳಿಗೆ

ದೃಢವಾಗಿ ಆಶ್ವಾಸನೆ ನೀಡಬಯಸುತ್ತೇನೆ: ಇಸ್ಲಾಮ್ ಮಾತ್ರ ಈ ಮಾರ್ಗದರ್ಶನದ ಶುಭವಾರ್ತೆ ನೀಡುತ್ತದೆ. ಆದರೆ ಇತರ ಜನಾಂಗಗಳು ದೇವ ಸಂದೇಶವಾಣಿಯ ಮೇಲೆ ಬಹುಕಾಲದಿಂದ ಬೀಗಮುದ್ರೆ ಹಾಕಿವೆ. ನೀವು ಚೆನ್ನಾಗಿ ತಿಳಿದುಕೊಳ್ಳಿರಿ: ಈ ಮುದ್ರೆ ದೇವನಿಂದ ಹಾಕಲ್ಪಟ್ಟಿಲ್ಲ. ಆದರೆ ಈ ಭಾಗ್ಯವನ್ನು ಹೊಂದದ ಮನುಷ್ಯನು ತನ್ನ ದೌರ್ಭಾಗ್ಯಕ್ಕೆ ಒಂದು ನೆವನ ಹುಡುಕುತ್ತಿದ್ದಾನೆ. ನೀವು ದೃಢವಾಗಿ ತಿಳಿದುಕೊಳ್ಳಿರಿ: ನಾವು ಕಣ್ಣುಗಳಿಲ್ಲದೆ ನೋಡುವುದು ಅಸಾಧ್ಯವಾಗಿರುವಂತೆ, ಕಿವಿಗಳಿಲ್ಲದೆ ಕೇಳುವುದು ಅಸಾಧ್ಯವಾಗಿರುವಂತೆ, ನಾಲಗೆಗಳಿಲ್ಲದೆ ಮಾತನಾಡುವುದು ಅಸಾಧ್ಯವಾಗಿರುವಂತೆ ನಾವು ಪವಿತ್ರ ಖುರ್‌ಆನಿನ ಸಹಾಯವಿಲ್ಲದೆ ಆ ಪ್ರಿಯ ಸ್ನೇಹಿತನ (ದೇವನ) ವದನವನ್ನು ಕಾಣುವುದು ಸಹ ಅಸಾಧ್ಯವಾಗಿರುತ್ತದೆ. ನಾನು ಯುವಕನಾಗಿದ್ದೆನು; ಈಗ ನಾನು ವೃದ್ಧನಾಗಿರುವೆನು. ಆದರೆ ಈ ಪರಿಶುದ್ಧವಾದ ಕಾರಂಜಿಯ (ಖುರ್‌ಆನಿನ) ಸಹಾಯವಿಲ್ಲದೆ ಸ್ಪಷ್ಟ ಜ್ಞಾನದ ಪಾತ್ರೆಯನ್ನು ಕುಡಿದ ಯಾರನ್ನಾದರೂ ನಾನು ನನ್ನ ದೀರ್ಘಕಾಲದ ಜೀವಿತಾವಧಿಯಲ್ಲಿ ಕಾಣಲಿಲ್ಲ.

*(ಇಸ್ಲಾಮೀ ಉಸೂಲ್ ಕೀ ಫಲಾಸಫೀ; ರೂಹಾನೀ ಖ಼ಝಾ಼ಇನ್ ಸಂಪುಟ 10, ಪುಟ 442 – 443)*

ಕಿಸ್ ಖದರ್ ಝ಼ಾಹಿರ್ ಹೇ ನೂರ್ ಉಸ್ ಮಬ್‌ದಉಲ್ ಅನ್‌ವಾರ್ ಕಾ
ಬನ್ ರಹಾ ಹೇ ಸಾರಾ ಆಲಮ್ ಆಯಿನ ಅಬ್‌ಸಾರ್‌ಕಾ
ಅರ್ಥ: ಎಲ್ಲ ಪ್ರಭೆಗಳ ಉಗಮಸ್ಥಾನವಾದ ಅವನ
ಪ್ರಭೆಯ ಪ್ರಕಟನೆ ಎಷ್ಟು ಉಜ್ವಲವಾಗಿದೆ!
ಪ್ರಪಂಚವೆಲ್ಲ ಕಣ್ಣುಗಳಿಗೆ ಅವನನ್ನು
ಪ್ರತಿಬಿಂಬಿಸುವ ಕನ್ನಡಿಯಾಗಿದೆ.

ಚಾಂದ್ ಕೋ ಕಲ್ ದೇಖ್‌ಕರ್ ಮೈ ಸಖ್ತ್ ಬೇಕಲ್ ಹೋಗಯಾ
ಕ್ಯುಂಕೆ ಕುಛ್ ಕುಛ್ ಥಾ ನಿಶಾನ್ ಉಸ್‌ಮೇ ಜಮಾಲೆ ಯಾರ್ ಕಾ
ಅರ್ಥ: ಚಂದ್ರನನ್ನು ನೋಡಿ ನಾನು ನಿನ್ನೆ ಬಹಳ ಪ್ರಭಾವಿತನಾದೆನು.
ಏಕೆಂದರೆ ನನ್ನ ಪ್ರಿಯಕರನ ಸೌಂದರ್ಯದ
ಕೆಲವು ಚಿಹ್ನೆಗಳು ಅದರಲ್ಲಿದ್ದುವು.

ಉಸ್ ಬಹಾರೆ ಹುಸ್ನ್ ಕಾ ದಿಲ್ ಮೇ ಹಮಾರೇ ಜೋಶ್ ಹೇ
ಮತ್ ಕರೋ ಕುಛ್ ಝಿಕ್ರ್ ಹಮ್‌ಸೇ ತುರ್ಕ್ ಯಾ ತಾತಾರ್ ಕಾ
ಅರ್ಥ: ಸೌಂದರ್ಯದ ಆ ವಸಂತದ ಬಗ್ಗೆ ನಮ್ಮ ಹೃದಯದಲ್ಲಿ ಆವೇಶವಿದೆ.
ತುರ್ಕಿಗಳ ಅಥವಾ ತಾತಾರಿಗಳ (ಸೌಂದರ್ಯದ)
ಬಗ್ಗೆ ನಮ್ಮೊಂದಿಗೆ ಪ್ರಸ್ತಾಪಿಸದಿರಿ.

ಹೇ ಅಜಬ್ ಜಲ್‌ವಹ್ ತೆರಿ ಖುದ್‌ರತ್ ಕಾ ಪ್ಯಾರೇ ಹರ್ ತರಫ್
ಜಿಸ್ ತರಫ್ ದೇಖೇಂ ವಹೀ ರಹ್ ಹೇ ತೆರೆ ದೀದಾರ್ ಕಾ
ಅರ್ಥ: ನನ್ನ ಪ್ರಿಯಕರನೇ, ನಿನ್ನ ಸಾಮರ್ಥ್ಯದ ಪ್ರಕಟಣೆ
ಎಲ್ಲ ಕಡೆಗಳಲ್ಲೂ ಕಾಣಿಸುತ್ತಿದೆ.
ಯಾವ ಕಡೆ ನೋಡಿದರೂ ಅಲ್ಲಿ
ನಿನ್ನನ್ನು ದರ್ಶಿಸುವ ದಾರಿ ಇರುತ್ತದೆ.

ಚಶ್ಮಯೆ ಖ಼ುರ್‌ಶೀದ್ ಮೇ ಮೌಜೇಂ ತೆರಿ ಮಶ್‌ಹೂದ್ ಹೇಂ
ಹರ್ ಸಿತಾರೆ ಮೇ ತಮಾಶಾ ಹೇ ತೆರಿ ಚಮ್‌ಕಾರ್ ಕಾ

ಅರ್ಥ: ಸೂರ್ಯನಲ್ಲೂ ನಿನ್ನ ಶಕ್ತಿಯ ಅಲೆಗಳನ್ನು ಕಾಣಬಹುದಾಗಿದೆ.
ಪ್ರತಿಯೊಂದು ನಕ್ಷತ್ರದಲ್ಲೂ ನಿನ್ನ ಮಿನುಗುವಿಕೆಯ ಚಮತ್ಕಾರವಿದೆ.

ತೂನೆ ಖ಼ುದ್ ರೂಹೋಂ ಪೇ ಅಪ್ನೇ ಹಾಥ್ ಸೇ ಛಿಡ್‌ಕಾ ನಮಕ್
ಉಸ್ ಸೇ ಹೇ ಶೋರೆ ಮುಹಬ್ಬತ್ ಆಶಿಖಾನೆ ಝ಼ಾರ್ ಕಾ
ಅರ್ಥ: ನೀನು ಸ್ವತಃ ನಿನ್ನ ಕೈಗಳಿಂದ ಆತ್ಮಗಳ ಮೇಲೆ
(ನಿನ್ನ ಪ್ರೇಮದ) ಉಪ್ಪು ಸಿಂಪಡಿಸಿರುವೆ.
ಆ ಕಾರಣದಿಂದ ಪ್ರೇಮಿಗಳ
ಪ್ರೇಮ ವಿಲಾಪಗಳು ಕೇಳಿ ಬರುತ್ತವೆ.

ಕ್ಯಾ ಅಜಬ್ ತೂನೆ ಹರ್ ಎಕ್ ಝ಼ುರ್ರ ಮೇ ರಖೇ ಹೇಂ ಖ಼ವಾಸ್
ಕೌನ್ ಪಢ್ ಸಕ್ತಾ ಹೇ ಸಾರಾ ದಫ್ತರ್ ಉನ್ ಅಸ್‌ರಾರ್‌ಕಾ

ಅರ್ಥ: ನೀನು ಪ್ರತಿಯೊಂದು ಕಣದಲ್ಲೂ ಎಂತಹ ವೈಶಿಷ್ಟ್ಯಗಳನ್ನು ಇರಿಸಿರುವೆ!
ಈ ಎಲ್ಲ ರಹಸ್ಯಗಳ ದಾಖಲೆಗಳನ್ನು ಓದಬಲ್ಲವರಾದರೂ ಯಾರು?

ತೇರಿ ಖುದ್‌ರತ್ ಕಾ ಕೋಯಿ ಭೀ ಇಂತಿಹಾ ಪಾತಾ ನಹೀಂ
ಕಿಸ್‌ಸೆ ಖುಲ್ ಸಕ್ತಾ ಹೇ ಪೇಚ್ ಇಸ್ ಉಖ್‌ದಯೆ ದುಶ್‌ವಾರ್ ಕಾ
ಅರ್ಥ: ನಿನ್ನ ಶಕ್ತಿ ಸಾಮರ್ಥ್ಯಗಳಿಗೆ ಯಾವುದೇ ಮಿತಿ ಇಲ್ಲ.
ನಿನ್ನ ಬಿಡಿಸಲಾಗದ ಕಗ್ಗಂಟನ್ನು ಬಿಡಿಸಿಕೊಳ್ಳಬಲ್ಲವರಾದರೂ ಯಾರು?

ಖ಼ೂಬ್‌ರೂಯೋಂ ಮೇ ಮಲಾಹತ್ ಹೇ ತೆರೆ ಇಸ್ ಹುಸ್ನ್ ಕೀ
ಹರ್ ಗುಲ್ ಓ ಗುಲ್‌ಶನ್ ಮೇ ಹೇ ರಂಗ್ ಉಸ್ ತೆರಿ ಗುಲ್‌ಝ಼ಾರ್ ಕಾ
ಅರ್ಥ: ನಿನ್ನ ಲಾವಣ್ಯದ ಸಿಹಿ ಎಲ್ಲ ಸೌಂದರ್ಯಗಳಲ್ಲೂ ಇದೆ.
ಪ್ರತಿಯೊಂದು ಗುಲಾಬಿಯಲ್ಲೂ ಹೂದೋಟದಲ್ಲೂ
ನಿನ್ನ ಸೌಂದರ್ಯದ ಬಣ್ಣವಿದೆ.

ಚಶ್ಮೆ ಮಸ್ತೆ ಹರ್ ಹಸೀನ್ ಹರ್‌ದಮ್ ದಿಖಾತಿ ಹೇ ತುಝೇ
ಹಾಥ್ ಹೇ ತೇರಿ ತರಫ್ ಹರ್ ಗೇಸೂಯೆ ಖ಼ಮ್‌ದಾರ್ ಕಾ

ಅರ್ಥ: ಪ್ರತಿಯೊಬ್ಬ ಸೌಂದರ್ಯವಂತನ ಉನ್ಮತ್ತವಾದ ಕಣ್ಣು
ನಿನ್ನನ್ನು ಪ್ರತಿಕ್ಷಣ ತೋರಿಸಿಕೊಡುತ್ತದೆ.
ಸುರುಳಿಗೂದಲನ್ನು ಹೊಂದಿದ ಪ್ರತಿಯೊಬ್ಬರ ಕೈ
ನಿನ್ನ ಕಡೆಗೆ ಸೂಚಿಸುತ್ತದೆ.
*(ಸುರ್ಮ ಚಶ್ಮಮಯೆ ಆರ್ಯಾ; ರೂಹಾನೀ ಖ಼ಝ಼ಾಇನ್ ಸಂಪುಟ 2, ಪುಟ 52)*

ಏಕದೇವ ವಿಶ್ವಾಸವೆಂಬುದು ಒಂದು ಪ್ರಕಾಶವಾಗಿದೆ. ಬಾಹ್ಯ ಮತ್ತು ಆಂತರಿಕ ಲೋಕದ ಎಲ್ಲ ಮಿಥ್ಯದೈವಗಳ ಅಸ್ತಿತ್ವದ ನಿರಾಕರಣೆಯ ನಂತರ ಹೃದಯದಲ್ಲಿ ಇದು ಉದ್ಭವವಾಗುತ್ತದೆ ಮತ್ತು ಜೀವದ ಕಣಕಣಗಳಲ್ಲೂ ಅದು ವ್ಯಾಪಿಸುತ್ತದೆ. ಇದು ದೇವನ ಮತ್ತು ಅವನ ಪ್ರವಾದಿಯ ಮೂಲಕವಲ್ಲದೆ ಕೇವಲ ಒಬ್ಬನ ಸ್ವಂತಶಕ್ತಿಯಿಂದ ಹೇಗೆ ತಾನೆ ಗಳಿಸಲು ಸಾಧ್ಯ? ಮನುಷ್ಯನು ಮಾಡಬೇಕಾದುದು ಇಷ್ಟೇ: ಆತನು ತನ್ನ ಆತ್ಮ ಪ್ರತಿಷ್ಠೆಯ ಮೇಲೆ ಮರಣವನ್ನು ಬರಿಸಬೇಕಾಗಿದೆ ಮತ್ತು “ನಾನು ಎಲ್ಲ

ಜ್ಞಾನಗಳ ಪೋಷಣೆ ಪಡೆದಿರುವೆನು" ಎಂಬ ಪೈಶಾಚಿಕ ದುರಹಂಕಾರವನ್ನು ಬಿಟ್ಟು ತಾನು ಏನೂ ತಿಳಿಯದವನು ಎಂದು ತನ್ನನ್ನು ಭಾವಿಸಿಕೊಂಡು ಪ್ರಾರ್ಥನೆಯಲ್ಲಿ ಮಗ್ನನಾಗಬೇಕಾಗಿದೆ. ಆಗ ಏಕದೇವ ವಿಶ್ವಾಸದ ಪ್ರಕಾಶ ದೇವನಿಂದ ಆತನ ಮೇಲೆ ಇಳಿದು ಬರುವುದು ಮತ್ತು ಅದು ಹೊಸದಾದೊಂದು ಜೀವಿತವನ್ನು ಆತನಿಗೆ ಅನುಗ್ರಹಿಸಿ ಕೊಡುವುದು.

*(ಹಖೀಖತುಲ್ ವಹ್ಯ್; ರೂಹಾನೀ ಖ಼ಝಾಇನ್ ಸಂಪುಟ 22, ಪುಟ 148)*

ಆ ದೇವನು (ಪವಿತ್ರ ಖುರ್‌ಆನ್ ಸೂಚಿಸಿರುವ ದೇವನು) ಅತ್ಯಂತ ವಿಶ್ವಾಸಾರ್ಹ ದೇವನಾಗಿದ್ದಾನೆ. ಅವನಿಗೆ ವಿಧೇಯರಾಗಿರುವವರಿಗಾಗಿ ಅವನು ಅದ್ಭುತ ಕಾರ್ಯಗಳನ್ನು ಮಾಡಿತೋರಿಸುತ್ತಾನೆ. ಲೋಕ ಅವರನ್ನು (ಸತ್ಯವಿಶ್ವಾಸಿಗಳನ್ನು) ನುಂಗಿಬಿಡಬೇಕೆಂದು ಬಯಸುತ್ತದೆ ಮತ್ತು ಪ್ರತಿಯೊಬ್ಬ ಶತ್ರುವು ಅವರನ್ನು ನೋಡಿ (ಕ್ರೋಧದಿಂದ) ಹಲ್ಲು ಕಡಿಯುತ್ತಾನೆ. ಆದರೆ ಅವರ ಸ್ನೇಹಿತನಾದ ದೇವನು ಪ್ರತಿಯೊಂದು ಅಪಾಯದಿಂದ ಅವರನ್ನು ಸಂರಕ್ಷಿಸುತ್ತಾನೆ ಮತ್ತು ಪ್ರತಿಯೊಂದು ರಂಗದಲ್ಲಿಯೂ ಅವರಿಗೆ ವಿಜಯ ನೀಡುತ್ತಾನೆ. ಅವನೊಂದಿಗೆ ಎಂದೂ ಸಂಬಂಧ ವಿಚ್ಛೇದಿಸದವನು ಎಷ್ಟು ಭಾಗ್ಯಶಾಲಿಯಾಗಿರುವನು!

*(ಕಿಶ್ತೀ ನೂಹ್; ರೂಹಾನೀ ಖ಼ಝಾಇನ್ ಸಂಪುಟ 19, ಪುಟ 20)*

# ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

ಮನುಷ್ಯನಿಗೆ ನೀಡಲಾದ ಆ ಶ್ರೇಷ್ಠ ಪ್ರಕಾಶ – ಎಂದರೆ ಪರಿಪೂರ್ಣ ಮನುಷ್ಯನಿಗೆ ನೀಡಲಾದ ಪ್ರಕಾಶ – ಅದು ದಿವ್ಯದೂತರಲ್ಲಿಯೂ ಇರಲಿಲ್ಲ. ಅದು ನಕ್ಷತ್ರಗಳಲ್ಲಾಗಲೀ ಚಂದ್ರನಲ್ಲಾಗಲೀ ಸೂರ್ಯನಲ್ಲಾಗಲೀ ಇರಲಿಲ್ಲ. ಅದು ಭೂಮಿಯ ಸಮುದ್ರಗಳಲ್ಲಾಗಲೀ ನದಿಗಳಲ್ಲಾಗಲೀ ಇರಲಿಲ್ಲ. ಅದು ಮಾಣಿಕ್ಯದಲ್ಲಾಗಲೀ ನೀಲಮಣಿಯಲ್ಲಾಗಲೀ ಮುತ್ತಿನಲ್ಲಾಗಲೀ ಇರಲಿಲ್ಲ. ಒಟ್ಟಾರೆ ಹೇಳುವುದಾದರೆ ಅದು ಭೂಮಿ ಮತ್ತು ಆಕಾಶದ ಇತರ ಯಾವುದೇ ವಸ್ತುವಿನಲ್ಲಿರಲಿಲ್ಲ. ಅದು ಮನುಷ್ಯನಲ್ಲಿ – ಎಂದರೆ ಪರಿಪೂರ್ಣ ಮನುಷ್ಯನಲ್ಲಿ ಮಾತ್ರವಿದ್ದಿತು. ಮನುಷ್ಯವರ್ಗದಲ್ಲಿ ಪರಿಪೂರ್ಣನೂ ಪರಿಪೂರ್ಣ ಸ್ವಭಾವಗಳನ್ನು ಹೊಂದಿದವನೂ ಅತ್ಯುನ್ನತ ಸ್ಥಾನ ಪಡೆದವನೂ ಮನುಷ್ಯರೆಲ್ಲರ ಅತಿ ಎತ್ತರದಲ್ಲಿರುವವನೂ ಆದ ವ್ಯಕ್ತಿ ನಮ್ಮ ನಾಯಕ, ನಮ್ಮ ಮಾಲಿಕ, ಪ್ರವಾದಿಗಳ ನೇತಾರ, ಎಲ್ಲ ಜೀವಿಗಳ ಸರದಾರ ಹಝ್‌ರತ್ ಮುಹಮ್ಮದ್ ಮುಸ್ತಫಾ[ಸ] ಆಗಿದ್ದಾರೆ. ಆ ಪ್ರಕಾಶ ಆ ಮನುಷ್ಯನಿಗೆ ನೀಡಲಾಗಿತ್ತು ಮತ್ತು ಅವರ ಹಾಗೆಯೇ ಅಲ್ಪ ಸ್ವಲ್ಪ ವರ್ಣವನ್ನು ಪಡೆದ ಎಲ್ಲರಿಗೂ ಅದು ನೀಡಲಾಯಿತು................. ಆದರೆ ಈ ಪ್ರಕಾಶ ವೈಭವಪೂರ್ಣವಾಗಿ ಕಂಡು ಬರುವುದು ನಮ್ಮ ನಾಯಕ, ನಮ್ಮ ಮಾಲಿಕ, ನಮ್ಮ ಮಾರ್ಗದರ್ಶಕ, ಸತ್ಯಸಂಧ, ಸತ್ಯಪ್ರಮಾಣಿತನಾಗಿರುವ, ದೇವನಿಂದ ಆಯ್ಕೆಗೊಂಡ ನಿರಕ್ಷರಿ ಪ್ರವಾದಿ ಹಝ್‌ರತ್ ಮುಹಮ್ಮದ್ ಮುಸ್ತಫಾ[ಸ] ಅವರಲ್ಲಾಗಿದೆ.

*(ಆಯಿನಯೇ ಕಮಾಲಾತೆ ಇಸ್ಲಾಮ್; ರೂಹಾನೀ ಖ಼ಝ಼ಾಇನ್ ಸಂಪುಟ 5, ಪುಟ 160 – 162)*

ನಾನು ಯಾವಾಗಲೂ ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್[ಸ] (ಸಾವಿರ ಸಾವಿರ ಇಷ್ಟಾಶೀರ್ವಾದಗಳೂ ಶಾಂತಿಯೂ ಅವರ ಮೇಲೆ ಸುರಿಯಲ್ಪಡಲಿ) ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು! ಅವರ ಉನ್ನತಸ್ಥಾನದ ಕೊನೆ ಎಲ್ಲಿದೆಯೆಂದು ತಿಳಿಯಲು ಸಾಧ್ಯವಿಲ್ಲ. ಅವರ ಪವಿತ್ರ ಪ್ರಭಾವದ ಅಂದಾಜು ಮಾಡುವುದು ಸಹ ಮನುಷ್ಯನಿಂದ ಸಾಧ್ಯವಾಗುವ

ಕೆಲಸವಲ್ಲ. ಅವರ ಸ್ಥಾನಮಾನಗಳನ್ನು ಗುರುತಿಸಬೇಕಾದ ರೀತಿಯಲ್ಲಿ ಗುರುತಿಸಲಾಗಿಲ್ಲ ಎಂಬುದು ದುಃಖಕರವಾದ ಸಂಗತಿಯಾಗಿದೆ. ಏಕಾದೇವಾರಾಧನೆ ಲೋಕದಿಂದ ಕಣ್ಮರೆಯಾಗಿದ್ದಾಗ ಅದನ್ನು ಮರಳಿ ತಂದ ಒಬ್ಬನೇ ಒಬ್ಬ ಪಹಿಲ್ವಾನ್ ಅವರೇ ಆಗಿದ್ದಾರೆ. ಅವರು ದೇವನೊಂದಿಗೆ ಅತ್ಯಂತ ಉನ್ನತ ಮಟ್ಟದ ಪ್ರೀತಿಯನ್ನು ಹೊಂದಿದ್ದರು. ಮಾನವರ ಹಿತಕಾಂಕ್ಷೆಯಲ್ಲಿ ಅತ್ಯುನ್ನತ ಮಟ್ಟವನ್ನು ತಲಪಿ ಅವರ ಜೀವ ಕರಗಿತು. ದೇವನಿಗೆ ಅವರ ಹೃದಯದ ರಹಸ್ಯ ತಿಳಿದಿದ್ದುದರಿಂದ ಅವರಿಗೆ ಎಲ್ಲ ಪ್ರವಾದಿಗಳ ಮೇಲೆಯೂ (ಅವರ) ಹಿಂದಿನ ಮತ್ತು ಅನಂತರದ ಎಲ್ಲರ ಮೇಲೆಯೂ ಅವನು ಶ್ರೇಷ್ಠತೆಯನ್ನು ಅನುಗ್ರಹಿಸಿದನು. ಅವರ ಅಭಿಲಾಷೆಗಳನ್ನು ಅವರ ಜೀವಿತದಲ್ಲಿಯೇ ಅವನು ಈಡೇರಿಸಿಕೊಟ್ಟನು.

*(ಹಖೀಖತುಲ್ ವಹ್ಯ್; ರೂಹಾನೀ ಖಝಾಇನ್*
*ಸಂಪುಟ 22, ಪುಟ 118 – 119)*

ನಮ್ಮ ಪೈಗಂಬರ್[ಸ] ಎಲ್ಲ ಪ್ರವಾದಿಗಳ ಹೆಸರುಗಳನ್ನು ತನ್ನಲ್ಲಿ ಸಮ್ಮಿಳಿತಗೊಳಿಸಿರುವರು. ಅವರು ಬೇರೆಲ್ಲ ಪ್ರವಾದಿಗಳ ವಿವಿಧ ಶ್ರೇಷ್ಠತೆಗಳನ್ನು ತನ್ನಲ್ಲಿ ಒಗ್ಗೂಡಿಸಿಕೊಂಡಿರುವರು. ಆದುದರಿಂದ ಅವರು ಮೂಸಾ ಆಗಿರುವರು; ಅವರು ಈಸಾ ಸಹ ಆಗಿರುವರು. ಅವರು ಆದಮ್, ಇಬ್ರಾಹೀಮ್, ಯೂಸುಫ್ ಮತ್ತು ಯಅ್‌ಖೂಬ್ ಸಹ ಆಗಿರುವರು (ಈ ಎಲ್ಲ ಪ್ರವಾದಿಗಳ ಮೇಲೆ ಅಲ್ಲಾಹನ ಶಾಂತಿ ಸುರಿಯಲಿ) ಇದರ ಕುರಿತು ಪವಿತ್ರ ಖುರ್‌ಆನಿನಲ್ಲಿ ಮಹೋನ್ನತನಾದ ಅಲ್ಲಾಹನು ಹೀಗೆ ಸೂಚಿಸಿರುವನು:

**"ಫಬಿಹುದಾಹುಮುಖ್‌ತದಿಹ್"**

*"ನೀನು ಅವರ ಮಾರ್ಗದರ್ಶನವನ್ನು ಅನುಸರಿಸು." (6:91)* ಎಂದರೆ:

"ಓ ಪ್ರವಾದಿ, ನೀನು ಆ ಎಲ್ಲ ಪ್ರವಾದಿಗಳ ವಿವಿಧ ವಿಶಿಷ್ಟ ಮಾರ್ಗದರ್ಶಕ ಉಪದೇಶಗಳನ್ನು ನಿನ್ನಲ್ಲಿ ಅಳವಡಿಸಿಕೊಳ್ಳು."

ಎಲ್ಲ ಪ್ರವಾದಿಗಳ ವಿಶಿಷ್ಟ ಶ್ರೇಷ್ಠತೆಗಳು ಹಝ್ರತ್ ಪೈಗಂಬರರಲ್ಲಿ[ಸ] ಸಮಾವೇಶಗೊಂಡಿದ್ದುವು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಯಥಾರ್ಥವಾಗಿ ಮುಹಮ್ಮದ್[ಸ] ಎಂಬ ಹೆಸರು ಸಹ ಅದನ್ನೇ ಸೂಚಿಸುತ್ತದೆ. ಮುಹಮ್ಮದ್[ಸ] ಎಂದರೆ "ಅತ್ಯಧಿಕ ಪ್ರಶಂಸಿಸಲ್ಪಟ್ಟವ" ಎಂದಾಗಿದೆ. ಎಲ್ಲ ಪ್ರವಾದಿಗಳ ವಿವಿಧ ಶ್ರೇಷ್ಠತೆಗಳು ಮತ್ತು

ವಿವಿಧ ವೈಶಿಷ್ಟ್ಯಗಳು ಅವರಲ್ಲಿ ಒಂದುಗೂಡಿಸಲ್ಪಟ್ಟಿವೆ ಎಂದು ಒಪ್ಪುವುದಾದರೆ ಮಾತ್ರ ಅತ್ಯಧಿಕ ಪ್ರಶಂಸೆಯ ಕಲ್ಪನೆ ಉಂಟಾಗಲು ಸಾಧ್ಯವಾಗಿದೆ.

*(ಆಯಿನಯೆ ಕಮಾಲಾತೆ ಇಸ್ಲಾಮ್; ರೂಹಾನೀ ಖ಼ಝಾಇನ್ ಸಂಪುಟ 5, ಪುಟ 343)*

ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ

*(ಅರ್‌ಬಈನ್ ನಂ. 1; ರೂಹಾನೀ ಖ಼ಝಾಇನ್ ಸಂಪುಟ 17, ಪುಟ 345)*

ನಾವು ನ್ಯಾಯ ನೀತಿಯ ದೃಷ್ಟಿಯಿಂದ ಎಲ್ಲ ಪ್ರವಾದಿಗಳನ್ನು ನೋಡಿದರೆ ಅವರಲ್ಲಿ ಎಲ್ಲರಿಗಿಂತಲೂ ಧೈರ್ಯಶಾಲಿಯೂ ಚೈತನ್ಯಶಾಲಿಯೂ ದೇವನಿಂದ ಅತ್ಯಂತ ಹೆಚ್ಚು ಪ್ರೀತಿಸಲ್ಪಟ್ಟವರೂ ಆದ ಪ್ರವಾದಿಯಾಗಿ ನಾವು ಒಬ್ಬರನ್ನು ಮಾತ್ರ ಕಾಣುತ್ತೇವೆ. ಅವರೇ ಪ್ರವಾದಿಗಳ ನಾಯಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ, ಅಹ್ಮದ್ ಮುಜ್ತಬಾ(ಸ).

*(ಸಿರಾಜೆ ಮುನೀರ್; ರೂಹಾನೀ ಖ಼ಝಾಇನ್ ಸಂಪುಟ 12, ಪುಟ 82)*

ಮರುಭೂಮಿಗಳಿಂದ ಕೂಡಿದ ಅರಬ್ ದೇಶದಲ್ಲಿ ಒಂದು ಆಶ್ಚರ್ಯಕರ ವಿದ್ಯಮಾನವುಂಟಾಯಿತು. ಲಕ್ಷಾಂತರ (ಆಧ್ಯಾತ್ಮಿಕವಾಗಿ) ಮೃತರಾದವರು ಕೆಲವೇ ದಿನಗಳಲ್ಲಿ ಜೀವಂತರಾದರು. ಹಲವಾರು ಪೀಳಿಗೆಗಳಿಂದ ಕೆಡುತ್ತಾ ಬಂದಿದ್ದವರು ದೈವಿಕ ವರ್ಣ ಪಡೆದರು. ಕಣ್ಣು ಕಾಣದ ಕುರುಡರು ದೃಷ್ಟಿಯನ್ನು ಪಡೆದರು. ಮೂಗರ ನಾಲಗೆಗಳಲ್ಲಿ ದೈವಿಕ ಜ್ಞಾನ ಪ್ರವಹಿಸಲು ತೊಡಗಿತು. ಹಿಂದೆಂದೂ ಯಾವುದೇ ಕಣ್ಣು ಕಂಡಿರದ, ಯಾವುದೇ ಕಿವಿ ಕೇಳಿರದ ಪರಿವರ್ತನೆ ಲೋಕದಲ್ಲಿ ಫಕ್ಕನೆ ಉಂಟಾಯಿತು. ಅದು ಉಂಟಾದುದಾದರೂ ಹೇಗೆಂದು ನೀವು ತಿಳಿದಿರುವಿರಾ? ದೇವನಲ್ಲಿ ತನ್ನನ್ನು ಲೀನಗೊಳಿಸಿದ ಒಬ್ಬ ದೇವಭಕ್ತನು ಅಂಧಕಾರಮಯ ರಾತ್ರಿಗಳಲ್ಲಿ

ಮಾಡುತ್ತಿದ್ದ ಪ್ರಾರ್ಥನೆಗಳೇ ಈ ಪರಿವರ್ತನೆಗಳನ್ನು ಉಂಟುಮಾಡಿದುವು. ಆ ಪ್ರಾರ್ಥನೆಗಳು ಲೋಕದಲ್ಲಿ ಉಂಟುಮಾಡಿದ ಅಲ್ಲೋಲ ಕಲ್ಲೋಲಗಳು ಮತ್ತು ಅವು ತೋರಿಸಿಕೊಟ್ಟ ಅತ್ಯಾಶ್ಚರ್ಯಕರ ಸಂಗತಿಗಳು ಆ ನಿರಕ್ಷರಿ ನಿಸ್ಸಹಾಯಕ ವ್ಯಕ್ತಿಯಿಂದ ಸಾಧಿಸಲ್ಪಡುವುದು ಅಸಾಧ್ಯವೆಂದೇ ತೋರುತ್ತಿದ್ದುವು. ಅಲ್ಲಾಹನೇ, ನೀನು ನಿನ್ನ ಇಷ್ಟಾಶೀರ್ವಾದಗಳನ್ನೂ ಶಾಂತಿಯನ್ನೂ ಅನುಗ್ರಹಗಳನ್ನೂ ಅವರ ಮೇಲೆಯೂ ಅವರ ಕುಟುಂಬದ ಮೇಲೆಯೂ ಅವರ ಅನುಯಾಯಿಗಳ ಮೇಲೆಯೂ ಅವರು ಈ ಸಮುದಾಯದ ಬಗ್ಗೆ ಹೊಂದಿದ್ದ ಕಾಳಜಿ ಮತ್ತು ಅದಕ್ಕಾಗಿ ಅನುಭವಿಸಿದ ದುಃಖ ಮತ್ತು ಕಷ್ಟದ ಪ್ರಮಾಣಕ್ಕನುಸಾರವಾಗಿ ಸುರಿಸು ಮತ್ತು ನೀನು ನಿನ್ನ ಕೃಪೆಯ ಪ್ರಕಾಶವನ್ನು ಅನಂತವಾಗಿ ಅವರ ಮೇಲೆ ಸುರಿಸುತ್ತಿರು.

*(ಬರಕಾತುದ್ದುಆ; ರೂಹಾನೀ ಖಝಾಇನ್ ಸಂಪುಟ 6, ಪುಟ 10 – 11)*

ದೇವನಿಂದ ಆಯ್ಕೆಗೊಂಡು ಪ್ರವಾದಿಯಾಗಿ ಆಗಮಿಸಿದ ಮುಹಮ್ಮದ್ ಪೈಗಂಬರ್(ಸ) ಹೊರತು ಬೇರೆ ಯಾವುದೇ ಪ್ರವಾದಿಯಾಗಲೀ ಶಿಫಾರಸುಗಾರನಾಗಲೀ ಈಗ ಸಕಲ ಆದಮ್ ಸಂತತಿಗಳಿಗೆ ಇಲ್ಲ. ಆದುದರಿಂದ ಉನ್ನತ ಅಂತಸ್ಸನ್ನೂ ಶ್ರೇಯಸ್ಸನ್ನೂ ಪಡೆದವರಾದ ಈ ಪ್ರವಾದಿಯೊಂದಿಗೆ ನಿಷ್ಠಾವಂತ ಪ್ರೇಮವನ್ನು ಬೆಳೆಸಿರಿ. ನೀವು ಮೋಕ್ಷವನ್ನು ಗಳಿಸುವವರಲ್ಲೊಬ್ಬರೆಂದು ಆಕಾಶದಲ್ಲಿ ಗಣಿಸಲ್ಪಡಬೇಕಾದರೆ ನೀವು ಯಾರಿಗೂ ಅವರಿಗಿಂತ (ಪೈಗಂಬರರಿಗಿಂತ) ಹೆಚ್ಚಿನ ಸ್ಥಾನವನ್ನು ಕಲ್ಪಿಸಬೇಡಿರಿ. ಮೋಕ್ಷವೆಂಬುದು ಮರಣಾನಂತರ ಮಾತ್ರ ಪ್ರಕಟವಾಗುವ ಒಂದು ಸಂಗತಿಯಲ್ಲವೆಂದು ನೀವು ನೆನಪಿಟ್ಟುಕೊಳ್ಳಿರಿ. ಯಥಾರ್ಥ ಮೋಕ್ಷ ತನ್ನ ಪ್ರಕಾಶವನ್ನು ಈ ಲೋಕದಕಲ್ಲಿಯೇ ತೋರಿಸಿಕೊಡುತ್ತದೆ. ಮೋಕ್ಷವನ್ನು ಗಳಿಸಿದವರು ಯಾರು? ದೇವನ ಅಸ್ತಿತ್ವ ಸತ್ಯವೆಂದೂ ಹಝ್ರತ್ ಮುಹಮ್ಮದ್(ಸ) ದೇವನ ಮತ್ತು ಎಲ್ಲ ಸೃಷ್ಟಿಗಳ ಮಧ್ಯೆ ಶಿಫಾರಸುಗಾರನಾಗಿರುವರೆಂದೂ ಆಕಾಶದ ಕೆಳಗಡೆ ಅವರಿಗೆ ಸಮಾನರಾದ ಪ್ರವಾದಿಗಳು ಯಾರೂ ಇಲ್ಲವೆಂದೂ ಪವಿತ್ರ ಖುರ್ಆನಿಗೆ ಸಮಾನವಾಗಿರುವ ಒಂದು ದೈವಿಕ ಗ್ರಂಥವಿಲ್ಲವೆಂದೂ ದೇವನು ಯಾವುದೇ ಪ್ರವಾದಿ ಸದಾ ಕಾಲ ಜೀವಂತವಾಗಿರಬೇಕೆಂದು ಬಯಸಿಲ್ಲವೆಂದೂ ಆದರೆ ಈ ಮಹಾನ್ ಪ್ರವಾದಿ ಸದಾಕಾಲ ಜೀವಂತವಾಗಿರುವರೆಂದೂ ದೃಢವಾಗಿ ನಂಬುವವನೇ ಮೋಕ್ಷ ಗಳಿಸಿದನಾಗಿದ್ದಾನೆ.

*(ಕಿಶ್ತೀ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 13 – 14)*

ಪ್ರವಾದಿಗಳಲ್ಲಿ ಶ್ರೇಷ್ಠರಾದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತದ ಸಂಭವಗಳನ್ನು ಅಧ್ಯಯನ ಮಾಡಿದರೆ ಅವರು ಆಂತರಿಕ ಪರಿಶುದ್ಧಿಯನ್ನು ಹೊಂದಿದವರಾಗಿದ್ದರೆಂದೂ ಒಳಗೊಂದು ಹೊರಗೊಂದು ಎಂಬ ದ್ವಿಗುಣವನ್ನು ಹೊಂದಿದವರಾಗಿರಲಿಲ್ಲವೆಂದೂ ಬಹಳ ಸ್ಪಷ್ಟವಾಗಿಯೂ ಪ್ರಕಾಶಮಾನವಾಗಿಯೂ ಎದ್ದು ತೋರುತ್ತದೆ. ಅವರು ದೇವನಿಗೆ ತಮ್ಮ ಜೀವವನ್ನು ಅರ್ಪಿಸಲು ಸದಾ ಸನ್ನದ್ಧರಾಗಿದ್ದರು. ಅವರು ಜನರ ಬಗ್ಗೆ ಭಯ ಮತ್ತು ಪ್ರತೀಕ್ಷೆಗಳಿಂದ ಸಂಪೂರ್ಣವಾಗಿ ವಿಮುಖರಾಗಿದ್ದು ಅಲ್ಲಾಹನ ಮೇಲೆ ಮಾತ್ರ ಭರವಸೆಯಿಡುವವರಾಗಿದ್ದರು. ಅವರು ದೇವನ ನಿರ್ಧಾರಗಳಿಗೆ ಮತ್ತು ಇಚ್ಛೆಗಳಿಗೆ ತನ್ನನ್ನು ಅಡಿಯಾಳನ್ನಾಗಿ ಮಾಡಿ, ಏಕದೇವವಿಶ್ವಾಸದ ಘೋಷಣೆಯಿಂದ ತನ್ನ ತಲೆಯ ಮೇಲೆ ಏನೆಲ್ಲ ಗಂಡಾಂತರ ಬರಬಹುದು ಮತ್ತು ಬಹುದೇವಾರಾಧಕರ ಕೈಗಳಿಂದ ಏನೆಲ್ಲ ದುಃಖ ಮತ್ತು ನೋವು ಅನುಭವಿಸಬೇಕಾಗಿ ಬರಬಹುದು ಎಂಬುದರ ಬಗ್ಗೆ ಸ್ವಲ್ಪವೂ ಲಕ್ಷಿಸದೆ ಕಾರ್ಯಪ್ರವೃತ್ತರಾಗಿದ್ದರು.

*(ಬರಾಹೀನೆ ಅಹ್ಮದಿಯಾ ಭಾಗ 2; ರೂಹಾನೀ ಖಝಾಇನ್ ಸಂಪುಟ 1, ಪುಟ 111)*

ಆರ್ಥಿಕ, ವೈಜ್ಞಾನಿಕ ಮತ್ತು ಸೈನಿಕ ಶಕ್ತಿಯನ್ನು ಪ್ರತಿಯೊಂದು ಜನಾಂಗದವರು ಅತ್ಯಧಿಕವಾಗಿ ಪಡೆದಿದ್ದಂತಹ ಒಂದು ಕಾಲದಲ್ಲಿ ನಿರ್ಧನ, ನಿರ್ಬಲ, ನಿಸ್ಸಹಾಯಕ ಹಾಗೂ ನಿರಕ್ಷರಿ ಬಡ ಅನಾಥನೊಬ್ಬ ಶತ್ರುಗಳಿಂದ ಖಂಡಿಸಲಾಗದ ಆಧಾರಗಳಿಂದಲೂ ಸ್ಪಷ್ಟವಾದ ಸಾಕ್ಷ್ಯಗಳಿಂದಲೂ ಎಲ್ಲರನ್ನೂ ನಿರುತ್ತರರನ್ನಾಗಿ ಮಾಡುವಂತಹ ಪ್ರಕಾಶಮಾನವಾದ ತತ್ತ್ವೋಪದೇಶಗಳನ್ನು ಈ ಲೋಕದಲ್ಲಿ ನೆಲೆಗೊಳಿಸಿದುದು ಮತ್ತು ಬುದ್ಧಿಶಾಲಿಗಳೆಂದೂ ತತ್ವಜ್ಞಾನಿಗಳೆಂದೂ ಕರೆಯಲ್ಪಟ್ಟು ಅಹಂಕಾರದಿಂದ ನಡೆದಾಡುತ್ತಿದ್ದವರ ತಪ್ಪುಗಳನ್ನು ಅವರ ಈ ತತ್ತ್ವೋಪದೇಶಗಳು ತೋರಿಸಿಕೊಟ್ಟದ್ದು ಅತ್ಯಾಶ್ಚರ್ಯಕರವಾದ ಒಂದು ಸಂಭವವಲ್ಲವೇ?

ಅವರು ನಿರ್ಬಲರೂ ನಿರ್ಧನರೂ ಆಗಿದ್ದರೂ ಎಂತಹ ಶಕ್ತಿಯನ್ನು ಗಳಿಸಿದರೆಂದರೆ ಅವರು ರಾಜರನ್ನು ಅವರ ಸಿಂಹಾಸನಗಳಿಂದ ಕೆಳಗೆ ಹಾಕಿ ಆ ಸಿಂಹಾಸನಗಳಲ್ಲಿ ಬಡವರನ್ನು ಪ್ರತಿಷ್ಠಾಪಿಸಿದರು. ಇದು ದೇವನ ಸಹಾಯವಲ್ಲವಾಗಿದ್ದರೆ ಮತ್ತೇನಾಗಿತ್ತು? ಬುದ್ಧಿ, ಜ್ಞಾನ, ಶಕ್ತಿ ಮತ್ತು ಬಲದಲ್ಲಿ ದೇವನ ಸಹಾಯವಿಲ್ಲದೆ ಲೋಕದ ಮೇಲೆ ಜಯಗಳಿಸುವುದು ಸಾಧ್ಯವೇ?

*(ಬರಾಹೀನೆ ಅಹ್ಮದಿಯಾ ಭಾಗ 2; ರೂಹಾನೀ ಖಝಾಇನ್ ಸಂ. 1, ಪುಟ 119)*

ಹಝ್ರತ್ ಪೈಗಂಬರ್(ಸ) ತಮ್ಮ ಪ್ರವಾದಿತ್ವ ವಾದದ ಬಗ್ಗೆ ಎಷ್ಟು ಸ್ಥಿರಚಿತ್ತರಾಗಿದ್ದರೆಂಬುದು ಗಮನಾರ್ಹ ಸಂಗತಿಯಾಗಿದೆ. ಸಾವಿರಾರು ಅಪಾಯಗಳು, ಲಕ್ಷಾಂತರ ಶತ್ರುಗಳು, ತಡೆಯೊಡ್ಡುವವರು ಮತ್ತು ಬೆದರಿಕೆ ಹಾಕುವವರು ಅವರಿಗೆದುರಾದರೂ ಅವರು ಆರಂಭಕಾಲದಿಂದ ತನ್ನ ಕೊನೆಯುಸಿರಿನ ತನಕ ಸ್ಥಿರಚಿತ್ತರಾಗಿದ್ದರು. ಅವರು ವರ್ಷಗಟ್ಟಲೆ ಕಾಲ ಕಷ್ಟಕಾರ್ಪಣ್ಯಗಳನ್ನೂ ನೋವನ್ನೂ ಅನುಭವಿಸಬೇಕಾಯಿತು. ಅವುಗಳು ಜಯದ ಬಗ್ಗೆ ನಿರಾಶೆಯನ್ನು ಉಂಟುಮಾಡುವಂತಹದ್ದಾಗಿದ್ದುವು. ಆ ಕಷ್ಟಗಳು ದಿನಗಳೆದಂತೆ ಹೆಚ್ಚಾಗುತ್ತಿದ್ದವು. ಅವುಗಳನ್ನು ಸಹಿಸಿಕೊಂಡು ಯಾವುದಾದರೂ ಲೌಕಿಕ ಲಾಭ ಗಳಿಸುವುದು ಊಹಿಸಲು ಸಹ ಅಸಾಧ್ಯವಾಗಿತ್ತು. ಅವರು ಪ್ರವಾದಿತ್ವವಾದ ಮಾಡಿದುದರಿಂದ ತನ್ನ ಹಿಂದಿನ ಬೆಂಬಲಿಗರನ್ನು ಸಹ ಕಳೆದುಕೊಂಡರು. ಅವರು ತಾನು ಪ್ರವಾದಿ ಎಂಬ ಒಂದು ಮಾತು ಹೇಳಿ ಲಕ್ಷಾಂತರ ವಿವಾದಗಳನ್ನು ಕೊಂಡುಕೊಂಡರು ಮತ್ತು ಸಾವಿರಾರು ಗಂಡಾಂತರಗಳನ್ನು ತನ್ನ ತಲೆಯ ಮೇಲೆ ಬೀಳುವಂತೆ ಆಹ್ವಾನಿಸಿದರು. ಅವರು ತನ್ನ ಸ್ವಂತ ಊರಿನಿಂದ ಹೊರಹಾಕಲ್ಪಟ್ಟರು. ಕೊಲೆಮಾಡಲು ಅವರನ್ನು ಬೆನ್ನಟ್ಟಲಾಯಿತು. ಅವರ ಮನೆ ಮತ್ತು ಸಾಧನ ಸಾಮಗ್ರಿಗಳು ನಾಶಗೊಳಿಸಲ್ಪಟ್ಟುವು. ಅವರಿಗೆ ವಿಷ ಹಾಕಿ ಕೊಲ್ಲಲು ಅನೇಕ ಪ್ರಯತ್ನಗಳು ನಡೆದುವು. ಅವರ ಹಿತೈಷಿಗಳಾಗಿದ್ದವರು ಸಹ ಅವರಿಗೆ ಕೇಡನ್ನು ಬಗೆಯತೊಡಗಿದರು. ಅವರ ಸ್ನೇಹಿತರಾಗಿದ್ದವರು ಶತ್ರುಗಳಾಗತೊಡಗಿದರು. ಅವರು ದೀರ್ಘಕಾಲ ಈ ಕಹಿಗಳನ್ನೆಲ್ಲ ಅನುಭವಿಸಬೇಕಾಯಿತು. ಇವುಗಳನ್ನೆಲ್ಲ ಸಹಿಸಿ ತಮ್ಮ ವಾದದಲ್ಲಿ ಸ್ಥಿರತೆಯಿಂದ ಇದ್ದುದು ಯಾವುದೇ ಕಪಟಿ ಅಥವಾ ಮೋಸಗಾರನ ಕೃತ್ಯವಾಗಿರಲು ಸಾಧ್ಯವಿಲ್ಲ.

*(ಬರಾಹೀನೆ ಅಹ್ಮದಿಯಾ ಭಾಗ 2; ರೂಹಾನೀ ಖ಼ಝ಼ಾಇನ್ ಸಂಪುಟ 1, ಪುಟ 108 – 109)*

ಮುಸ್ತಫಾ ಪರ್ ತೆರಾ ಬೇಹದ್ ಹೋ ಸಲಾಮ್ ಔರ್ ರಹ್ಮತ್
ಉಸ್ ಸೇ ಯೆಃ ನೂರ್ ಲಿಯಾ ಬಾರೆ ಖ಼ುದಾಯಾ ಹಮ್ ನೆ.
ಅರ್ಥ: ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಮೇಲೆ
ನಿನ್ನ ಅಪರಿಮಿತ ಶಾಂತಿಯೂ ಕೃಪೆಯೂ ಸುರಿಯಲಿ.
ದೇವಾ, ನಾವು ಅವರಿಂದಲೇ ಈ ಪ್ರಕಾಶವನ್ನು ಪಡೆದೆವು.

ರಬ್ತ್ ಹೇ ಜಾನೆ ಮುಹಮ್ಮದ್ ಸೇ ಮೆರಿ ಜಾನ್ ಕೋ ಮುದಾಮ್
ದಿಲ್ ಕೋ ವಹ್ ಜಾಮೆ ಲಬಾಲಬ್ ಹೇ ಪಿಲಾಯಾ ಹಮ್‌ನೆ.
ಅರ್ಥ: ನನ್ನ ಆತ್ಮ ಹಝ್‌ರತ್ ಮುಹಮ್ಮದ್ ಪೈಗಂಬರರ
ಆತ್ಮಕ್ಕೆ ಶಾಶ್ವತವಾಗಿ ಜೋಡಿಸಲ್ಪಟ್ಟಿದೆ.
ಆ ಪ್ರೇಮ ತುಂಬಿದ ಬಟ್ಟಲಿನಿಂದ
ಹೃದಯಕ್ಕೆ ನಾವು ಕುಡಿಸಿರುವೆವು.

ಉಸ್ ಸೇ ಬೆಹ್ತರ್ ನಝ಼ರ್ ಆಯಾ ನ ಕೊಯೀ ಆಲಮ್ ಮೇ
ಲಾ ಜರಮ್ ಗ್ಯೆರೋಂ ಸೇ ದಿಲ್ ಅಪ್ನಾ ಛುಡಾಯಾ ಹಮ್‌ನೆ.
ಅರ್ಥ: ಪ್ರಪಂಚದಲ್ಲಿ ಅವರಿಗಿಂತ ಶ್ರೇಷ್ಠರಾದ ಯಾರನ್ನೂ ಕಾಣಲಾಗಲಿಲ್ಲ.
ನಿಶ್ಚಯವಾಗಿಯೂ ಬೇರೆ ಎಲ್ಲರಿಂದಲೂ ನಾವು ನಮ್ಮ
ಹೃದಯ ಬಂಧನಗಳನ್ನು ಬಿಡಿಸಿಕೊಂಡಿರುವೆವು.

ಶಾನೆ ಹಖ್ ತೇರೆ ಶಮಾಇಲ್ ಮೇ ನಝ಼ರ್ ಆತೀ ಹೇ
ತೇರೇ ಪಾನೇ ಸೇ ಹೀ ಉಸ್ ಝ಼ಾತ್ ಕೋ ಪಾಯಾ ಹಮ್‌ನೆ.

ಅರ್ಥ: ನಿಮ್ಮ ಸದ್ಗುಣಗಳಲ್ಲಿ ದೇವನ ಮಹಿಮೆಯೇ ಕಾಣಿಸುತ್ತದೆ.
ನಿಮ್ಮನ್ನು ಪಡೆದುದರಿಂದಲೇ ಅವನನ್ನು (ದೇವನನ್ನು)
ಪಡೆಯಲು ನಮಗೆ ಸಾಧ್ಯವಾಯಿತು.

ಛೂಕೆ ದಾಮನ್ ತೆರಾ ಹರ್ ದಾಮ್ ಸೇ ಮಿಲ್‌ತೀ ಹೇ ನಜಾತ್
ಲಾ ಜರಮ್ ದರ್ ಪೇ ತೆರೆ ಸರ್ ಕೋ ಝುಕಾಯಾ ಹಮ್‌ನೆ.
ಅರ್ಥ: ದೇವಾ, ನಿನ್ನ ಆಶ್ರಯ ಪಡೆದವರಿಗೆ
ಎಲ್ಲ ವಿಪತ್ತುಗಳಿಂದ ಮುಕ್ತಿ ದೊರಕುತ್ತದೆ.
ನಿಶ್ಚಯವಾಗಿಯೂ ನಿನ್ನ ಬಾಗಿಲಲ್ಲಿ
ನಾವು ತಲೆ ಬಾಗಿರುವೆವು.

ದಿಲ್ ಬರಾ ಮುಝ್ ಕೋ ಖಸಮ್ ಹೇ ತೆರಿ ಯಕ್ತಾಯೀ ಕೀ
ಆಪ್ ಕೋ ತೇರಿ ಮುಹಬ್ಬತ್ ಮೇ ಭುಲಾಯಾ ಹಮ್ ನೆ.

ಅರ್ಥ: ನನ್ನ ಪ್ರಿಯಕರನಾದ ದೇವಾ, ನಾನು ನಿನ್ನ
ಏಕತ್ವದ ಪ್ರಮಾಣ ಮಾಡಿ ಹೇಳುತ್ತೇನೆ;
ನಿಮ್ಮ ಪ್ರೀತಿಯಲ್ಲಿ ಮುಳುಗಿ ನಾವು
ನಮ್ಮನ್ನೇ ಮರೆತು ಬಿಟ್ಟಿರುವೆನು.

ಬಖ್ದಾ ದಿಲ್ ಸೇ ಮೆರೆ ಮಿಟ್ ಗಯೆ ಸಬ್ ಗೈರೋಂಕೆ ನಖ್ಶ್
ಜಬ್ ಸೇ ದಿಲ್ ಮೇ ಯೆಃ ತೆರಾ ನಖ್ಶ್ ಜಮಾಯಾ ಹಮ್‌ನೆ.
ಅರ್ಥ: ದೇವಾ, ನಿನ್ನ ಪ್ರಮಾಣ. ನಿನ್ನ ಹೊರತು ಬೇರೆ
ಎಲ್ಲರ ಚಿತ್ರ ನನ್ನ ಹೃದಯದಿಂದ ಅಳಿಸಿ ಹೋಗಿವೆ.
ನಿನ್ನ ಚಿತ್ರ ನಮ್ಮ ಹೃದಯದಲ್ಲಿ ಅಚ್ಚೊತ್ತಿದ ನಂತರ ಹೀಗಾಗಿದೆ.

ಹಮ್ ಹುಯೆ ಖೈರೆ ಉಮಮ್ ತುಝ್ ಸೇ ಹೀ ಅಯೆ ಖೈರೆ ರುಸುಲ್
ತೇರೆ ಬಢ್‌ನೇ ಸೇ ಖದಮ್ ಆಗೆ ಬಢಾಯಾ ಹಮ್‌ನೆ.
ಅರ್ಥ: ಪ್ರವಾದಿಗಳಲ್ಲಿ ಶ್ರೇಷ್ಠರಾದ ಪೈಗಂಬರರೇ,
ನಾವು ನಿಮ್ಮಿಂದಲೇ ಶ್ರೇಷ್ಠ ಜನಾಂಗವಾದೆವು.
ನೀವು ಮುಂದೆ ನಡೆದುದರಿಂದಲೇ
ನಾವು ನಡೆಯಲು ತೊಡಗಿದೆವು.

ಆದ್‌ಮೀ ಝಾದ್ ತೋ ಕ್ಯಾ ಚೀಝ್ ಫರಿಶ್ತೇ ಭೀ ತಮಾಮ್
ಮದ್‌ಹ್ ಮೇ ತೇರಿ ವಹ್ ಗಾತೇ ಹೇಂ ಜೋ ಗಾಯಾ ಹಮ್‌ನೆ.
ಅರ್ಥ: ಮನುಷ್ಯರ ಮಾತನ್ನು ಬಿಡಿರಿ, ದಿವ್ಯದೂತರೂ ಕೂಡ
ನಿಮ್ಮ ಕೀರ್ತಿಗಾನವನ್ನು ನಾವು ಹಾಡಿದಂತೆಯೇ ಹಾಡುತ್ತಾರೆ.
*(ಆಯಿನಯೆ ಕಮಾಲಾತೆ ಇಸ್ಲಾಮ್; ರೂಹಾನೀ ಖಝಾಇನ್*
*ಸಂಪುಟ 5, ಪುಟ 225 – 226)*

ನನ್ನ ನೇತಾರರೂ ನನ್ನ ಮಾಲಿಕರೂ ಪ್ರವಾದಿಗಳೆಲ್ಲರಿಗೂ ಅಭಿಮಾನವಾಗಿರುವವರೂ ಸೃಷ್ಟಿಗಳಲ್ಲಿ ಶ್ರೇಷ್ಠರೂ ದೇವನಿಂದ ಆಯ್ಕೆಗೊಂಡವರೂ ಆದ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮಾರ್ಗವನ್ನು ನಾನು ಅನುಸರಿಸದೆ ಇರುತ್ತಿದ್ದರೆ ನನಗೆ ಈ ಅನುಗ್ರಹ ದೊರೆಯುವುದು ಅಸಾಧ್ಯವಾಗುತ್ತಿತ್ತು. ನಾನು ಪಡೆದುದೆಲ್ಲವೂ ಅವರನ್ನು

ಹಿಂಬಾಲಿಸಿದುದರಿಂದ ಪಡೆದುದಾಗಿವೆ. ಆ ಪೈಗಂಬರನ್ನು[ಸ] ಅನುಸರಣೆ ಮಾಡದೆ ದೇವನನ್ನು ತಲಪಲು ಮತ್ತು ಪರಿಪೂರ್ಣ ಜ್ಞಾನ ಗಳಿಸಲು ಯಾವುದೇ ಮನುಷ್ಯನಿಗೆ ಸಾಧ್ಯವಿಲ್ಲವೆಂದು ನಾನು ಅನುಭವಸಿದ್ಧವಾದ ಪರಿಪೂರ್ಣ ಜ್ಞಾನದಿಂದ ಅರಿತಿರುವೆನು. ಹಝ್‌ರತ್ ಪೈಗಂಬರನ್ನು[ಸ] ನಿಷ್ಠಾಪೂರ್ಣವಾಗಿ ಅನುಸರಿಸುವುದರಿಂದ ಎಲ್ಲದಕ್ಕಿಂತಲೂ ಮೊದಲು ನಿಮ್ಮ ಹೃದಯದಲ್ಲುಂಟಾಗುವ ಪರಿವರ್ತನೆ ಏನೆಂದು ನಿಮಗೆ ನಾನು ತಿಳಿಸಲು ಇಲ್ಲಿ ಬಯಸುತ್ತೇನೆ: ನಿಮ್ಮ ಹೃದಯ ನಿಷ್ಕಳಂಕವಾಗುತ್ತದೆ; ಐಹಿಕ ಸುಖದ ಪ್ರೇಮ ನಿಮ್ಮ ಹೃದಯಗಳಿಂದ ದೂರ ಸರಿಯುತ್ತದೆ. ನಿಮ್ಮ ಹೃದಯ ಅನಂತವಾದ ದೈವಿಕ ಆನಂದವನ್ನು ಆಶಿಸುತ್ತಾ ಇರುತ್ತದೆ. ಅನಂತರ ನಿಷ್ಕಳಂಕವಾದ ಹೃದಯದ ಕಾರಣದಿಂದ ಪವಿತ್ರ ಮತ್ತು ಪರಿಪೂರ್ಣವಾದ ದೈವಿಕ ಪ್ರೇಮ ಲಭಿಸುತ್ತದೆ. ಈ ವರದಾನಗಳೆಲ್ಲ ಹಝ್‌ರತ್ ಪೈಗಂಬರನ್ನು[ಸ] ಅನುಸರಣೆ ಮಾಡುವುದರಿಂದ ವಾರಿಸುಹಕ್ಕಾಗಿ ದೊರೆಯುತ್ತವೆ.

*(ಹಖೀಖತುಲ್ ವಹ್ಯ್; ರೂಹಾನೀ ಖ಼ಝ಼ಾಇನ್*
*ಸಂಪುಟ 22, ಪುಟ 64 – 65)*

ವಹ್ ಪೇಶ್‌ವಾ ಹಮಾರಾ ಜಿಸ್‌ಸೇ ಹೇ ನೂರ್ ಸಾರಾ
ನಾಮ್ ಉಸ್‌ಕಾ ಹೇ ಮುಹಮ್ಮದ್ ದಿಲ್‌ಬರ್ ಮೆರಾ ಯಹೀ ಹೇ
ಅರ್ಥ: ಎಲ್ಲ ಪ್ರಕಾಶಗಳು ಯಾರಿಂದ ಪ್ರಸಾರಿತವಾಗುತ್ತಿವೆಯೋ
ಅವರೇ ನಮ್ಮ ನೇತಾರ.
ಅವರ ಹೆಸರು ಮುಹಮ್ಮದ್[ಸ]
ನನ್ನ ಹೃದಯದಲ್ಲಿ ಅವರೇ ತುಂಬಿರುವರು.

ಸಬ್ ಪಾಕ್ ಹೇಂ ಪಯಂಬರ್ ಎಕ್ ದೂಸ್‌ರೇ ಸೇ ಬೆಹ್ತರ್
ಲೇಕ್ ಅಝ್ ಖ಼ುದಾಯೆ ಬರ್ತರ್ ಖೈರುಲ್‌ವರಾ ಯಹೀ ಹೇ
ಅರ್ಥ: ಎಲ್ಲ ಪ್ರವಾದಿಗಳು ಪರಿಶುದ್ಧರು;
ಕೆಲವರು ಬೇರೆ ಕೆಲವರಿಗಿಂತ ಶ್ರೇಷ್ಠರು.
ಆದರೆ ಸರ್ವೋನ್ನತನಾದ ಅಲ್ಲಾಹನ ಸೃಷ್ಟಿಗಳಲ್ಲಿ
ಇವರೇ ಅತ್ಯಂತ ಶ್ರೇಷ್ಠರು.

ಪಹ್ಲೋಂ ಸೇ ಖ್ಹೂಬ್‌ತರ್ ಹೇ ಖ್ಹೂಬೀ ಮೇ ಎಕ್ ಖಮರ್ ಹೇ
ಉಸ್‌ಪೆ ಹರ್ ಎಕ್ ನಝ್ಹರ್ ಹೇ ಬದರುದ್ದುಜಾ ಯಹೀ ಹೇ
ಅರ್ಥ: ಎಲ್ಲರಿಗಿಂತಲೂ ಶ್ರೇಷ್ಠ, ಶ್ರೇಷ್ಠತೆಯಲ್ಲಿ ಒಬ್ಬ ಚಂದ್ರನಾಗಿದ್ದಾರೆ.
ಪ್ರತಿಯೊಬ್ಬರ ನೋಟ ಅವರ ಮೇಲಿದೆ.
ಅವರು ಪೂರ್ಣಿಮೆಯ ಚಂದ್ರನಂತೆ
ಅಂಧಕಾರದಲ್ಲಿ ಬೆಳಕನ್ನು ಬೀರುತ್ತಿದ್ದಾರೆ.

ಪಹ್ಲೇ ತೋ ರಹ್ ಮೇ ಹಾರೆ ಪಾರ್ ಇಸ್‌ನೇ ಹೇಂ ಉತಾರೆ
ಮೇ ಜಾಉಂ ಉಸ್ ಕೇ ವಾರೆ ಬಸ್ ನಾಖುದಾ ಯಹೀ ಹೇ
ಅರ್ಥ: ಅವರಿಗಿಂತ ಮೊದಲಿನವರು ಹಾದಿಯಲ್ಲಿಯೇ ಸೋತರು.
ಆದರೆ ದಡ ತಲುಪಿಸಿ ಇಳಿಸಿದವರು ಅವರೇ ಆಗಿರುವರು.
ನಾನು ಅವರ ಕಡೆಗೆ ಹೋಗುವೆನು.
ದಡ ತಲುಪಿಸಬಲ್ಲ ನಾವಿಕರು ಅವರು ಮಾತ್ರವಾಗಿರುವರು.

ವಹ್ ಯಾರೆ ಲಾಮಕಾನಿ ವಹ್ ದಿಲ್‌ಬರೆ ನಿಹಾನೀ
ದೇಖಾ ಹೇ ಹಮ್‌ನೆ ಉಸ್ ಸೇ ಬಸ್ ರಹ್‌ನುಮಾ ಯಹೀ ಹೇ
ಅರ್ಥ: ಆ ಸರ್ವವ್ಯಾಪಿಯಾದ, ಹೃದಯ ಕುಹರಗಳಲ್ಲೂ ತುಂಬಿರುವ
ನಮ್ಮ ಪ್ರಿಯಕರನಾದ ದೇವನನ್ನು
ನಾವು ಅವರ ಮೂಲಕವೇ ನೋಡಿದೆವು;
ಅವರೇ ಏಕೈಕ ಮಾರ್ಗದರ್ಶಿಯಾಗಿರುವರು.

ವಹ್ ಆಜ್ ಶಾಹೆ ದೀನ್ ಹೇ ವಹ್ ತಾಜೆ ಮುರ್ಸಲೀನ್ ಹೇ
ವಹ್ ತಯ್ಯಿಬೋ ಅಮೀನ್ ಹೇ ಉಸ್ ಕಿ ಸನಾ ಯಹೀ ಹೇ
ಅರ್ಥ: ಅವರು ಇಂದು ಧರ್ಮದ ದೊರೆಯಾಗಿದ್ದಾರೆ,
ಅವರು ಪ್ರವಾದಿಗಳ ಕಿರೀಟವಾಗಿದ್ದಾರೆ.
ಅವರು ಪರಿಶುದ್ಧರೂ ಪ್ರಾಮಾಣಿಕರೂ ಆಗಿದ್ದಾರೆ -
ಇದೇ ಅವರ ಪ್ರಶಂಸೆಯಾಗಿದೆ.

ಆಂಖ್ ಉಸ್ ಕಿ ದೂರ್‌ಬೀನ್ ಹೇ ದಿಲ್ ಯಾರ್ ಸೇ ಖರೀನ್ ಹೇ
ಹಾಥೋಂ ಮೇ ಶಮಯೆ ದೀನ್ ಹೇ ಐನುಝ್ಝಿಯಾ ಯಹೀ ಹೇ
ಅರ್ಥ: ಅವರ ಕಣ್ಣುಗಳು ದೂರದರ್ಶಿಗಳಾಗಿವೆ.
ಅವರ ಹೃದಯವು ದೇವನಿಗೆ ಸಮೀಪವಾಗಿದೆ.
ಅವರ ಕೈಗಳಲ್ಲಿ ಧರ್ಮದ ಜ್ಯೋತಿಯಿದೆ;
ಅವರೇ ಪ್ರಕಾಶದ ಒರತೆಯಾಗಿದ್ದಾರೆ.

ಜೋ ರಾಝ್ ದೀನ್ ಥೆ ಭಾರೆ ಉಸ್‌ನೇ ಬತಾಯೆ ಸಾರೇ
ದೌಲತ್ ಕಾ ದೇನೆವಾಲಾ ಫರ್ಮಾನ್‌ರವಾ ಯಹೀ ಹೇ
ಅರ್ಥ: ಅವರೇ ನಮಗೆ ಮಹತ್ತಾದ ಎಲ್ಲ
ಧರ್ಮ ರಹಸ್ಯಗಳನ್ನು ಕಲಿಸಿ ಕೊಟ್ಟಿರುವರು.
ಸಂಪತ್ತನ್ನು ಹಂಚಿಕೊಡುವ ಕೊಡುಗೈ ದೊರೆ ಅವರೇ ಆಗಿದ್ದಾರೆ.

ಉಸ್ ನೂರ್ ಪರ್ ಫಿದಾ ಹೂಂ ಉಸ್ ಕಾ ಹೀ ಮೈ ಹುವಾ ಹೂಂ
ವಹ್ ಹೇ ಮೈ ಚೀಝ್ ಕ್ಯಾ ಹೂಂ ಬಸ್ ಫೈಸಲಾ ಯಹೀ ಹೇ
ಅರ್ಥ: ಆ ಪ್ರಕಾಶದಿಂದ ಆಕರ್ಷಿತನಾಗಿ
ನಾನು ಅವರದ್ದೇ ಆಗಿಬಿಟ್ಟಿದ್ದೇನೆ.
ಅವರೇ ಲಕ್ಷಿಸಲ್ಪಡಲು ಅರ್ಹರು;
ನಾನು ನಿಸ್ಸಾರನು; ಇದೇ ತೀರ್ಮಾನವಾಗಿದೆ.

*(ಖಾದಿಯಾನ್ ಕೆ ಆರ್ಯಾ ಔರ್ ಹಮ್; ರೂಹಾನೀ ಖಝಾಇನ್ ಸಂಪುಟ 20, ಪುಟ 456)*

ಹಝ್ರತ್ ದಾವೂದ್ ಪ್ರವಾದಿ(ಅ) ಅವರು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಶ್ರೇಷ್ಠತೆಯನ್ನೂ ಭವ್ಯತೆಯನ್ನೂ ಭವಿಷ್ಯವಾಣಿಯ ರೂಪದಲ್ಲಿ ಹೀಗೆ ವಿವರಿಸಿರುವರು:

“ನೀನು ಎಲ್ಲ ಮನುಷ್ಯರಿಗಿಂತ ಅತಿ ಸುಂದರನು; ನಿನ್ನ ಮಾತುಗಳು ಬಹಳ ಮಧುರ; ಇದರಿಂದಲೇ ದೈವಾನುಗ್ರಹವು ಯಾವಾಗಲೂ ನಿನ್ನ ಮೇಲಿದೆ ಎಂಬುದು ಸ್ಪಷ್ಟವಾಗುತ್ತದೆ. ಶೂರನೇ, ಮಹಿಮಪ್ರಭಾವಗಳನ್ನು ಧರಿಸಿಕೊಂಡು ಸೊಂಟಕ್ಕೆ ಪಟ್ಟದ ಕತ್ತಿಯನ್ನು ಕಟ್ಟಿಕೋ. ಸತ್ಯತೆ, ದೈನ್ಯ, ನೀತಿಗಳನ್ನು ಸ್ಥಾಪಿಸುವುದಕ್ಕಾಗಿ ಆಡಂಬರದಿಂದ ವಾಹನಾರೂಢನಾಗಿ

ವಿಜಯೋತ್ಸವದೊಡನೆ ಹೊರಡೋಣವಾಗಲಿ. ನಿನ್ನ ಭುಜವೀರ್ಯದಿಂದ ಭಯಂಕರ ಕೃತ್ಯಗಳು ನಡೆಯುವುವು. *(ಬೈಬಲ್:ಕೀರ್ತನೆಗಳು 45:2–4)"*

*(ಸುರ್ಮ ಚಶ್ಮಯೆ ಆರ್ಯಾ; ರೂಹಾನೀ ಖ಼ಝ಼ಾಇನ್ ಸಂಪುಟ 2, ಪುಟ 281 – 282)*

# ಪವಿತ್ರ ಖುರ್‌ಆನ್

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.

*(ಮಲ್‌ಫೂಝಾತ್ ಸಂಪುಟ 2, ಪುಟ 344)*

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು "ಹಕಮ್" ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು "ಮುಹೈಮಿನ್" ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ.

*(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ 16, ಪುಟ 103)*

ಪವಿತ್ರ ಖುರ್‌ಆನಿನ ಸ್ಪಷ್ಟವಾದ ಪವಾಡ ಅದರಲ್ಲಿ ಅಡಕವಾದ ಅಪರಿಮಿತ ಜ್ಞಾನ, ಅದರಲ್ಲಿ ವಿವರಿಸಲ್ಪಟ್ಟ ಸತ್ಯಾಂಶಗಳು ಮತ್ತು ತತ್ವಜ್ಞಾನ ಸಂಬಂಧವಾದ ಅದರ ನಿರೂಪಣೆಗಳಾಗಿವೆ. ಈ ಪವಾಡ ಪ್ರತಿಯೊಂದು ಜನಾಂಗದವರಿಗೆ ಮತ್ತು ಪ್ರತಿಯೊಂದು ಭಾಷೆಯನ್ನಾಡುವವರಿಗೆ ಸ್ಪಷ್ಟವಾಗಬಹುದಾಗಿದ್ದು ಅದನ್ನು ನಾವು ಪ್ರತಿಯೊಂದು ರಾಜ್ಯದ ಜನರ ಮುಂದಿಡಬಹುದಾಗಿದೆ. ಭಾರತೀಯರ, ಪರ್ಶಿಯನರ, ಯುರೋಪಿಯನರ, ಅಮೇರಿಕನರ ಅಥವಾ ಯಾವುದೇ ಇತರ ದೇಶದವರ ಮುಂದೆ ಅದನ್ನು ಇಟ್ಟು ಅವರನ್ನು ಅಚ್ಚರಿಗೊಂಡವರನ್ನಾಗಿಯೂ ನಿರುತ್ತರರನ್ನಾಗಿಯೂ ಮಾಡಬಹುದಾಗಿದೆ. ಪವಿತ್ರ ಖುರ್‌ಆನಿನ ಜ್ಞಾನ ಭಂಡಾರ ಪ್ರತಿಯೊಂದು ಕಾಲದಲ್ಲಿ ಆಯಾ ಕಾಲದ ಆವಶ್ಯಕತೆಗಳಿಗನುಸಾರವಾಗಿ ತೆರೆಯಲ್ಪಡುತ್ತಲೇ ಇರುತ್ತದೆ. ಪ್ರತಿಯೊಂದು ಕಾಲದ ಚಿಂತನೆಗಳನ್ನು ಎದುರಿಸಲು ಪವಿತ್ರ ಖುರ್‌ಆನಿನ ಮಾಹಿತಿಗಳು ಸಶಸ್ತ್ರ ಸೈನಿಕರ ಹಾಗೆ ನಿಂತಿರುತ್ತವೆ. ಪವಿತ್ರ ಖುರ್‌ಆನ್ ತನ್ನ ನಿಖರ ವಿವರಣೆಗಳ ಮತ್ತು ಸೂಕ್ಷ್ಮ ಜ್ಞಾನಗಳ

ಸಂಗತಿಯಲ್ಲಿ ಪರಿಮಿತವಾದ ಒಂದು ಗ್ರಂಥವಾಗಿದ್ದರೆ ಅದು ಪರಿಪೂರ್ಣವಾದೊಂದು ಪವಾಡವೆಂದು ಗಣಿಸಲ್ಪಡಲು ಸಾಧ್ಯವಾಗುತ್ತಿರಲಿಲ್ಲ.

*(ಇಝ್ಝಾಲೆ ಔಹಾಮ್; ರೂಹಾನೀ ಖಝಾಇನ್ ಸಂಪುಟ 13, ಪುಟ 255 – 256)*

ಪವಿತ್ರ ಖುರ್‌ಆನ್ ಒಂದು ಪವಾಡವಾಗಿದೆ. ಅದರ ಹಾಗಿರುವ ಗ್ರಂಥ ಹಿಂದೆ ಇರಲಿಲ್ಲ. ಇನ್ನು ಮುಂದೆಯೂ ಉಂಟಾಗಲಾರದು. ಅದರ ಅನುಗ್ರಹಗಳ ಮತ್ತು ಕೃಪೆಯ ವರದಾನಗಳು ಯಾವಾಗಲೂ ಪ್ರವಹಿಸುತ್ತಲೇ ಇರುವುವು. ಅದು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಕಾಲದಲ್ಲಿ ಹೇಗೆ ಹಿರಿಮೆ ಮತ್ತು ಪ್ರಕಾಶದಿಂದ ಕೂಡಿದ್ದಿತೋ ಹಾಗೆಯೇ ಎಲ್ಲ ಕಾಲಘಟ್ಟದಲ್ಲಿಯೂ ಹಿರಿಮೆ ಮತ್ತು ಪ್ರಕಾಶದಿಂದ ಉಜ್ವಲವಾಗಿದೆ. ಪ್ರತಿಯೊಬ್ಬ ಮನುಷ್ಯನ ಮಾತುಗಳು ಆತನ ಧೈರ್ಯಕ್ಕನುಸಾರವಾಗಿರುತ್ತದೆಯೆಂಬುದು ಗಮನಾರ್ಹವಾದ ಸಂಗತಿಯಾಗಿದೆ. ಒಬ್ಬ ವ್ಯಕ್ತಿಯ ಧೈರ್ಯ, ಕಾರ್ಯ ಸಾಧಿಸುವ ಛಲ ಮತ್ತು ಉನ್ನತ ಉದ್ದೇಶಕ್ಕನುಸಾರವಾಗಿ ಆತನ ಮಾತುಗಳೂ ಇರುತ್ತವೆ. ಅಲ್ಲಾಹನ ಸಂದೇಶವಾಣಿಗಳಲ್ಲಿ ಸಹ ಇದೇ ರೀತಿಯ ಸ್ವರೂಪವಿರುತ್ತದೆ. ಯಾವ ವ್ಯಕ್ತಿಗೆ ದೇವನ ಸಂದೇಶ ಲಭಿಸುತ್ತಿದೆಯೋ ಆ ವ್ಯಕ್ತಿ ಎಂತಹ ಉನ್ನತ ಮಟ್ಟದ ಧೈರ್ಯ ಸ್ಥೈರ್ಯಗಳನ್ನು ಹೊಂದಿರುತ್ತಾನೋ ಅಂತಹುದೇ ಮಟ್ಟದ ಸಂದೇಶಗಳು ಆ ವ್ಯಕ್ತಿಗೆ ದೇವನಿಂದ ದೊರೆಯುತ್ತವೆ. ಹಝ್ರತ್ ಪೈಗಂಬರಿಗೆ[ಸ] ಲಭಿಸಿದ ಸಂದೇಶವಾಣಿಗಳನ್ನು ಪಡೆಯಬಲ್ಲ ಅವರ ಮಟ್ಟದ ಧೈರ್ಯ ಸ್ಥೈರ್ಯಗಳನ್ನು ಪಡೆದ ಇನ್ನೊಬ್ಬ ವ್ಯಕ್ತಿ ಇನ್ನೆಂದೂ ಜನಿಸಲಾರ.

*(ಮಲ್‌ಫೂಝಾತ್ ಸಂಪುಟ 3, ಪುಟ 57)*

ನಾವು ಸತ್ಯ ಹೇಳುತ್ತಿದ್ದೇವೆ. ನಾವು ಹೇಳುವುದನ್ನು ಯಾವ ಪರಿಸ್ಥಿತಿಯಲ್ಲೂ ನಿಲ್ಲಿಸಲಾರೆವು: ಹಝ್ರತ್ ಪೈಗಂಬರ್[ಸ] ಆಗತರಾಗದೆ ಇರುತ್ತಿದ್ದರೆ ಮತ್ತು ನಮ್ಮ ಹಿರಿಯರೂ ನಮ್ಮ ಧಾರ್ಮಿಕ ನಾಯಕರೂ ಹಿಂದಿನ ಕಾಲದಿಂದಲೂ ಮತ್ತು ನಾವು ಇಂದೂ ಸಾಕ್ಷ್ಯ ವಹಿಸುತ್ತಿರುವ ಪ್ರಭಾವಗಳನ್ನೂ ಹೊಂದಿರುವ ಪವಿತ್ರ ಖುರ್‌ಆನ್ ಅವತೀರ್ಣಗೊಳ್ಳದೆ ಇರುತ್ತಿದ್ದರೆ, ಕೇವಲ ಬೈಬಲನ್ನು ನೋಡಿಕೊಂಡು ಹಝ್ರತ್ ಮೂಸಾ[ಅ] ಹಝ್ರತ್ ಈಸಾ[ಅ] ಮತ್ತು ಇತರ ಹಿಂದಿನ ಪ್ರವಾದಿಗಳು ಯಥಾರ್ಥವಾಗಿಯೂ ದೇವನು ತನ್ನ ವಿಶಿಷ್ಟ ಅನುಗ್ರಹದಿಂದ ತನ್ನ

ಸಂದೇಶವಾಹಕರನ್ನಾಗಿ ಆಯ್ಕೆ ಮಾಡಲಾದ ಪವಿತ್ರ ಸಮೂಹಕ್ಕೆ ಸೇರಿದವರಾಗಿದ್ದರೆಂದು ದೃಢನಂಬಿಕೆ ಹೊಂದಿ ಗುರುತಿಸಲು ನಮಗೆ ಬಹಳ ಕಷ್ಟವಾಗುತ್ತಿತ್ತು. ಪವಿತ್ರ ಖುರ್‌ಆನ್ ಪ್ರತಿಯೊಂದು ಕಾಲದಲ್ಲಿಯೂ ತನ್ನ ಪ್ರಕಾಶವನ್ನು ಬೀರುತ್ತಿದ್ದುದಕ್ಕಾಗಿ ನಾವು ಅದರ ಉಪಕಾರವನ್ನು ಮನಗಾಣಬೇಕಾಗಿದೆ; ಅದು ತನ್ನ ಪರಿಪೂರ್ಣ ಪ್ರಕಾಶದ ಬೆಳಕಿನಲ್ಲಿ ಹಿಂದಿನ ಪ್ರವಾದಿಗಳ ಸತ್ಯಸಂಧತೆಯನ್ನು ನಮಗೆ ಸ್ಪಷ್ಟಪಡಿಸಿಕೊಟ್ಟಿತು. ಪವಿತ್ರ ಖುರ್‌ಆನ್ ಮಾಡಿದ ಈ ಉಪಕಾರವು ನಮಗೆ ಮಾತ್ರವಲ್ಲ; ಪವಿತ್ರ ಖುರ್‌ಆನ್‌ಗಿಂತ ಮುಂಚೆ ಆಗಮಿಸಿದ ಹಝ್ರತ್ ಆದಮರಿಂದ(ಅ) ಮೊದಲ್ಗೊಂಡು ಹಝ್ರತ್ ಮಸೀಹರ(ಅ) ವರೆಗಿನ ಎಲ್ಲ ಪ್ರವಾದಿಗಳ ಮೇಲೆಯೂ ಈ ಉಪಕಾರ ಆಯಿತು.

*(ಬರಾಹೀನೆ ಅಹ್ಮದಿಯಾ ಭಾಗ 3; ರೂಹಾನೀ ಖ಼ಝ಼ಾಇನ್ ಸಂಪುಟ 1, ಪುಟ 290)*

ಈಗ ಲೋಕದಲ್ಲಿರುವ ದೇವಪ್ರೇರಿತ ಗ್ರಂಥಗಳಲ್ಲಿ ಪವಿತ್ರ ಖುರ್‌ಆನ್ ಮಾತ್ರ ದೇವವಾಣಿಯಾಗಿ ಉಳಿದಿದೆ ಎಂಬುದು ಖಂಡಿಸಲಾಗದ ಸಾಕ್ಷ್ಯಾಧಾರಗಳಿಂದ ಸಾಬೀತಾಗಿದೆ. ಮೋಕ್ಷದ ಬಗ್ಗೆ ಅದರ ತತ್ವಗಳು ಸತ್ಯ ಮತ್ತು ಮನುಷ್ಯಪ್ರಕೃತಿಗೆ ಅನುಯೋಜ್ಯವಾಗಿವೆ. ಅದು ಪ್ರಕಟಿಸುವ ವಿಶ್ವಾಸಾದರ್ಶಗಳು ಪರಿಪೂರ್ಣವೂ ಸ್ಥಾಯಿಯೂ ಆಗಿದ್ದು ಶಕ್ತಿಶಾಲಿ ಸಾಕ್ಷ್ಯಾಧಾರಗಳು ಅವುಗಳ ಸತ್ಯತೆಯ ಬಗ್ಗೆ ಸಾಕ್ಷಿ ನುಡಿಯುತ್ತವೆ. ಅದರ ಆಜ್ಞೆಗಳು ಕೇವಲ ಸತ್ಯವನ್ನು ಮಾತ್ರ ಆಧರಿಸಿವೆ. ಅದರ ಉಪದೇಶಗಳು ಬಹುದೇವಾರಾಧನೆ, ಹೊಸ ಆಚಾರ, ಸೃಷ್ಟಿಯ ಆರಾಧನೆ ಮೊದಲಾದ ಕಳಂಕಗಳಿಂದ ಸಂಪೂರ್ಣವಾಗಿ ಮುಕ್ತವಾಗಿ ಪರಿಶುದ್ಧವಾಗಿವೆ. ದೇವನ ಏಕತ್ವ, ಅವನ ಮಹಾನ್ ಸ್ವರೂಪ, ಅವನ ಪರಿಪೂರ್ಣತೆಗಳನ್ನು ಅತ್ಯಧಿಕ ಉತ್ಸಾಹ ಪೂರಿತವಾಗಿ ಸ್ಪಷ್ಟಪಡಿಸುವ ಗ್ರಂಥ ಅದಾಗಿದೆ. ಅದು ದೇವನ ಏಕತ್ವದ ಸಿದ್ಧಾಂತದಿಂದ ಮಾತ್ರ ತುಂಬಿರುವುದು ಅದರ ವೈಶಿಷ್ಟ್ಯವಾಗಿದೆ. ಅದು ಯಾವುದೇ ದೋಷ, ಕುಂದುಕೊರತೆ, ನ್ಯೂನತೆ ಅಥವಾ ಅಯೋಗ್ಯ ಗುಣಗಳನ್ನು ಏಕದೇವನ ಗುಣಗಳಾಗಿ ಆರೋಪಿಸುವುದಿಲ್ಲ. ಅದು ಯಾವುದೇ ನಂಬಿಕೆಯನ್ನು ಬಲವಂತವಾಗಿ ಹೇರಲು ಇಚ್ಛಿಸುವುದಿಲ್ಲ. ಅದು ನೀಡುವ ಉಪದೇಶಗಳ ಸತ್ಯತೆಯ ಬಗ್ಗೆ ಕಾರಣಗಳನ್ನು ಅದು ಮೊದಲೇ ತೋರಿಸಿಕೊಡುತ್ತದೆ. ಅದು ತನ್ನ ಪ್ರತಿಯೊಂದು ವಾದವನ್ನು ಬಲವತ್ತಾದ ಸಾಕ್ಷ್ಯಾಧಾರಗಳಿಂದ

ಸಾಬೀತುಗೊಳಿಸುತ್ತದೆ. ಅದು ಪ್ರತಿಯೊಂದು ತತ್ವದ ವಾಸ್ತವಿಕತೆಯ ಬಗ್ಗೆ ಸ್ಪಷ್ಟವಾದ ಆಧಾರಗಳನ್ನು ನಿರೂಪಿಸಿ ದೃಢ ವಿಶ್ವಾಸ ಮತ್ತು ಪರಿಪೂರ್ಣ ಜ್ಞಾನದ ತನಕ ತಲುಪಿಸುತ್ತದೆ. ಅದು ಜನರ ನಂಬಿಕೆ, ಆಚಾರ, ಮಾತು ಮತ್ತು ಕೃತಿಗಳಲ್ಲಿ ತಲೆದೋರಿರುವ ಎಲ್ಲ ದೋಷಗಳನ್ನೂ ಅಶುದ್ಧತೆಯನ್ನೂ ಛಿದ್ರತೆಯನ್ನೂ ದೋಷಕರ ಬದಲಾವಣೆ ಮೊದಲಾದ ಕೆಡುಕುಗಳನ್ನೂ ಪ್ರಕಾಶಮಾನವಾದ ಸಾಕ್ಷ್ಯಾಧಾರಗಳಿಂದ ದೂರೀಕರಿಸುತ್ತದೆ ಮತ್ತು ಅದು ಮನುಷ್ಯರಲ್ಲಿ ಮಾನವೀಯತೆಯನ್ನು ಉಂಟುಮಾಡಲು ಅಗತ್ಯವಾಗಿರುವ ಎಲ್ಲ ಶಿಷ್ಟಾಚಾರಗಳನ್ನು ಕಲಿಸಿ ಕೊಡುತ್ತದೆ. ಇಂದು ಲೋಕದಲ್ಲಿ ಕೆಡುಕು ಎಷ್ಟು ತೀವ್ರವಾಗಿಯೂ ವ್ಯಾಪಕವಾಗಿಯೂ ಹಬ್ಬಿದೆಯೋ ಅಷ್ಟೇ ತೀವ್ರವಾಗಿ ಅದು (ಪವಿತ್ರ ಖುರ್‌ಆನ್) ಪ್ರತಿಯೊಂದು ಕೆಡುಕನ್ನು ಎದುರಿಸುತ್ತದೆ. ಅದರ ಉಪದೇಶಗಳು ನೇರವೂ ಶಕ್ತಿಶಾಲಿಯೂ ಪರಿಪೂರ್ಣವೂ ಆಗಿವೆ. ಅದು ದೈವಿಕ ನಿಯಮಗಳ ಒಂದು ದರ್ಪಣವಾಗಿದೆ ಮತ್ತು ಪ್ರಕೃತಿ ನಿಯಮಗಳ ಒಂದು ಪ್ರತಿಬಿಂಬವಾಗಿದೆ. ಅದು ಹೃದಯದ ದೃಷ್ಟಿಶಕ್ತಿಯನ್ನು ಮತ್ತು ನೋಟವನ್ನು ವರ್ಧಿಸುವ ಒಂದು ಉಜ್ವಲ ಸೂರ್ಯನಾಗಿದೆ.

*(ಬರಾಹೀನೆ ಅಹ್ಮದಿಯಾ ಭಾಗ 2; ರೂಹಾನೀ ಖ಼ಝಾಇನ್ ಸಂಪುಟ 1, ಪುಟ 81 – 82)*

ನೂರೆ ಫುರ್ಖಾನ್ ಹೇ ಸಬ್ ನೂರೋಂ ಸೇ ಅಜ್‌ಲಾ ನಿಕ್‌ಲಾ
ಪಾಕ್ ವಹ್ ಜಿಸ್ ಸೇ ಯೆಃ ಅನ್‌ವಾರ್ ಕಾ ದರ್‌ಯಾ ನಿಕ್‌ಲಾ
ಅರ್ಥ: ಪವಿತ್ರ ಖುರ್‌ಆನಿನ ಪ್ರಕಾಶ ಇತರ ಎಲ್ಲ
ಪ್ರಕಾಶಗಳಿಗಿಂತ ಸ್ವಚ್ಛವಾಗಿ ಬೆಳಗಿದೆ.
ಈ ಪ್ರಕಾಶದ ನೀರಧಾರೆಯ ಉಗಮಸ್ಥಾನವಾದ
ಆ ಅಸ್ತಿತ್ವ (ಅಲ್ಲಾಹ್) ಪರಿಶುದ್ಧನು.

ಹಖ್ ಕಿ ತೌಹೀದ್ ಕಾ ಮುರ್‌ಝಾ ಹೀ ಚಲಾ ಥಾ ಪೌದಾ
ನಾಗಹಾನ್ ಗ್ಹೈಬ್ ಸೇ ಯೆಃ ಚಶ್‌ಮ ಅಸ್‌ಫಾ ನಿಕ್‌ಲಾ.
ಅರ್ಥ: ಯಥಾರ್ಥವಾದ ಏಕದೇವವಿಶ್ವಾಸದ ಗಿಡ ಒಣಗುತ್ತಾ ಹೋಗುತಿತ್ತು.
ಆಗ ಹಠಾತ್ತಾಗಿ ಅದೃಶ್ಯದಿಂದ ಈ ನಿರ್ಮಲವಾದ ಕಾರಂಜಿ ಹರಿಯಿತು.

ಯಾ ಇಲಾಹೀ ತೇರಾ ಘುರ್ಖಾನ್ ಹೇ ಕೆ ಎಕ್ ಆಲಮ್ ಹೇ
ಜೋ ಝುರೂರೀ ಥಾ ವಹ್ ಸಬ್ ಇಸ್ ಮೇ ಮುಹ್‌ಯಾ ನಿಕ್‌ಲಾ
ಅರ್ಥ: ನನ್ನ ದೇವಾ, ನಿನ್ನ ಖುರ್‌ಆನ್ ಒಂದು ಪ್ರಪಂಚವಾಗಿದೆ.
ಆವಶ್ಯಕವಾದ ಎಲ್ಲ ಸಂಗತಿಗಳು ಇದರಲ್ಲಿ ಲಭ್ಯವಿದೆ.

ಸಬ್ ಜಹಾಂ ಛಾನ್ ಚುಕೆ ಸಾರಿ ದುಕಾನೇ ದೇಖೀಂ
ಮಯೆ ಇರ್‌ಫಾನ್ ಕಾ ಯಹೀ ಏಕ್ ಹೀ ಶೀಶಾ ನಿಕ್‌ಲಾ
ಅರ್ಥ: ಲೋಕದೆಲ್ಲಡೆ ಹುಡುಕಾಡಿದೆ, ಎಲ್ಲ ಅಂಗಡಿಗಳನ್ನು ನೋಡಿದೆ.
ಆದರೆ ಅಧ್ಯಾತ್ಮ ರಹಸ್ಯ ಜ್ಞಾನದ ಪಾನೀಯದ
ಸೀಸೆಯಾಗಿ ಇದೊಂದೇ ಲಭಿಸಿತು.

ಕಿಸ್‌ಸೆ ಇಸ್ ನೂರ್ ಕಿ ಮುಮ್‌ಕಿನ್ ಹೋ ಜಹಾನ್ ಮೇ ತಶ್‌ಬೀಹ್
ವಹ್ ತೊ ಹರ್ ಬಾತ್ ಮೇ ಹರ್ ವಸ್‌ಫ್ ಮೇ ಯಕ್‌ತಾ ನಿಕ್‌ಲಾ
ಅರ್ಥ: ಈ ಪ್ರಕಾಶವನ್ನು ಲೋಕದ ಯಾವ ವಸ್ತುವಿನಿಂದ ಉಪಮಿಸಲು ಸಾಧ್ಯ?
ಅದು ಪ್ರತಿಯೊಂದು ಸಂಗತಿಯಲ್ಲೂ
ಪ್ರತಿಯೊಂದು ಗುಣದಲ್ಲಿಯೂ ಅತುಲ್ಯವಾದುದಾಗಿದೆ.

ಪೆಹಲೇ ಸಮ್‌ಝೆ ಥೆ ಕೆ ಮೂಸಾ ಕಾ ಅಸಾ ಹೇ ಘುರ್ಖಾನ್
ಫಿರ್ ಜೋ ಸೋಚಾ ತೋ ಹರ್ ಎಕ್ ಲಫ್‌ಝ್ ಮಸೀಹಾ ನಿಕ್‌ಲಾ
ಅರ್ಥ: ಪವಿತ್ರ ಖುರ್‌ಆನ್ ಕೇವಲ ಪ್ರವಾದಿ ಮೂಸಾರ ಬಡಿಗೆಯಂತಹ
ಗುಣವನ್ನು ಹೊಂದಿರುವಂತಹದ್ದು ಎಂದು ಮೊದಲು ತಿಳಿದಿದ್ದೆವು.
ಅದರ ಬಗ್ಗೆ ಪುನಃ ಚಿಂತನೆ - ಮಂಥನ ಮಾಡಿದಾಗ
ಅದರ ಪ್ರತಿಯೊಂದು ಪದ ಜೀವದಾಯಕ
ಗುಣವನ್ನು ಹೊಂದಿದೆ ಎಂದು ತಿಳಿದುಬಂತು.
ಹೆ ಖುಸೂರ್ ಅಪ್ನಾ ಹೀ ಅಂಧೋಂಕಾ ವಗರ್ ನ ವಹ್ ನೂರ್
ಐಸಾ ಚಮ್‌ಕಾ ಹೇ ಕೆ ಸದ್ ನಯ್ಯಿರೆ ಬೈಝಾ ನಿಕ್‌ಲಾ
ಅರ್ಥ: ಆ ತಪ್ಪು ಸ್ವತಃ ಅಂಧರದ್ದೇ ಆಗಿದೆ.
ಆ ಪ್ರಕಾಶ ಎಷ್ಟು ಪ್ರಜ್ವಲಿಸುತ್ತಾ ಇದ್ದಿತೆಂದರೆ
ಅದು ನೂರು ಸೂರ್ಯನ ಉಜ್ವಲತೆಯನ್ನು ಹೊಂದಿತ್ತು.

ಝಿಂದಗೀ ಐಸೊಂ ಕಿ ಕ್ಯಾ ಖ಼ಾಕ್ ಹೇ ಇಸ್ ದುನ್‌ಯಾ ಮೇ
ಜಿನ್ ಕಾ ಇಸ್ ನೂರ್ ಕೇ ಹೋತೆ ಭಿ ದಿಲ್ ಅಙ್‌ಮಾ ನಿಕ್‌ಲಾ
ಅರ್ಥ: ಈ ಪ್ರಕಾಶವಿದ್ದರೂ ಅದರಿಂದ ಪ್ರಯೋಜನ ಪಡೆಯದೆ
ಹೃದಯಗಳು ಕುರುಡಾಗಿರುವವರ ಜೀವಿತವು
ಈ ಲೋಕದಲ್ಲಿ ಎಷ್ಟು ನಿಸ್ಸಾರವಾಗಿದೆ!

*(ಬರಾಹೀನೆ ಅಹ್ಮದಿಯಾ ಭಾಗ 3; ರೂಹಾನೀ ಖ಼ಝಾಇನ್ ಸಂಪುಟ 1, ಪುಟ 305 – 306)*

ಅಯೆ ಅಝೀಝೋ಼ ಸುನೋ ಕೆ ಬೇ ಖು಼ರ್‌ಆನ್
ಹಖ಼್ ಕೋ ಮಿಲ್ತಾ ನಹೀ ಕಭೀ ಇನ್‌ಸಾನ್
ಅರ್ಥ: ಪ್ರಿಯರೇ, ನೀವು ಆಲಿಸಿರಿ: ಪವಿತ್ರ ಖುರ್‌ಆನ್ ಸಹಾಯವಿಲ್ಲದೆ
ಮನುಷ್ಯ ಎಂದೂ ಸತ್ಯವನ್ನು ತಲಪಲಾರ.

ದಿಲ್ ಮೇ ಹರ್ ವಖ಼್ತ್ ನೂರ್ ಭರ್ತಾ ಹೆ
ಸೀನಃ ಕೋ ಖ಼ೂಬ್ ಸಾಫ್ ಕರ್ತಾ ಹೆ
ಅರ್ಥ: ಅದು ಹೃದಯವನ್ನು ಯಾವಾಗಲೂ ಪ್ರಕಾಶಭರಿತವನ್ನಾಗಿ ಮಾಡುತ್ತದೆ.
ಅದು ಎದೆಯನ್ನು ಬಹಳ ಚೆನ್ನಾಗಿ ಸ್ವಚ್ಛಗೊಳಿಸುತ್ತದೆ.

ಉಸ್ ಕೆ ಔಸಾಫ್ ಕ್ಯಾ ಕರೂಂ ಮೈ ಬಯಾನ್
ವಹ್ ತೋ ದೇತಾ ಹೇ ಜಾನ್ ಕೋ ಔರ್ ಎಕ್ ಜಾನ್
ಅರ್ಥ: ಅದರ (ಪವಿತ್ರ ಖುರ್‌ಆನಿನ) ಗುಣಗಳನ್ನು ನಾನು ಹೇಗೆ ವರ್ಣಿಸಲಿ!
ಅದು ಜೀವಕ್ಕೆ ಇನ್ನೊಂದು ಜೀವವನ್ನು ಕೊಡುತ್ತದೆ.

ವಹ್ ತೋ ಚಮ್‌ಕಾ ಹೇ ನಯ್ಯಿರೆ ಅಕ್‌ಬರ್
ಉಸ್ ಸೆ ಇನ್‌ಕಾರ್ ಹೋ ಸಕೆ ಕ್ಯೂಂಕರ್
ಅರ್ಥ: ಅದು ಬೃಹತ್ತಾದ ಸೂರ್ಯನಂತೆ ಹೊಳೆಯುತ್ತಿರುವುದು.
ಅದನ್ನು ನಿರಾಕರಿಸುವುದಾದರೂ ಹೇಗೆ?

ಬಹ್‌ರೆ ಹಿಕ್‌ಮತ್ ಹೇ ವಹ್ ಕಲಾಮ್ ತಮಾಮ್
ಇಶ್‌ಖೆ ಹಖ್ ಕಾ ಪಿಲಾ ರಹಾ ಹೇ ಜಾಮ್
ಅರ್ಥ: ಅದರ ವಚನಗಳೆಲ್ಲ ಜಾಣ್ಮೆಯ ಸಮುದ್ರಗಳಾಗಿವೆ.
ಅದು ದೇವ ಪ್ರೇಮವೆಂಬ ಪಾನೀಯವನ್ನು ಕುಡಿಸುತ್ತದೆ.

ದರ್‌ದ್‌ಮಂದೋಂಕೀ ಹೇ ದವಾ ವಹೀ ಏಕ್
ಹೇ ಖುದಾ ಸೆ ಖುದಾ ನುಮಾ ವಹೀ ಏಕ್
ಅರ್ಥ: ನೋವಿನಿಂದ ಪೀಡಿತರಾದವರಿಗಿರುವ ಮದ್ದು ಅದೊಂದೇ ಆಗಿದೆ.
ಅದು ದೇವನಿಂದ ಬಂದುದಾಗಿದೆ;
ದೇವನನ್ನು ತೋರಿಸಿಕೊಡುವುದೂ ಅದೇ ಆಗಿದೆ.

ಹಮ್ ನೆ ಪಾಯಾ ಖ಼ೂರೆ ಹುದಾ ವಹೀ ಏಕ್
ಹಮ್ ನೆ ದೇಖಾ ಹೇ ದಿಲ್‌ರುಬಾ ವಹೀ ಏಕ್.
ಅರ್ಥ: ಮಾರ್ಗದರ್ಶನದ ಸೂರ್ಯ ಅದೊಂದೇ ಆಗಿದೆಯೆಂದು
ನಾವು ಮನವರಿಕೆ ಮಾಡಿಕೊಂಡಿರುವೆವು.
ಹೃದಯವನ್ನು ಆಕರ್ಷಿಸಬಲ್ಲುದು
ಅದೊಂದೇ ಎಂದು ನಾವು ನೋಡಿರುವೆವು.

ಉಸ್ ಕೆ ಮುಂಕಿರ್ ಜೋ ಬಾತ್ ಕಹ್ತೇ ಹೇಂ
ಯೂನ್ ಹೀ ಎಕ್ ವಾಹಿಯಾತ್ ಕಹ್ತೇ ಹೇಂ.
ಅರ್ಥ: ಇದನ್ನು ನಿರಾಕರಿಸುವವರು ಹೇಳುವುದೆಲ್ಲ
ಅಸಂಬದ್ಧ ಮಾತುಗಳಲ್ಲದೆ ಇನ್ನೇನೂ ಅಲ್ಲ.
*(ಬರಾಹೀನೆ ಅಹ್ಮದಿಯಾ ಭಾಗ 3; ರೂಹಾನೀ ಖ಼ಝಾಇನ್
ಸಂಪುಟ 1, ಪುಟ 299 – 300)*

# ದೇವನ ಸಂದೇಶವಾಣಿ

ಸರ್ವಶಕ್ತನಾದ ದೇವನು ತನ್ನ ಭಕ್ತನ ಪ್ರಾರ್ಥನೆಗೆ ಉತ್ತರವಾಗಿ ಅಥವಾ ತಾನೇ ಸ್ವತಃ ತನ್ನ ಭಕ್ತನಿಗೆ ಯಾವುದಾದರೂ ಅಗೋಚರವಾದ ಸಂಗತಿಯನ್ನು ತಿಳಿಸಲು ಇಚ್ಛಿಸುವಾಗ ಫಕ್ಕನೆ ಆತನಿಗೆ (ಭಕ್ತನಿಗೆ) ಅಬೋಧಾವಸ್ಥೆಯುಂಟಾಗಿ ಆತನು ತನ್ನ ಸುತ್ತುಮುತ್ತಲಿನ ಸಂಬಂಧವನ್ನು ಕಳೆದುಕೊಳ್ಳುವಂತೆ ಮಾಡುತ್ತಾನೆ. ಆಗ ಭಕ್ತನಿಗೆ ತನ್ನ ಅಸ್ತಿತ್ವದ ಬೋಧವೇ ಇರುವುದಿಲ್ಲ. ನೀರಿಗೆ ಹಾರಿ ಮುಳುಗುವವನ ಹಾಗೆ ಆತನು ತನ್ನ ಅಸ್ತಿತ್ವದ ಅರಿವೇ ಇಲ್ಲದೆ ಇತರರೊಂದಿಗೆ ತನ್ನ ಬಾಂಧವ್ಯಗಳನ್ನು ಮರೆತು ಅಬೋಧಾವಸ್ಥೆಯಲ್ಲಿ ಮುಳುಗುತ್ತಾನೆ. ಅನಂತರ ಮುಳುಗುಗಾರನನ್ನು ಹೆಚ್ಚಾಗಿ ಹೋಲುವ ಆತನು ತನ್ನ ಪ್ರಜ್ಞಾಹೀನತೆಯ ಸ್ಥಿತಿಯಿಂದ ಹೊರಬರುವಾಗ ಆತನು ತನ್ನೊಳಗೆ ಒಂದು ಧ್ವನಿಯ ಪ್ರಜ್ಞೆಯನ್ನು ಹೊಂದಿರುತ್ತಾನೆ. ಆ ಧ್ವನಿ ಕಮ್ಮಿಯಾಗುತ್ತಾ ಹೋದಂತೆ ಆತನಿಗೆ ತನ್ನೊಳಗೆ ಔಚಿತ್ಯಪೂರ್ಣವೂ ಸೂಕ್ಷ್ಮವೂ ಆನಂದಕರವೂ ಆದ ಸಂದೇಶವಾಣಿಯ ಅರಿವುಂಟಾಗುತ್ತದೆ. ಇದು ಪ್ರಜ್ಞಾಹೀನತೆಯಿಂದ ಬೋಧಾವಸ್ಥೆಗೆ ಬರುವಾಗ ಸಂಭವಿಸುವ ಒಂದು ಆಶ್ಚರ್ಯಕರ ಸಂಗತಿಯಾಗಿದೆ. ಈ ಅನುಭವ ವೈಚಿತ್ರ್ಯಗಳನ್ನು ವರ್ಣಿಸಲು ಶಬ್ದಗಳೇ ಸಾಕಾಗಲಾರವು. ಈ ರೀತಿಯ ಅನುಭವ ಉಂಟಾಗುವಾಗ ಮನುಷ್ಯನಿಗೆ ಜ್ಞಾನ ಸಾಗರವೇ ತೆರೆಯಲ್ಪಡುತ್ತದೆ. ದಾಸನೂ ಪದೇ ಪದೇ ದೇವನೊಂದಿಗೆ ಪ್ರಾರ್ಥಿಸುವಾಗ ಅವನು ಈ ಅಬೋಧಾವಸ್ಥೆಯನ್ನು ದಾಸನಲ್ಲಿ ಉಂಟುಮಾಡಿ ಆತನ ಪ್ರತಿಯೊಂದು ಪ್ರಾರ್ಥನೆಗೆ ಸೂಕ್ಷ್ಮವೂ ಸಂತೋಷಕರವೂ ಆದ ಮಾತುಗಳ ಮೂಲಕ ಉತ್ತರ ನೀಡುತ್ತಾನೆ. ಪ್ರತಿಯೊಂದು ಪ್ರಶ್ನೆಗೆ ಆ ಸ್ಥಿತಿಯಲ್ಲಿ ದೇವನು ನೀಡುವ ಮಾಹಿತಿಗಳು ಮನುಷ್ಯನಿಗೆ ತಿಳಿಯಲು ಸಾಧ್ಯವಿಲ್ಲದವುಗಳಾಗಿರುತ್ತವೆ. ಈ ಸಂಗತಿ ಆತನಿಗೆ ಹೆಚ್ಚಿನ ಜ್ಞಾನ ಗಳಿಸಲು ಮತ್ತು ಪರಿಪೂರ್ಣ ನಂಬಿಕೆ ಪಡೆಯಲು ಸಹಕಾರಿಯಾಗುತ್ತದೆ. ದಾಸನು ಪ್ರಾರ್ಥನೆ ಮಾಡುವುದು ಮತ್ತು ದೇವನು ತನ್ನ ದೈವಿಕ ಪ್ರಭೆಯಿಂದ ಪ್ರತಿಯೊಂದು ಪ್ರಾರ್ಥನೆಗೆ ಉತ್ತರ ನೀಡುವುದು ಎಂತಹ ಸಂಗತಿಯೆಂದರೆ: ದಾಸನು ಇದೇ ಲೋಕದಲ್ಲಿ ತನ್ನ ದೇವನನ್ನು ನೋಡುತ್ತಾನೆ ಮತ್ತು ಆತನಿಗೆ ಎರಡು ಲೋಕಗಳು ಯಾವುದೇ ವ್ಯತ್ಯಾಸವಿಲ್ಲದೆ ಒಂದೇ ರೀತಿ ಆಗುತ್ತವೆ.

*(ಬರಾಹೀನೆ ಅಹ್ಮದಿಯಾ ಭಾಗ 3; ರೂಹಾನೀ ಖ಼ಝ಼ಾಇನ್ ಸಂಪುಟ. 1, ಪುಟ 260 – 262)*

ಇನ್ನೊಂದು ವಿಧದ ದೈವಿಕ ಸಂದೇಶವಾಣಿ ಲಭಿಸುವುದು ಹೀಗೆ: ಅದು ಮನುಷ್ಯನ ಹೃದಯದ ಅನುಭೂತಿಯನ್ನು ಸಂಬಂಧಿಸಿರುವುದಿಲ್ಲ. ಹೊರಗಿನಿಂದ ಒಂದು ಶಬ್ದ ಕೇಳಿಸುತ್ತದೆ. ಪರದೆಯ ಹಿಂಭಾಗದಿಂದ ಒಬ್ಬ ವ್ಯಕ್ತಿ ಮಾತನಾಡುತ್ತಿರುವಂತೆ ಅದು ಭಾಸವಾಗುತ್ತದೆ. ಆ ಮಾತು ಬಹಳ ಅನಂದದಾಯಕ ಮತ್ತು ಆಹ್ಲಾದಕರವಾಗಿದ್ದು ಸ್ವಲ್ಪ ಹೆಚ್ಚು ವೇಗದಿಂದ ಕೂಡಿರುತ್ತದೆ. ಹೃದಯಕ್ಕೆ ಅದರಿಂದ ಅತೀವ ಸಂತೋಷವುಂಟಾಗುತ್ತದೆ. ಮನುಷ್ಯನು ಗಾಢವಾದ ಆಲೋಚನೆಯಲ್ಲಿ ಮುಳುಗಿರುವಾಗ ಫಕ್ಕನೆ ಈ ಶಬ್ದ ಕೇಳಿಸುತ್ತದೆ. "ಈ ಶಬ್ದ ಎಲ್ಲಿಂದ ಬಂತು. ಯಾರು ನನ್ನೊಂದಿಗೆ ಮಾತನಾಡಿದರು" ಎಂದು ಆತನು ಗಾಬರಿಗೊಳ್ಳುತ್ತಾನೆ. ಆತನು ಆಶ್ಚರ್ಯಚಕಿತನಾಗಿ ಹಿಂದೆ ಮುಂದೆ ನೋಡುತ್ತಾನೆ. ಆ ಶಬ್ದಗಳು ಒಬ್ಬ ದಿವ್ಯದೂತನಿಂದ (ಮಲಕ್) ಬಂದುವು ಎಂದು ಆತನಿಗೆ ಅನಂತರ ತಿಳಿಯುತ್ತದೆ. ಮನುಷ್ಯನು ಯಾವುದಾದರೂ ಸಂಗತಿಯ ಬಗ್ಗೆ ಅತ್ಯಧಿಕ ಚಿಂತೆಯಿಂದ ಕೂಡಿ ದುಃಖಿತನಾಗಿರುವಾಗ ಈ ಹೊರಗಿನಿಂದ ಕೇಳಿಸಲ್ಪಡುವ ಶಬ್ದಗಳು ಶುಭವಾರ್ತೆಗಳಾಗಿ ಬರುತ್ತವೆ.

*(ಬರಾಹೀನೆ ಅಹ್ಮದಿಯಾ ಭಾಗ 3; ರೂಹಾನೀ ಖ಼ಝಾ಼ಇನ್ ಸಂಪುಟ 1, ಪುಟ 287)*

ಯಾರ ಬಳಿಯಲ್ಲಿ ಸ್ವಲ್ಪ ಪ್ರಕಾಶವಿದೆಯೋ ಆತನಿಗೆ ಇನ್ನಷ್ಟು ಪ್ರಕಾಶ ನೀಡಲ್ಪಡುತ್ತದೆ ಎಂಬುದು ದೇವನ ನಿಯಮವಾಗಿದೆ. ಯಾರ ಬಳಿ ಏನೂ ಇಲ್ಲವೋ ಆತನಿಗೆ ಏನೂ ದೊರೆಯುವುದಿಲ್ಲ. ಯಾರ ಕಣ್ಣುಗಳಲ್ಲಿ ಪ್ರಕಾಶವಿದೆಯೋ ಆತನಿಗೆ ಮಾತ್ರ ಸೂರ್ಯಪ್ರಕಾಶ ಕಾಣಿಸುತ್ತದೆ. ಆದರೆ ಯಾರ ಕಣ್ಣುಗಳಲ್ಲಿ ಪ್ರಕಾಶವಿಲ್ಲವೋ ಆತನು ಸೂರ್ಯಪ್ರಕಾಶದಿಂದ ಯಾವುದೇ ಲಾಭ ಪಡೆಯಲಾರ. ಯಾರ ಪ್ರಕೃತಿಯಲ್ಲಿ ಪ್ರಕಾಶ ಕಮ್ಮಿಯಿದೆಯೋ ಆತನಿಗೆ ಬಾಹ್ಯ ಪ್ರಕಾಶ ಸಹ ಕಮ್ಮಿಯಾಗಿ ದೊರೆಯುತ್ತದೆ. ಯಾರ ಪ್ರಕೃತಿಯಲ್ಲಿ ಪ್ರಕಾಶ ಹೆಚ್ಚಾಗಿದೆಯೋ ಆತನಿಗೆ ಬಾಹ್ಯ ಪ್ರಕಾಶ ಸಹ ಹೆಚ್ಚಾಗಿಯೇ ಲಭಿಸುತ್ತದೆ.

*(ಬರಾಹೀನೆ ಅಹ್ಮದಿಯಾ ಭಾಗ 3; ರೂಹಾನೀ ಖ಼ಝಾ಼ಇನ್ ಸಂಪುಟ 1, ಪುಟ 195 – 196)*

ಸರ್ವ ಶಕ್ತನಾದ ದೇವನು ತನ್ನ ಅದ್ಭುತ ಪ್ರಪಂಚವನ್ನು ಮೂರು ಭಾಗಗಳಾಗಿ ವಿಂಗಡಿಸಿರುವನು:

1. ಪ್ರತ್ಯಕ್ಷ ಪ್ರಪಂಚ: ಕಣ್ಣು, ಕಿವಿ ಮತ್ತಿತರ ಇಂದ್ರಿಯಗಳಿಂದ ಮತ್ತು ಉಪಕರಣಗಳಿಂದ ಗೊತ್ತು ಹಚ್ಚಬಹುದಾದುದು.

2. ಅಗೋಚರ ಪ್ರಪಂಚ: ಬುದ್ಧಿ ಮತ್ತು ಆಧಾರ ಕಲ್ಪನೆಗಳಿಂದ ತಿಳಿಯಬಹುದಾದುದು.

3. ಅಗೋಚರ ಪ್ರಪಂಚಕ್ಕಿಂತ ಅಗೋಚರವಾದುದು: ಯಾವುದೇ ಕಲ್ಪನೆಗೆ ನಿಲುಕದುದು. ಅದರ ಇರುವಿಕೆಯನ್ನು ಅತ್ಯಲ್ಪ ಜನರು ಮಾತ್ರ ಬಲ್ಲರು. ಅದನ್ನು ತಲುಪಲು ಬುದ್ಧಿ ಶಕ್ತಿಗೆ ಸಾಧ್ಯವಿಲ್ಲ. ಅದು ಕೇವಲ ಊಹಿಸಬಹುದಾಗಿದೆ. ಅದರ ಬಗ್ಗೆ ದಿವ್ಯದರ್ಶನ, ಸಂದೇಶವಾಣಿ ಅಥವಾ ದೇವನ ನೇರನುಡಿಗಳಿಂದ ಮಾತ್ರ ಜ್ಞಾನ ಗಳಿಸಲು ಸಾಧ್ಯವಲ್ಲದೆ ಬೇರೆ ಯಾವುದೇ ರೀತಿಯಿಂದಲೂ ಸಾಧ್ಯವಿಲ್ಲ.

ಮೊದಲಿನ ಎರಡು ಪ್ರಪಂಚಗಳ ಜ್ಞಾನ ಗಳಿಸಲು ದೇವನು ಮನುಷ್ಯನಿಗೆ ತರತರದ ಇಂದ್ರಿಯಗಳನ್ನೂ ಮತ್ತಿತರ ಶಕ್ತಿಗಳನ್ನೂ ನೀಡಿರುವ ಹಾಗೆಯೇ ಮೂರನೆಯ ಪ್ರಪಂಚವನ್ನು ಅರಿತುಕೊಳ್ಳಲಿಕ್ಕೆ ಅನುಗ್ರಹದಾಯಕನಾದ ದೇವನು ಒಂದು ದಾರಿಯನ್ನು ತೆರೆದಿರುವನು ಎಂಬುದು ಅವನ ಎಂದೂ ಬದಲಾವಣೆ ಹೊಂದದ ವರ್ತನೆಗಳಿಂದ ಸ್ವಯಂಸಿದ್ಧವಾಗಿ ಸಾಬೀತಾಗುತ್ತದೆ. ದಿವ್ಯದರ್ಶನ, ಸಂದೇಶವಾಣಿ, ದೇವನ ನೇರನುಡಿ – ಇವು ಆ ಪ್ರಪಂಚವನ್ನು ಅರಿಯಲಿರುವ ಮಾರ್ಗಗಳಾಗಿವೆ. ಇವು ಯಾವುದೇ ಕಾಲದಲ್ಲಿ ಸಂಪೂರ್ಣವಾಗಿ ಕೊನೆಗೊಳ್ಳಲಾರವು. ಅವುಗಳನ್ನು ಗಳಿಸಲು ಬೇಕಾದ ನಿಬಂಧನೆಗಳನ್ನು ಈಡೇರಿಸುವವರು ಯಾವಾಗಲೂ ಅವುಗಳನ್ನು ಪಡೆಯುತ್ತಾ ಇದ್ದರು ಮತ್ತು ಇನ್ನು ಮುಂದೆ ಸಹ ಪಡೆಯುತ್ತಾ ಇರುವರು.

*(ಸುರ್ಮಯೆ ಚಶ್ಮೆ ಆರ್ಯಾ; ರೂಹಾನೀ ಖ಼ಝ಼ಾಇನ್*
*ಸಂಪುಟ 2, ಪುಟ 127 – 128)*

# ನಮ್ಮ ನಂಬಿಕೆಗಳೂ ವಿಶ್ವಾಸಗಳೂ

**"ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್"** (ಅಲ್ಲಾಹನಲ್ಲದೆ ಬೇರೆ ದೇವನಿಲ್ಲ. ಮುಹಮ್ಮದ್ ಅವನ ಪ್ರವಾದಿ) ಇದು ನಮ್ಮ ಧರ್ಮತತ್ವಗಳ ಸಾರಾಂಶವಾಗಿದೆ. ನಾವು ನಂಬಿಕೊಂಡು ಬಂದಿರುವುದು ಮತ್ತು ದೇವನ ಅನುಗ್ರಹದಿಂದ ನಂಬುತ್ತಾ ಈ ನಶ್ವರ ಲೋಕದಿಂದ ನಾವು ಅಗಲಿ ಹೋಗಲಿರುವುದು ಈ ವಿಶ್ವಾಸದೊಂದಿಗೆ ಆಗಿದೆ. ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್‌ರತ್ ಮುಹಮ್ಮದ್ ಮುಸ್ತಫಾ(ಸ) ಖಾತಮುನ್ನಬಿಯ್ಯಿನ್ (ಪ್ರವಾದಿಗಳ ಮುದ್ರೆ) ಮತ್ತು ಖೈರುಲ್ ಮುರ್‌ಸಲೀನ್ (ಪ್ರವಾದಿಗಳಲ್ಲಿ ಅತ್ಯಂತ ಶ್ರೇಷ್ಠ) ಆಗಿದ್ದಾರೆ. ಅವರ ಹಸ್ತಗಳಿಂದ ಧರ್ಮವನ್ನು ಪರಿಪೂರ್ಣಗೊಳಿಸಲಾಗಿದೆ. ಪರಿಪೂರ್ಣತೆಗೆ ತಲುಪಿದ ಈ ಅನುಗ್ರಹದ ಮೂಲಕ ಮನುಷ್ಯನು ನೇರವಾದ ಮಾರ್ಗವನ್ನು ಅವಲಂಬಿಸಿ ದೇವನ ಸಮೀಪ ತಲುಪಲು ಸಾಧ್ಯ. ಪವಿತ್ರ ಖುರ್‌ಆನ್ ಎಲ್ಲ ದೈವಿಕ ಗ್ರಂಥಗಳಲ್ಲಿ ಅತ್ಯಂತ ಶ್ರೇಷ್ಠವಾದುದು (ಖಾತಮುಲ್ ಕುತುಬ್) ಎಂದು ನಾವು ನಂಬುತ್ತೇವೆ. ಅದರ ಉಪದೇಶಗಳು, ಅದರ ಆಜ್ಞೆಗಳು, ಅದು ನಿಷಿದ್ಧಗೊಳಿಸಿದ ಕಾರ್ಯಗಳು, ಅದು ಕಡ್ಡಾಯಗೊಳಿಸಿದ ಕಾರ್ಯಗಳು – ಇವುಗಳಲ್ಲಿ ಒಂದಿಷ್ಟು ಸಹ ಹೆಚ್ಚು ಕಮ್ಮಿ ಆಗಲಾರದು. ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ತಿದ್ದುವ, ರದ್ದುಗೊಳಿಸುವ, ಬದಲಾಯಿಸುವ ಅಥವಾ ವ್ಯತ್ಯಾಸಗೊಳಿಸುವ ಯಾವುದೇ ದೈವಿಕ ನಿರ್ದೇಶ ಅಥವಾ ದೇವವಾಣಿ ಯಾರಿಗೂ ಉಂಟಾಗಲು ಸಾಧ್ಯವಿಲ್ಲವೆಂದು ಸಹ ನಾವು ನಂಬುತ್ತೇವೆ. ಯಾರಾದರೂ ಹಾಗೆ ಸಾಧ್ಯವಿದೆ ಎಂದು ಭಾವಿಸುವನಾದರೆ ಆತನು ನಮ್ಮ ಅಭಿಪ್ರಾಯದ ಪ್ರಕಾರ ಸತ್ಯವಿಶ್ವಾಸಿಗಳ ಸಮುದಾಯದಿಂದ ಹೊರಗಾದವನೂ ಅವಿಶ್ವಾಸಿಯೂ ಆಗುತ್ತಾನೆ.

*(ಇಝ್ಲಾಲೆ ಔಹಾಮ್; ರೂಹಾನೀ ಖಝ್ಝಾಇನ್*
*ಸಂಪುಟ 3, ಪುಟ 169 – 170)*

ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲ. ಹಝ್‌ರತ್ ಮುಹಮ್ಮದ್ ಮುಸ್ತಫಾ(ಸ) ಅವನ ಪ್ರವಾದಿ ಮತ್ತು ಖಾತಮುಲ್ ಅಂಬಿಯಾ (ಪ್ರವಾದಿಗಳ ಮುದ್ರೆ) ಎಂದು ನಾವು ನಂಬುತ್ತೇವೆ. ದೇವದೂತರು ಸತ್ಯವೆಂದೂ

ಪುನರುತ್ಥಾನ ಸತ್ಯವೆಂದೂ ಲೆಕ್ಕ ತೆಗೆಯಲ್ಪಡುವ ದಿನ ಸತ್ಯವೆಂದೂ ಸ್ವರ್ಗ – ನರಕ ಸತ್ಯವೆಂದೂ ನಾವು ನಂಬುತ್ತೇವೆ. ಪವಿತ್ರ ಖುರ್‌ಆನಿನಲ್ಲಿ ಪ್ರತಾಪವಂತನಾದ ಅಲ್ಲಾಹನು ಹೇಳಿದ ಎಲ್ಲ ಸಂಗತಿಗಳು ಮತ್ತು ನಮ್ಮ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ ಎಲ್ಲ ಸಂಗತಿಗಳು ಮೇಲೆ ಪ್ರಸ್ತಾಪಿಸಿದಂತೆ ಸತ್ಯವೆಂದು ನಂಬುತ್ತೇವೆ. ಇಸ್ಲಾಮಿನ ಈ ಧರ್ಮಸಂಹಿತೆಯಲ್ಲಿ (ಶರೀಅತ್) ಯಾರಾದರೂ ಒಂದು ಅಣು ವಿನಷ್ಟಾದರೂ ಹೆಚ್ಚು ಕಮ್ಮಿ ಮಾಡುವುದಾದರೆ ಅಥವಾ ಕಡ್ಡಾಯವಾದುದನ್ನು ಉಪೇಕ್ಷಿಸಲು ಮತ್ತು ಅನಾವಶ್ಯಕ ಕಾರ್ಯಗಳನ್ನು ಸೇರಿಸಲು ಅಡಿಪಾಯ ಹಾಕುವುದಾದರೆ ಅವನು ಅವಿಶ್ವಾಸಿಯೂ ಧರ್ಮಭ್ರಷ್ಟನೂ (ಇಸ್ಲಾಮ್ ಧರ್ಮವನ್ನು ತೊರೆದವನು) ಎಂದು ನಾವು ನಂಬುತ್ತೇವೆ. **"ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್"** (ಅಲ್ಲಾಹನಲ್ಲದೆ ಬೇರೆ ದೇವನಿಲ್ಲ. ಮುಹಮ್ಮದ್ ಅವನ ಪ್ರವಾದಿ) ಎಂಬ ಪರಿಶುದ್ಧ ವಚನದಲ್ಲಿ (ಕಲಿಮ ತಯ್ಯಿಬ) ಮನಸ್ಸಾರೆ ವಿಶ್ವಾಸವಿಟ್ಟುಕೊಂಡು, ಈ ವಿಶ್ವಾಸವನ್ನು ಕೈಬಿಡದೆ ಮರಣ ಹೊಂದಬೇಕು ಎಂದು ನಾವು ನಮ್ಮ ಜಮಾಅತನ್ನು ಉಪದೇಶಿಸುತ್ತೇವೆ. ಪವಿತ್ರ ಖುರ್‌ಆನ್ ದೃಢೀಕರಿಸಿದ ಎಲ್ಲ ಪ್ರವಾದಿಗಳನ್ನು ಮತ್ತು ಎಲ್ಲ ದೈವಿಕ ಗ್ರಂಥಗಳನ್ನು ನಂಬಬೇಕು. ವ್ರತಾನುಷ್ಠಾನ, ನಮಾಝ್, ಝಕಾತ್, ಹಜ್ಜ್, ಅಲ್ಲಾಹನು ಮತ್ತು ಅವನ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಿಶ್ಚಯಿಸಿದ ಎಲ್ಲ ಕಡ್ಡಾಯ ಕರ್ಮಗಳನ್ನು ಕಡ್ಡಾಯವೆಂದು ತಿಳಿದುಕೊಂಡು ಹಾಗೂ ನಿಷಿದ್ಧಗೊಳಿಸಿದ ಎಲ್ಲ ಕಾರ್ಯಗಳನ್ನು ನಿಷಿದ್ಧವೆಂದು ತಿಳಿದುಕೊಂಡು ಇಸ್ಲಾಮ್ ಧರ್ಮದಲ್ಲಿ ನೆಲೆನಿಲ್ಲಬೇಕು. ಒಟ್ಟಿನಲ್ಲಿ, ಪೂರ್ವಿಕ ಸಜ್ಜನರು ವಿಶ್ವಾಸಪರವಾಗಿ ಮತ್ತು ಕರ್ಮಪರವಾಗಿ ಒಮ್ಮತಾಭಿಪ್ರಾಯ ಹೊಂದಿದ್ದ ಹಾಗೂ ಪ್ರವಾದಿಚರ್ಯೆಯನ್ನು ಅನುಸರಿಸುವವರ ಒಮ್ಮತಾಭಿಪ್ರಾಯದಿಂದ ಇಸ್ಲಾಮ್ ಎಂದು ಕರೆಯಲ್ಪಡುವ ಎಲ್ಲ ಕಾರ್ಯಗಳನ್ನು ನಂಬುವುದು ಕಡ್ಡಾಯವಾಗಿದೆ. ಇದೇ ನಮ್ಮ ವಿಶ್ವಾಸವೆಂದು ನಾವು ಆಕಾಶ ಮತ್ತು ಭೂಮಿಯನ್ನು ಸಾಕ್ಷಿಯಾಗಿರಿಸಿ ಹೇಳುತ್ತೇವೆ.

*(ಅಯ್ಯಾಮುಸ್ಸುಲ್‌ಹ್; ರೂಹಾನೀ ಖಝಾಇನ್ ಸಂಪುಟ 4, ಪುಟ 323)*

ಎಲೈ ಭೂಮಿಯ ಎಲ್ಲೆಡೆಗಳಲ್ಲೂ ವಾಸಿಸುತ್ತಿರುವ ಜನರೇ, ಪೂರ್ವ ಪಶ್ಚಿಮಗಳಲ್ಲಿ ವಾಸಿಸುತ್ತಿರುವ ಮಾನವ ಆತ್ಮಗಳೇ, ನಾನು ನಿಮ್ಮೆಲ್ಲರನ್ನೂ ಬಹಳ ಒತ್ತಾಯಪೂರ್ವಕವಾಗಿ ಈ ಕಡೆಗೆ

ಆಹ್ವಾನಿಸುತ್ತಿದ್ದೇನೆ: ಲೋಕದಲ್ಲಿ ಈಗಿರುವ ಸತ್ಯಧರ್ಮ ಇಸ್ಲಾಮ್ ಮಾತ್ರವಾಗಿದೆ ಮತ್ತು ಪವಿತ್ರ ಖುರ್‌ಆನ್ ವಿವರಿಸುವ ದೇವನೇ ಸತ್ಯದೇವನಾಗಿದ್ದಾನೆ. ಸದಾಕಾಲ ಆಧ್ಯಾತ್ಮಿಕ ಜೀವಿತವನ್ನು ಪ್ರದಾನ ಮಾಡಬಲ್ಲ, ವೈಭವ ಮತ್ತು ಪರಿಶುದ್ಧತೆಯ ಸಿಂಹಾಸನದಲ್ಲಿ ಆಸೀನರಾಗಿರುವ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿದ್ದಾರೆ.

*(ತಿರ್‌ಯಾಖುಲ್ ಖುಲೂಬ್; ರೂಹಾನೀ ಖಝಾಇನ್ ಸಂಪುಟ 15, ಪುಟ 141)*

# ಹಝ್ರತ್ ಮಸೀಹ್ ಮೌಊದ್ (ವಾಗ್ದತ್ತ ಮಸೀಹ್) ಅಲೈಹಿಸ್ಸಲಾಮರ ಸ್ಥಾನಮಾನ

ನಾನು ಒಂದು ಸ್ವಪ್ನವನ್ನು ಕಂಡೆನು: ಧರ್ಮವನ್ನು ಪುನರುಜ್ಜೀವನಗೊಳಿಸುವ ಒಬ್ಬ ವ್ಯಕ್ತಿಯನ್ನು ಹುಡುಕುತ್ತಾ ಜನರು ತಿರುಗಾಡುತ್ತಾ ಇದ್ದಾರೆ. ಆಗ ಒಬ್ಬ ವ್ಯಕ್ತಿ ನನ್ನ ಮುಂದೆ ಬಂದು ನನ್ನ ಕಡೆಗೆ ಸೂಚಿಸುತ್ತಾ "ಅಲ್ಲಾಹನ ಪ್ರವಾದಿಯನ್ನು ಪ್ರೀತಿಸುವ ಮನುಷ್ಯ ಈತನೇ ಆಗಿದ್ದಾನೆ" ಎಂದರು. ಈ ಮಾತಿನಿಂದ ಸ್ಪಷ್ಟವಾಗುವ ಸಂಗತಿ ಇದಾಗಿದೆ: ಒಬ್ಬ ವ್ಯಕ್ತಿ ಧರ್ಮವನ್ನು ಪುನರುಜ್ಜೀವನಗೊಳಿಸುವ ಪದವಿ ಪಡೆಯಬೇಕಾದರೆ ಆತನು ಹೊಂದಬೇಕಾಗಿರುವ ಪ್ರಧಾನ ಅರ್ಹತೆ – ಹಝ್ರತ್ ಪೈಗಂಬರರೊಂದಿಗೆ[ಸ] ಇರಬೇಕಾದ ಪ್ರೀತಿಯಾಗಿದೆ ಮತ್ತು ಅದು ನನ್ನಲ್ಲಿ ಇದೆಯೆಂಬುದು ಅವರಿಗೆ ಪರಿಶೋಧನೆಗಳಿಂದ ಮನವರಿಕೆಯಾಗಿದೆ.

*(ಬರಾಹೀನೆ ಅಹ್ಮದಿಯಾ ಭಾಗ 4; ರೂಹಾನೀ ಖಝಾಇನ್ ಸಂಪುಟ 1, ಪುಟ 598)*

ಈ ಲೋಕ ನನ್ನನ್ನು ಸ್ವೀಕರಿಸಲಾರದು. ಏಕೆಂದರೆ ನಾನು ಈ ಲೋಕಕ್ಕೆ ಸೇರಿದವನಲ್ಲ. ಆದರೆ ಪರಲೋಕದ ಪಾಲು ನೀಡಲ್ಪಟ್ಟವರು ನನ್ನನ್ನು ನಂಬುತ್ತಿದ್ದಾರೆ ಮತ್ತು ಇನ್ನು ಮುಂದೆಯೂ ನಂಬುವರು. ನನ್ನನ್ನು ತಿರಸ್ಕರಿಸುವವರು ನನ್ನನ್ನು ಯಾರು ಕಳುಹಿಸಿದ್ದನೋ ಅವನನ್ನು ತಿರಸ್ಕರಿಸುತ್ತಿದ್ದಾರೆ. ನನ್ನೊಂದಿಗೆ ಸಂಬಂಧ ಏರ್ಪಡಿಸಿಕೊಳ್ಳುವವರು ನಾನು ಯಾರಿಂದ ಬಂದಿರುವೆನೋ ಅವನೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳುತ್ತಾರೆ. ನನ್ನ ಕೈಯಲ್ಲಿ ಒಂದು ದೀಪವಿದೆ. ಯಾರು ನನ್ನ ಸಮೀಪಕ್ಕೆ ಬರುತ್ತಾನೋ ಆತನು ನಿಶ್ಚಯವಾಗಿಯೂ ಆ ಪ್ರಕಾಶದ ಪಾಲು ಪಡೆದುಕೊಳ್ಳುವನು. ಆದರೆ ಯಾರು ಸಂಶಯಪಟ್ಟುಕೊಂಡು ನನ್ನ ಬಗ್ಗೆ ದುರಾಲೋಚನೆಗಳನ್ನು ಹೊಂದಿ ನನ್ನಿಂದ ಓಡಿ ಹೋಗುತ್ತಾನೋ ಆತನು ಅಂಧಕಾರಕ್ಕೆ ಹಾಕಲ್ಪಡುವನು. ನಾನು ಈ ಕಾಲದ ಅಭೇದ್ಯ ಕೋಟೆಯಾಗಿದ್ದೇನೆ. ಯಾರು ನನ್ನೊಂದಿಗೆ ಸೇರಿಕೊಳ್ಳುತ್ತಾರೋ ಅವರು ಕಳ್ಳರಿಂದಲೂ ದರೋಡೆಕೋರರಿಂದಲೂ ಹಿಂಸ್ರ ಮೃಗಗಳಿಂದಲೂ ತಮ್ಮನ್ನು ರಕ್ಷಿಸಿ ಕೊಳ್ಳುವರು.

*(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 34)*

ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಆ ದೇವನ ಪ್ರಮಾಣ ಮಾಡಿ ಹೇಳುತ್ತೇನೆ: ಪವಿತ್ರ ಖುರ್‌ಆನಿನಲ್ಲಿ ವಿವರಿಸಿರುವ ಸತ್ಯ ಸಂಗತಿಗಳನ್ನು ಮತ್ತು ಅದರ ಅಪಾರ ಜ್ಞಾನವನ್ನು ತಿಳಿದುಕೊಳ್ಳಲು ಅವನು ಪ್ರತಿಯೊಂದು ಆತ್ಮಕ್ಕಿಂತ ನನಗೆ ಹೆಚ್ಚಿನ ಸಾಮರ್ಥ್ಯವನ್ನು ಅನುಗ್ರಹಿಸಿರುವನು. ಪವಿತ್ರ ಖುರ್‌ಆನಿನ ವ್ಯಾಖ್ಯಾನವನ್ನು ಬರೆಯಲು ನನ್ನೊಂದಿಗೆ ಸ್ಪರ್ಧಿಸಲು ನಾನು ಪದೇ ಪದೇ ನೀಡಿದ ಆಹ್ವಾನವನ್ನು ಸ್ವೀಕರಿಸಿ ಯಾರಾದರೂ ಮತವಿದ್ವಾಂಸ ನನ್ನೆದುರಿಗೆ ಬರುತ್ತಿದ್ದರೆ ದೇವನು ಆತನನ್ನು ನಿಂದ್ಯನಾಗುವಂತೆಯೂ ನಾಚುವಂತೆಯೂ ಮಾಡುತ್ತಿದ್ದನು. ಅಲ್ಲಾಹನು ಪವಿತ್ರ ಖುರ್‌ಆನ್ ಬಗ್ಗೆ ನನಗೆ ನೀಡಿರುವ ಅಗಾಧ ಜ್ಞಾನ ಮಹಾಮಹಿಮನಾದ ಅಲ್ಲಾಹನ ಒಂದು ದೃಷ್ಟಾಂತವಾಗಿದೆ. ನನ್ನ ಈ ವಾದ ಸತ್ಯಸಂಧವಾದುದು ಎಂದು ಲೋಕವು ಬೇಗನೆ ಮನವರಿಕೆ ಮಾಡಿಕೊಳ್ಳುವುದೆಂದು ನಾನು ಅಲ್ಲಾಹನ ಅನುಗ್ರಹದಿಂದ ಭರವಸೆ ಹೊಂದಿದ್ದೇನೆ.

*(ಸಿರಾಜೆ ಮುನೀರ್; ರೂಹಾನೀ ಖ಼ಝಾ಼ಇನ್ ಸಂಪುಟ 12, ಪುಟ 41)*

ನಾನು ಒಬ್ಬಂಟಿಗನಾಗಿಲ್ಲ. ಆ ಕೃಪಾಮಯನಾದ ಒಡೆಯನು ನನ್ನ ಜೊತೆಗಿದ್ದಾನೆ. ಅವನಿಗಿಂತ ಹೆಚ್ಚು ನನಗೆ ಸಮೀಪವಾಗಿರುವವನು ಬೇರೆ ಯಾರೂ ಇಲ್ಲ. ಕಷ್ಟಗಳನ್ನು ಸಹಿಸಿಕೊಂಡು ಅವನ ಧರ್ಮದ ಸೇವೆ ಮಾಡಲು ಮತ್ತು ಉತ್ಸಾಹದಿಂದಲೂ ನಿಷ್ಠೆಯಿಂದಲೂ ಇಸ್ಲಾಮಿನ ವೃದ್ಧಿಗಾಗಿರುವ ಮಹತ್ಕಾರ್ಯಗಳನ್ನು ವಿಜಯಕರವಾಗಿ ಈಡೇರಿಸಲು ಅವನ ಅನುಗ್ರಹದಿಂದಲೇ ನನಗೆ ಈ ಪ್ರೇಮಮಯ ಆತ್ಮ ಲಭಿಸಿದೆ. ಈ ಕಾರ್ಯಗಳನ್ನು ನಿರ್ವಹಿಸಲು ಅವನೇ ನನ್ನನ್ನು ನೇಮಿಸಿರುವನು. ಆದುದರಿಂದ ನಾನು ಈಗ ನನ್ನ ಈ ಕೆಲಸವನ್ನು ಬೇರೆ ಯಾರದಾದರೂ ಮಾತು ಕೇಳಿ ನಿಲ್ಲಿಸಲಾರೆನು.

*(ಆಇನಯೆ ಕಮಾಲಾತೆ ಇಸ್ಲಾಮ್; ರೂಹಾನೀ ಖ಼ಝಾ಼ಇನ್ ಸಂ. 5, ಪುಟ 35)*

ಕಪಟವಾದಿಗಳನ್ನು ನಾಶಗೊಳಿಸುವಂತೆ ದೇವನು ನನ್ನನ್ನು ನಾಶಗೊಳಿಸಿಲ್ಲ. ಮಾತ್ರವಲ್ಲ, ನನ್ನ ಬಾಹ್ಯ, ನನ್ನ ಅಂತರ್ಯ, ನನ್ನ ಶರೀರ ಮತ್ತು ನನ್ನ ಆತ್ಮದ ಮೇಲೆ ದೇವನು ಮಾಡಿದ ಕೃಪಾಶೀರ್ವಾದಗಳನ್ನು ನಾನು ಎಣಿಸಲು ಅಸಾಧ್ಯ. ನಾನು ಸತ್ಯವಾದಿ ಎಂದು ಮನದಟ್ಟು ಮಾಡಿಕೊಳ್ಳಲು ಭಯಭಕ್ತಿಯುಳ್ಳ ಒಬ್ಬ ವ್ಯಕ್ತಿಗೆ ಇದೊಂದೇ ಸಂಗತಿ ಸಾಕು.

ನನಗೆ ದೇವವಾಣಿ ಲಭಿಸಿದೆ ಎಂದು ನಾನು ವಾದಿಸಿದಾಗ ನಾನು ಯುವಕನಾಗಿದ್ದೆ. ಈಗ ನಾನು ವೃದ್ಧನಾಗಿರುವೆನು. ನಾನು ಈ ವಾದ ಮಾಡಿದ ನಂತರ ಇಪ್ಪತ್ತು ವರ್ಷಗಳಿಗಿಂತ ಹೆಚ್ಚು ಕಾಲ ದಾಟಿಹೋಗಿವೆ. ನನಗಿಂತ ವಯಸ್ಸಿನಲ್ಲಿ ಕಿರಿಯರಾಗಿದ್ದ ನನ್ನ ಹಲವಾರು ಸ್ನೇಹಿತರೂ ಬಂಧುಗಳೂ ಈ ಕಾಲಾವಧಿಯಲ್ಲಿ ಮೃತರಾಗಿರುವರು. ನನಗೆ ದೇವನು ದೀರ್ಘಾಯುಸ್ಸನ್ನು ನೀಡಿದನು. ಪ್ರತಿಯೊಂದು ಕಷ್ಟ ಕಾರ್ಪಣ್ಯಗಳಲ್ಲಿ ಅವನು ನನ್ನ ಸಂರಕ್ಷಕನೂ ಸ್ನೇಹಿತನೂ ಆಗಿದ್ದನು. ದೇವನ ಮೇಲೆ ಸುಳ್ಳು ಸೃಜಿಸುವವರ ಲಕ್ಷಣಗಳು ಹೀಗೆಯೇ ಆಗಿರುತ್ತವೆಯೋ?

*(ಅಂಜಾಮೆ ಆಥಮ್; ರೂಹಾನೀ ಖ಼ಝ಼ಾಇನ್ ಸಂಪುಟ 11, ಪುಟ 50)*

## ಹೊಸ ಜಮಾಅತ್ ಸ್ಥಾಪನೆ ಮತ್ತು ಉಪದೇಶಗಳು

ನನ್ನೊಂದಿಗೆ ನಿಷ್ಠೆಯ ಪ್ರಮಾಣವಚನ ಸ್ವೀಕರಿಸಿದ ನನ್ನ ಮಿತ್ರರೇ, ದೇವನಿಗೆ ತೃಪ್ತಿಕರವಾದ ಕಾರ್ಯಗಳನ್ನು ಮಾಡಲು ನಿಮಗೆ ಮತ್ತು ನಮಗೆ ಅವನು ಅನುಕೂಲತೆಗಳನ್ನು ಒದಗಿಸಿ ಕೊಡಲಿ. ನೀವು ಇಂದು ಬಹಳ ಅಲ್ಪ ಸಂಖ್ಯಾತರಾಗಿರುವಿರಿ ಮತ್ತು ನೀವು ತಾತ್ಸಾರದಿಂದ ವೀಕ್ಷಿಸಲ್ಪಡುತ್ತಿರುವಿರಿ. ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿರುವ ಅಲ್ಲಾಹನ ಒಂದು ಕಾರ್ಯವಿಧಾನದಂತೆ ನಿಮಗೆ ಒಂದು ಪರೀಕ್ಷೆಯ ಕಾಲವಿದೆ. ನೀವು ಎಡವಿ ಬೀಳುವಂತೆ ಎಲ್ಲ ಕಡೆಗಳಿಂದಲೂ ಪ್ರಯತ್ನಿಸಲಾಗುವುದು. ನೀವು ಎಲ್ಲ ವಿಧಗಳಿಂದಲೂ ಪೀಡಿಸಲ್ಪಡುವಿರಿ. ವಿವಿಧ ರೀತಿಯ ಮಾತುಗಳನ್ನು ನೀವು ಕೇಳಬೇಕಾಗಿ ಬರುವುದು. ನಿಮಗೆ ತನ್ನ ನಾಲಗೆ ಅಥವಾ ಕೈಗಳಿಂದ ಕಷ್ಟಕೊಡುವ ಪ್ರತಿಯೊಬ್ಬನು ತಾನು ಇಸ್ಲಾಮಿನ ಸೇವೆ ಮಾಡುತ್ತಿರುವುದಾಗಿ ಭಾವಿಸುವನು. ನೀವು ಎಲ್ಲ ವಿಧಗಳಿಂದ ಪರೀಕ್ಷಿಸಲ್ಪಡಲಿಕ್ಕಾಗಿ ಕೆಲವು ದೈವಿಕ ಪರೀಕ್ಷೆಗಳೂ ನಿಮಗೆ ಉಂಟಾಗುವುದು. ಆದುದರಿಂದ ನೀವು ಕಿವಿಗೊಟ್ಟು ಕೇಳಿರಿ. ನೀವು ನಿಮ್ಮ ಶುಷ್ಕ ತರ್ಕಗಳನ್ನು ಅವಲಂಬಿಸಿ ಅಥವಾ ಪರಿಹಾಸಕ್ಕೆ ಪ್ರತಿಯಾಗಿ ಪರಿಹಾಸಕರ ಮಾತುಗಳನ್ನಾಡಿ ಅಥವಾ ಬೈಗುಳಗಳಿಗೆ ಪ್ರತಿಯಾಗಿ ಬೈದುಕೊಂಡು ಜಯ ಮತ್ತು ಗೆಲುವಿನ ದಾರಿಯನ್ನು ಹೊಂದಲಾರಿರಿ. ನೀವು ಈ ವಿಧಾನವನ್ನು ಅವಲಂಬಿಸಿದರೆ ನಿಮ್ಮ ಹೃದಯಗಳು ಕಠೋರವಾಗುವುವು. ನೀವು ಬರೇ ಮಾತುಗಳನ್ನು ಮಾತ್ರ ಆಡುವವರಾಗುವಿರಿ. ಅವುಗಳನ್ನು ಅಲ್ಲಾಹನು ಇಷ್ಟಪಡುವುದಿಲ್ಲ ಮತ್ತು ಅವನು ಅಸಹ್ಯಪಡುವ ದೃಷ್ಟಿಯಿಂದ ಅವುಗಳನ್ನು ನೋಡುತ್ತಾನೆ. ಆದುದರಿಂದ ನೀವು ಎರಡು ಶಾಪಗಳನ್ನು ನಿಮ್ಮ ಮೇಲೆ ಹೊರಿಸಬೇಡಿರಿ – ಒಂದು ಮನುಷ್ಯರದು, ಇನ್ನೊಂದು ದೇವನದು.

*(ಇಝ್ಹಾಲೆ ಔಹಾಮ್; ರೂಹಾನೀ ಖ಼ಝ಼ಾಇನ್*
*ಸಂಪುಟ 3, ಪುಟ 546 – 547)*

ದೇವನು ನಿಮ್ಮನ್ನು ವಿನಾಶಕ್ಕೊಳಪಡಿಸುವನೆಂದು ನೀವು ಎಂದೂ ಭಾವಿಸಬೇಡಿರಿ. ನೀವು ಅಲ್ಲಾಹನ ಕೈಯಿಂದ ಭೂಮಿಯಲ್ಲಿ ಬಿತ್ತಲಾದ ಒಂದು ಬೀಜವಾಗಿದ್ದೀರಿ. ದೇವನು ಹೇಳುತ್ತಾನೆ: ಅದು ಮೊಳಕೆಯೊಡೆದು

ಬೆಳೆದು ಎಲ್ಲ ಬದಿಗಳಿಂದಲೂ ಅದರ ಕೊಂಬೆಗಳು ವಿಶಾಲವಾಗಿ ಹಬ್ಬುವುವು ಮತ್ತು ಅದು ದೊಡ್ಡದಾದೊಂದು ವೃಕ್ಷವಾಗುವುದು.

ಆದುದರಿಂದ ದೇವನ ಮಾತುಗಳಲ್ಲಿ ನಂಬಿಗೆಯಿರಿಸಿ ಮಧ್ಯೆ ಬರಲಿರುವ ಪರೀಕ್ಷೆಗಳಿಗೆ ಭಯಪಡದೆ ಇರುವವನು ಧನ್ಯನು. ನಿಷ್ಠೆಯನ್ನು ಸೂಚಿಸುವ ಪ್ರತಿಜ್ಞೆಗಳನ್ನು ಮಾಡಿದ ನಿಮ್ಮವರಲ್ಲಿ ಯಾರು ಸತ್ಯವಂತರು ಯಾರು ಸುಳ್ಳುಗಾರರೆಂದು ದೇವನು ಪರೀಕ್ಷಿಸಲಿಕ್ಕಾಗಿ ಪರೀಕ್ಷೆಗಳು ಬರುವುದೂ ಅವಶ್ಯಕವಾಗಿದೆ. ಯಾವುದಾದರೂ ಪರೀಕ್ಷೆಯಲ್ಲಿ ಯಾರಾದರೂ ಜಾರಿಬಿದ್ದರೆ ಆತನು ಅಲ್ಲಾಹನಿಗೆ ಯಾವುದೇ ಹಾನಿಯನ್ನು ಉಂಟುಮಾಡಲಾರನು. ಆದರೆ ಆತನ ಭಾಗ್ಯಹೀನತೆ ಆತನನ್ನು ನರಕಕ್ಕೆ ಕೊಂಡೊಯ್ಯುವುದು. ಆತನು ಹುಟ್ಟಿರದಿದ್ದರೆ ಆತನಿಗೆ ಅದು ಉತ್ತಮವಾಗಿತ್ತು. ಆದರೆ ವಿಪತ್ತುಗಳ ಭೂಕಂಪಗಳಿಗೆ ಈಡಾಗಿ, ವಿವಿಧ ಅನಿಷ್ಟ ಸಂಭವಗಳ ಬಿರುಗಾಳಿಗೆ ತುತ್ತಾಗಿ, ವಿವಿಧ ಜನಾಂಗಗಳ ಪರಿಹಾಸ ಮತ್ತು ನಗುಗಳಿಗೆ ಗುರಿಯಾಗಿ ಹಾಗೂ ಲೋಕದ ಜನರ ತೀವ್ರ ಅಸಹನೆಯ ವರ್ತನೆಗಳಿಗೀಡಾಗಿ ಕೊನೆಯ ತನಕ ಸಹಿಷ್ಣುಗಳಾಗಿ ಉಳಿಯುವ ಎಲ್ಲ ಜನರು ಕೊನೆಗೆ ಜಯಶಾಲಿಗಳಾಗುವರು. ಅವರಿಗೆ ಅನುಗ್ರಹಗಳ ಬಾಗಿಲುಗಳು ತೆರೆಯಲ್ಪಡುವುವು.

ದೇವನು ನನ್ನನ್ನು ಸಂಬೋಧಿಸಿ, ನಾನು ನನ್ನ ಪಕ್ಷದವರಿಗೆ ಹೀಗೆ ತಿಳಿಸಲು ಹೇಳಿರುವನು: "ಯಾವುದೇ ಲೌಕಿಕ ಆಶೆ ಆಕಾಂಕ್ಷೆಗಳನ್ನು ಉದ್ದೇಶಿಸದೆ, ಕಾಪಟ್ಯ ಮತ್ತು ಪುಕ್ಕಲುತನದ ಕಳಂಕವನ್ನು ಹೊಂದದೆ ಮತ್ತು ವಿಧೇಯತೆಯ ಯಾವುದೇ ಕೊರತೆಯನ್ನು ಪಡೆಯದೆ ವಿಶ್ವಾಸವನ್ನು ಯಾರು ಅವಲಂಬಿಸಿರುವರೋ ಅವರೇ ದೇವನ ಪ್ರೀತಿಗೆ ಪಾತ್ರರಾಗಿದ್ದಾರೆ." ಅಂತಹ ಜನರೇ ಸತ್ಯಪಥದ ಪಥಗಾಮಿಗಳೆಂದು ದೇವನು ನನಗೆ ತಿಳಿಸಿರುವನು.

*(ಅಲ್‌ವಸಿಯ್ಯತ್; ರೂಹಾನೀ ಖ಼ಝ಼ಾಇನ್ ಸಂಪುಟ 20, ಪುಟ 309)*

ನೀವು ಅನ್ಯಾಯಕ್ಕೆ ಹಠದಿಂದ ಅಂಟಿಕೊಂಡು ಸತ್ಯವನ್ನು ಕೊಲೆಮಾಡಬೇಡಿರಿ. ಸತ್ಯವು ಒಂದು ಮಗುವಿನಿಂದ ದೊರಕಿದರೂ ನೀವು ಅದನ್ನು ಸ್ವೀಕರಿಸಿರಿ. ನಿಮ್ಮ ವಿರೋಧಿಯು ಹೇಳುವುದು ಸತ್ಯವೆಂದು ನಿಮಗೆ ಮನದಟ್ಟಾದರೆ ತಕ್ಷಣ ನಿಮ್ಮ ಶುಷ್ಕ ತರ್ಕಗಳನ್ನು ಬಿಟ್ಟುಬಿಡಿರಿ. ನೀವು ಸತ್ಯದ ಮೇಲೆ ನೆಲೆನಿಲ್ಲಿರಿ ಮತ್ತು ಸತ್ಯಸಾಕ್ಷ್ಯವನ್ನೇ ನೀಡಿರಿ. ಮಹಾಮಹಿಮನಾದ ಅಲ್ಲಾಹನು ಹೀಗೆ ಹೇಳಿರುತ್ತಾನೆ:

*"ನೀವು ವಿಗ್ರಹಗಳ ಕಲ್ಮಷದಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ ಮತ್ತು ಸುಳ್ಳು ಹೇಳುವುದರಿಂದಲೂ ನಿಮ್ಮನ್ನು ರಕ್ಷಿಸಿಕೊಳ್ಳಿರಿ" (ಪವಿತ್ರ ಖುರ್‌ಆನ್ 22:31)*

ಸುಳ್ಳು ಹೇಳುವುದು ವಿಗ್ರಹಾರಾಧನೆಗಿಂತ ಕೆಳತರಗತಿಯ ಪಾಪವಲ್ಲ. ನಿಮ್ಮನ್ನು ಸತ್ಯದ ಗುರಿಯಿಂದ ಮುಖ ತಿರುಗಿಸುವಂತೆ ಮಾಡುವುದೇ ನಿಮ್ಮ ದಾರಿಯಲ್ಲಿರುವ ವಿಗ್ರಹವಾಗಿದೆ. ನಿಮ್ಮ ತಂದೆ, ಸಹೋದರ ಅಥವಾ ಸ್ನೇಹಿತರ ವಿರುದ್ಧವಾಗಿದ್ದರೂ ನೀವು ಸತ್ಯ ಸಾಕ್ಷ್ಯವನ್ನೇ ನೀಡಿರಿ. ಯಾವುದೇ ಶತ್ರುತ್ವ ಭಾವನೆಯು ನೀವು ನ್ಯಾಯಯುತವಾಗಿ ನಡೆಯುವುದಕ್ಕೆ ತಡೆಯೊಡ್ಡದಿರಲಿ. ನೀವು ಪರಸ್ಪರ ಜಿಪುಣತನ, ವಿರೋಧ, ದ್ವೇಷ, ಅಸೂಯೆ ಮತ್ತು ನಿರ್ದಯತೆಯಿಂದ ವರ್ತಿಸಬೇಡಿರಿ. ನೀವೆಲ್ಲರೂ ಒಂದಾಗಿರಿ. ಪವಿತ್ರ ಖುರ್‌ಆನಿನ ಉಪದೇಶಗಳನ್ನು ಎರಡು ಪ್ರಧಾನ ವಿಭಾಗಗಳಾಗಿ ವಿಂಗಡಿಸಬಹುದು. ಒಂದನೆಯದು, ದೇವನ ಏಕತ್ವ ಮತ್ತು ಗೌರವಾನ್ವಿತ ನಾಮಗಳನ್ನು ಹೊಂದಿದ ಅವನೊಂದಿಗೆ ಸ್ನೇಹ ಮತ್ತು ವಿಧೇಯತೆ. ಎರಡನೆಯದು, ಎಲ್ಲ ಮಾನವರೊಂದಿಗೆ ಸಹಾನುಭೂತಿಯಿಂದ ವರ್ತಿಸುವುದಾಗಿದೆ.

*(ಇಝ್ಝಾಲೆ ಔಹಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 550)*

ನೀವು ಸತ್ಯವನ್ನೇ ಅವಲಂಬಿಸಿರಿ. ನೀವು ಸತ್ಯವನ್ನೇ ಬಿಗಿಯಾಗಿ ಹಿಡಿದುಕೊಳ್ಳಿರಿ. ನಿಮ್ಮ ಹೃದಯಗಳು ಹೇಗೆ ಇವೆ ಎಂಬುದನ್ನು ದೇವನು ನೋಡುತ್ತಿದ್ದಾನೆ. ಏನು! ಮನುಷ್ಯನು ಅವನನ್ನು ಮೋಸಗೊಳಿಸಬಲ್ಲನೇ? ಏನು! ಅವನ ವಿರುದ್ಧ ಯಾವುದೇ ಕುತಂತ್ರ ಫಲದಾಯಕವಾಗುವುದೇ?

*(ಇಝ್ಝಾಲೆ ಔಹಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 549)*

ನನ್ನ ಪಕ್ಷಕ್ಕೆ ಸೇರಿದವರೆಂದು ತಮ್ಮನ್ನು ಪರಿಗಣಿಸುತ್ತಿರುವವರೇ, ನೀವು ವಾಸ್ತವಿಕವಾಗಿ ಭಯಭಕ್ತಿಯ ಮಾರ್ಗದಲ್ಲಿ ನಡೆಯುವಿರಾದರೆ ಮಾತ್ರ ನೀವು ನನ್ನ ಪಕ್ಷಕ್ಕೆ ಸೇರಿದವರಾಗಿ ಆಕಾಶದಲ್ಲಿ ಪರಿಗಣಿಸಲ್ಪಡುವಿರಿ. ಆದುದರಿಂದ ನೀವು ನಿಮ್ಮ ಐದು ಹೊತ್ತಿನ ನಮಾಝ್‌ಗಳನ್ನು ಸರ್ವಶಕ್ತನಾದ ದೇವನನ್ನು ನೀವು ನೋಡುತ್ತಿರುವಿರೋ ಎಂಬಂತೆ ಭಯದಿಂದಲೂ ಶ್ರದ್ಧೆಯಿಂದಲೂ ಅನುಷ್ಠಿಸಿರಿ. ನಿಮ್ಮ ಉಪವಾಸಗಳನ್ನು ಅಲ್ಲಾಹನಿಗಾಗಿ ಸತ್ಯಸಂಧವಾಗಿ ಈಡೇರಿಸಿರಿ. ಝಕಾತ್ ಕೊಡಬೇಕಾದವನು

ಝಕಾತ್ ಕೊಡಲಿ. ಹಜ್ಜ್ ಯಾರಿಗೆ ಕಡ್ಡಾಯವಾಗಿದೆಯೋ, ಆತನಿಗೆ ಹಜ್ಜ್ ಮಾಡಲು ಯಾವುದೇ ತಡೆಯಿಲ್ಲವಾದರೆ, ಆತನು ಹಜ್ಜ್ ಮಾಡಲಿ. ನೀವು ಸತ್ಕಾರ್ಯಗಳನ್ನು ಉತ್ತಮವಾಗಿ ಮಾಡಿರಿ. ದುಷ್ಕಾರ್ಯಗಳನ್ನು ಜಿಗುಪ್ಸೆಯಿಂದ ತ್ಯಜಿಸಿರಿ. ಯಾವುದೇ ಕೃತ್ಯ ಭಯಭಕ್ತಿಯಿಂದ ಕೂಡಿರದಿದ್ದರೆ ಅದು ಅಲ್ಲಾಹನನ್ನು ತಲಪಲಾರದು ಎಂದು ನೆನಪಿಟ್ಟುಕೊಳ್ಳಿರಿ. ಪ್ರತಿಯೊಂದು ಒಳಿತಿನ ತಾಯಿಬೇರು ಭಯಭಕ್ತಿಯಾಗಿದೆ. ಯಾವ ಕೃತ್ಯದಲ್ಲಿ ಈ ಅಂಶ ನಷ್ಟವಾಗಿಲ್ಲವೋ ಆ ಕೃತ್ಯ ಸಹ ನಷ್ಟವಾಗಲಾರದು. ನಿಮಗಿಂತ ಮೊದಲಿನ ಸತ್ಯವಿಶ್ವಾಸಿಗಳನ್ನು ಪರೀಕ್ಷಿಸಲಾದಂತೆ ನೀವು ಸಹ ವಿವಿಧ ದುಃಖ ಮತ್ತು ಕಷ್ಟಗಳಿಂದ ಪರೀಕ್ಷಿಸಲ್ಪಡಬೇಕಾದುದು ಅನಿವಾರ್ಯವಾಗಿದೆ. ಆದುದರಿಂದ ನೀವು ಜಾಗರೂಕರಾಗಿರಿ. ನೀವು ಮುಗ್ಗರಿಸಿ ಬೀಳದಂತಾಗಲಿ. ನಿಮಗೆ ಆಕಾಶದೊಂದಿಗೆ ದೃಢವಾದ ಸಂಬಂಧವಿದ್ದರೆ ನಿಮಗೆ ಭೂಮಿಯು ಯಾವುದೇ ಹಾನಿಯನ್ನು ಉಂಟುಮಾಡಲು ಶಕ್ತವಾಗಲಾರದು. ನಿಮಗೆ ಯಾವುದಾದರೂ ನಷ್ಟವುಂಟಾಗುವುದಾದರೆ ಅದು ನಿಮ್ಮ ಕೈಗಳಿಂದಲೇ ಉಂಟಾಗುವುದಲ್ಲದೆ ನಿಮ್ಮ ಶತ್ರುಗಳ ಕೈಗಳಿಂದ ಉಂಟಾಗಲಾರದು. ನಿಮ್ಮ ಲೌಕಿಕ ಗೌರವಾದರಗಳೆಲ್ಲ ನಷ್ಟವಾದರೆ ದೇವನು ಎಂದೂ ನಾಶವಾಗದ ಗೌರವವನ್ನು ನಿಮಗೆ ಆಕಾಶದಲ್ಲಿ ನೀಡುವನು. ಆದುದರಿಂದ ನೀವು ಅವನನ್ನು ಬಿಟ್ಟುಬಿಡಬೇಡಿರಿ. ನೀವು ನಿಶ್ಚಯವಾಗಿಯೂ ಪೀಡಿಸಲ್ಪಡುವಿರಿ. ನಿಮ್ಮ ಅನೇಕ ಆಕಾಂಕ್ಷೆಗಳು ನೆರವೇರದೆ ಹೋಗಬಹುದು. ಆದರೆ ನೀವು ಅದರ ಬಗ್ಗೆ ದುಃಖಿತ ಹೃದಯಿಗಳಾಗಬೇಡಿರಿ. ಏಕೆಂದರೆ ನೀವು ಅವನ ಮಾರ್ಗದಲ್ಲಿ ದೃಢನಿಷ್ಠೆಯಿಂದ ಇರುವಿರೋ ಇಲ್ಲವೋ ಎಂಬುದನ್ನು ತಿಳಿಯಲು ನಿಮ್ಮ ದೇವನು ನಿಮ್ಮನ್ನು ಆ ರೀತಿ ಪರೀಕ್ಷಿಸುತ್ತಿದ್ದಾನೆ. ಆಕಾಶದಲ್ಲಿ ದಿವ್ಯದೂತರೂ ನಿಮ್ಮನ್ನು ಪ್ರಶಂಸಿಸಬೇಕೆಂದು ನೀವು ಬಯಸುವಿರಾದರೆ ನೀವು ಅಲ್ಲಾಹನ ಮಾರ್ಗದಲ್ಲಿ ಪೆಟ್ಟುತಿಂದು ಸಂತೋಷಪಡಿರಿ ಮತ್ತು ಬೈಗಳನ್ನು ಕೇಳಿ ದೇವನಿಗೆ ಕೃತಜ್ಞತೆ ಅರ್ಪಿಸಿರಿ. ನೀವು ಪರಾಜಯ ಅನುಭವಿಸಬೇಕಾಗಿ ಬಂದರೂ (ನೀವು ದೇವನೊಂದಿಗೆ ಇರಿಸಿದ ನಿಮ್ಮ ಸಂಬಂಧ) ವಿಚ್ಛೇದಿಸಬೇಡಿರಿ. ನೀವು ದೇವನ ಕೊನೆಯ ಜನಾಂಗವಾಗಿದ್ದೀರಿ. ಆದುದರಿಂದ ನೀವು ಮಾಡುವ ಸತ್ಕಾರ್ಯಗಳು ಅತ್ಯುನ್ನತ ಮಟ್ಟದವುಗಳಾಗಲಿ.

*(ಕಿಶ್ತೀ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 15)*

ದೇವನು ಆಕಾಶದಲ್ಲಿ ನಿಮ್ಮಿಂದ ತೃಪ್ತನಾಗಬೇಕಾದರೆ ನೀವು ಪರಸ್ಪರ ಒಂದೇ ತಾಯಿಯಿಂದ ಜನಿಸಿದ ಇಬ್ಬರು ಸಹೋದರರ ಹಾಗೆ ಆಗಿರಿ. ನಿಮ್ಮಲ್ಲಿ ಯಾರು ತನ್ನ ಸಹೋದರನ ತಪ್ಪುಗಳನ್ನು ಹೆಚ್ಚಾಗಿ ಕ್ಷಮಿಸುತ್ತಾನೋ ಆತನೇ ಹೆಚ್ಚು ಗೌರವಾರ್ಹನಾಗಿದ್ದಾನೆ. ಆದರೆ ಹಠ ತೋರಿಸುವವನು ಮತ್ತು ಕ್ಷಮಿಸದವನು ಭಾಗ್ಯಹೀನನಾಗಿದ್ದಾನೆ. ಆತನಿಗೆ ನನ್ನೊಂದಿಗೆ ಯಾವುದೇ ಸಂಬಂಧವಿಲ್ಲ. ನೀವು ಅಲ್ಲಾಹನ ಶಾಪದ ಬಗ್ಗೆ ಭಯಭೀತರಾಗಿರಿ. ಅವನು ಬಹಳ ಪವಿತ್ರನೂ ತನ್ನ ಸ್ನೇಹಕ್ಕೆ ಪಾತ್ರರಾದವರ ಗೌರವವನ್ನು ಸಂರಕ್ಷಿಸುವವನೂ ಆಗಿದ್ದಾನೆ. ದುಷ್ಕರ್ಮಿಯು ಅವನ ಸಾಮೀಪ್ಯವನ್ನು ಗಳಿಸಲಾರ. ದುರಹಂಕಾರಿಯು ಅವನ ಸಾಮೀಪ್ಯ ಗಳಿಸಲಾರ. ದೌರ್ಜನ್ಯಕಾರನು ಅವನ ಸಾಮೀಪ್ಯ ಗಳಿಸಲಾರ. ವಿಶ್ವಾಸಘಾತಕನು ಅವನ ಸಾಮೀಪ್ಯ ಗಳಿಸಲಾರ. ಅವನ ನಾಮದ ಗೌರವಕ್ಕಾಗಿ ತನ್ನದೆಲ್ಲವನ್ನೂ ಅರ್ಪಿಸಲು ಸಿದ್ಧನಾಗದವನು ಅವನ ಸಾಮೀಪ್ಯ ಗಳಿಸಲಾರ. ನಾಯಿಗಳು, ಇರುವೆಗಳು ಮತ್ತು ರಣಹದ್ದುಗಳ ಹಾಗೆ ಪ್ರಾಪಂಚಿಕ ಸುಖವನ್ನು ಮುತ್ತುವವರು ಮತ್ತು ಕೇವಲ ಲೌಕಿಕ ಸುಖಭೋಗಗಳಿಂದ ಸಂತೃಪ್ತರಾದವರು ಅವನ ಸಾಮೀಪ್ಯ ಗಳಿಸಲಾರ. ಪ್ರತಿಯೊಂದು ದುರ್ನೋಟದ ಕಣ್ಣು ಅವನಿಂದ ದೂರವಾಗಿದೆ. ಪ್ರತಿಯೊಂದು ಅಪವಿತ್ರ ಹೃದಯ ಅವನನ್ನು ಅರಿತಿರಲಾರದು. ಅವನಿಗಾಗಿ ಕಷ್ಟದ ಬೆಂಕಿಯಲ್ಲಿರುವವರು ನರಕದ ಬೆಂಕಿಯಿಂದ ರಕ್ಷಿಸಲ್ಪಡುವರು. ಅವನಿಗಾಗಿ ಪ್ರಾಪಂಚಿಕ ಸಂಬಂಧಗಳನ್ನು ವಿಚ್ಛೇದಿಸುವವನಿಗೆ ಅವನು ಲಭಿಸುವನು. ನೀವು ಹೃತ್ಪೂರ್ವಕವಾಗಿ, ನಿಷ್ಕಳಂಕ ಮತ್ತು ಉತ್ಸಾಹಪೂರಿತವಾದ ಕೃತ್ಯಗಳಿಂದ ಅವನ ಸ್ನೇಹಿತರಾಗಲು ಪ್ರಯತ್ನಿಸಿರಿ; ಆಗ ಅವನು ಸಹ ನಿಮ್ಮ ಸ್ನೇಹಿತನಾಗುವನು. ನೀವು ನಿಮ್ಮ ಅಧೀನಕ್ಕೊಳಗಾದವರಿಗೆ, ನಿಮ್ಮ ಪತ್ನಿಯರಿಗೆ ಮತ್ತು ನಿಮ್ಮ ಬಡ ಸಹೋದರರಿಗೆ ದಯೆ ತೋರಿಸಿರಿ. ನೀವು ಹೀಗೆ ಮಾಡಿದರೆ ಆಕಾಶದಲ್ಲಿ ನಿಮಗೆ ದಯೆ ತೋರಿಸಲ್ಪಡುವುದು. ನೀವು ಸತ್ಯವಾಗಿಯೂ ಅವನಿಗೆ ಸೇರಿದವರಾಗಿರಿ; ಅದರ ಫಲವಾಗಿ ಅವನೂ ನಿಮಗೆ ಸೇರಿದವನಾಗುವನು.

*(ಕಿಶ್ತೀ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 12 – 13)*

ನಾನು ನನ್ನ ಅನುಯಾಯಿಗಳಿಗೆ ಹಿತೋಪದೇಶ ನೀಡ ಬಯಸುತ್ತೇನೆ: ನೀವು ದುರಹಂಕಾರದಿಂದ ದೂರ ಸರಿಯಿರಿ. ಏಕೆಂದರೆ ದುರಹಂಕಾರವು ಸರ್ವಶಕ್ತನಾದ ದೇವನ ದೃಷ್ಟಿಯಲ್ಲಿ ಅತ್ಯಂತ

ಅಸಹನೀಯವಾಗಿದೆ. ಪ್ರಾಯಶಃ ದುರಹಂಕಾರ ಏನೆಂದು ನಿಮಗೆ ಸರಿಯಾಗಿ ತಿಳಿಯದಿರಬಹುದು. ನೀವು ನನ್ನಿಂದ ಅದೇನೆಂದು ತಿಳಿದುಕೊಳ್ಳಿರಿ. ನಾನು ದೇವನ ವಾಕ್ಯಾಮೃತದಿಂದ ಅನುಗ್ರಹಿಸಲ್ಪಟ್ಟು ಮಾತನಾಡುತ್ತಿದ್ದೇನೆ:

ಒಬ್ಬ ವ್ಯಕ್ತಿಯು ತನ್ನ ಸಹೋದರನಿಗಿಂತ ತಾನು ಹೆಚ್ಚು ವಿದ್ಯಾವಂತನೂ ಹೆಚ್ಚು ಬುದ್ಧಿವಂತನೂ ಅಥವಾ ಹೆಚ್ಚು ಚಾತುರ್ಯವುಳ್ಳವನೂ ಎಂದು ತನ್ನನ್ನು ಬಗೆದು ಆತನನ್ನು ತಾತ್ಸಾರದಿಂದ ಕಾಣುವನಾದರೆ ಅಂತಹವನು ದುರಹಂಕಾರಿಯಾಗಿದ್ದಾನೆ. ಏಕೆಂದರೆ ಆತನು ದೇವನನ್ನು ಎಲ್ಲ ಬುದ್ಧಿ ಮತ್ತು ಜ್ಞಾನದ ಉಗಮಸ್ಥಾನವೆಂದು ಬಗೆಯುವುದಿಲ್ಲ ಮತ್ತು ಆತನು ತನ್ನ ಬಗ್ಗೆ ತಾನು ಮಹತ್ವವುಳ್ಳವನೆಂದು ಭಾವಿಸಿರುವನು. ಹೀಗೆ ದುರಹಂಕಾರಿಯಾಗಿರುವವನನ್ನು ಹುಚ್ಚನನ್ನಾಗಿ ಮಾಡಿ ಆತನು ನಿಕೃಷ್ಟನೆಂದು ಭಾವಿಸುವ ಆತನ ಸಹೋದರನಿಗೆ ಆತನಿಗಿಂತ ಉತ್ತಮ ಬುದ್ಧಿ, ಜ್ಞಾನ ಮತ್ತು ಚಾತುರ್ಯ ನೀಡಲು ದೇವನು ಶಕ್ತನಲ್ಲವೇ? ಇದೇ ರೀತಿ ತನ್ನ ಧನ, ಸಂಪತ್ತು ಮತ್ತು ಸ್ಥಾನಮಾನಗಳನ್ನು ಯೋಚಿಸಿಕೊಂಡು ತನ್ನ ಸಹೋದರನನ್ನು ತಾತ್ಸಾರದಿಂದ ಕಾಣುವವನೂ ದುರಹಂಕಾರಿಯಾಗಿದ್ದಾನೆ. ಏಕೆಂದರೆ ಈ ಧನಸಂಪತ್ತು ಮತ್ತು ಸ್ಥಾನಮಾನಗಳು ದೇವನೇ ಆತನಿಗೆ ನೀಡಿದವುಗಳಾಗಿವೆ ಎಂಬುದನ್ನು ಆತನು ಮರೆತುಬಿಟ್ಟಿರುವನು. ಆತನು ಅಂಧನಾಗಿರುವನು. ದೇವನು ಆತನ ಮೇಲೆ ಒಂದು ವಿಪತ್ತನ್ನು ಇಳಿಸಿ ಫಕ್ಕನೆ ಆತನನ್ನು ನಿಕೃಷ್ಟರಲ್ಲಿ ನಿಮ್ನ ತರದವನನ್ನಾಗಿ ಮಾಡಲು ಮತ್ತು ಆತನು ತಾತ್ಸಾರಭಾವದಿಂದ ಕಾಣುತ್ತಿದ್ದ ಆತನ ಸಹೋದರನಿಗೆ ಆತನಿಗಿಂತ ಹೆಚ್ಚಿನ ಐಶ್ವರ್ಯ ಮತ್ತು ಸ್ಥಾನಮಾನ ನೀಡಲು ದೇವನು ಶಕ್ತನೆಂದು ಆತನು ಅರಿತುಕೊಂಡಿಲ್ಲ. ಇದೇ ರೀತಿ ಯಾರು ತನ್ನ ಶಾರೀರಿಕ ಆರೋಗ್ಯದ ಬಗ್ಗೆ ಗರ್ವಪಡುತ್ತಾ ಅಥವಾ ತನ್ನ ಸೌಂದರ್ಯ ಮತ್ತು ಶಕ್ತಿಯ ಬಗ್ಗೆ ಜಂಬಪಡುತ್ತಾ ತನ್ನ ಸಹೋದರನನ್ನು ಪರಿಹಾಸ ಮಾಡಲು ಆತನಿಗೆ ವ್ಯಂಗ್ಯನಾಮಗಳನ್ನು ಇರಿಸುತ್ತಾನೋ ಮತ್ತು ಆತನ ಶಾರೀರಿಕ ವೈಕಲ್ಯಗಳನ್ನು ಜನರಲ್ಲಿ ಪ್ರಚಾರ ಮಾಡುತ್ತಾನೋ ಆತನು ಸಹ ದುರಹಂಕಾರಿಯಾಗಿರುವನು. ಆತನಲ್ಲಿ ಶಾರೀರಿಕ ವೈಕಲ್ಯಗಳನ್ನು ಹಠಾತ್ತಾಗಿ ಉಂಟುಮಾಡಲು ಮತ್ತು ಆತನು ಪರಿಹಾಸ ಮಾಡುತ್ತಿದ್ದ ಆತನ ಸಹೋದರನಿಗಿಂತ ಆತನನ್ನು ಹೆಚ್ಚು ಕೆಟ್ಟ ಸ್ಥಿತಿಗೆ ಒಳಪಡಿಸಲು ಶಕ್ತನಾದ ದೇವನ ಬಗ್ಗೆ ಆತನು ತಿಳಿದುಕೊಂಡಿಲ್ಲ.

*(ನುಝೂಲುಲ್ ಮಸೀಹ್; ರೂಹಾನೀ ಖಝಾಇನ್ ಸಂಪುಟ 18, ಪುಟ 402)*

ಬೇರೆಯವರ ಬಗ್ಗೆ ಕೆಟ್ಟದ್ದಾಗಿ ಯೋಚಿಸಿ ಅವರ ಕೃತ್ಯಗಳ ಬಗ್ಗೆ ದುರುದ್ದೇಶಗಳನ್ನು ಆರೋಪಿಸುವುದು ಬಹಳ ಕೆಟ್ಟ ಪರಿಣಾಮವನ್ನು ಉಂಟುಮಾಡುವ ಒಂದು ವಿಪತ್ತಾಗಿದೆ. ಪ್ರಜ್ವಲಿಸುವ ಬೆಂಕಿಯು ಕಸಕಡ್ಡಿಗಳನ್ನು ಸುಟ್ಟು ಹಾಕುವಂತೆ ಅದು ಸತ್ಯವಿಶ್ವಾಸವನ್ನು ಬೇಗನೆ ಸುಟ್ಟು ಹಾಕುತ್ತದೆ. ದೇವನಿಂದ ನಿಯುಕ್ತರಾದವರ ಬಗ್ಗೆ ಕೆಟ್ಟದಾಗಿ ಯೋಚಿಸಿ ಅವರ ಬಗ್ಗೆ ದೋಷಾರೋಪಣೆ ಮಾಡುವವರಿಗೆ ದೇವನೇ ಶತ್ರುವಾಗುತ್ತಾನೆ ಮತ್ತು ಅವನು ತಾನು ನಿಯುಕ್ತರನ್ನಾಗಿ ಮಾಡಿದವರ ರಕ್ಷಣೆಗೆ ಎದ್ದು ನಿಲ್ಲುತ್ತಾನೆ. ದೇವನು ತನಗೆ ಪ್ರಿಯರಾದವರ ಗೌರವವನ್ನು ಹೇಗೆ ರಕ್ಷಿಸುತ್ತಾನೆಂದರೆ ಅವನ ಹಾಗೆ ರಕ್ಷಿಸುವವರು ಬೇರೆ ಯಾರೂ ಇರುವುದಿಲ್ಲ. ನನ್ನ ಮೇಲೆ ವಿವಿಧ ಆಕ್ರಮಣಗಳು ನಡೆದಾಗ ದೇವನೇ ನನ್ನ ಗೌರವ ರಕ್ಷಾತ್ಮಕ ಕಾರ್ಯಗಳನ್ನು ಕೈಗೊಂಡನು.

*(ಅಲ್‌ವಸಿಯ್ಯತ್; ರೂಹಾನೀ ಖ಼ಝಾ಼ಇನ್ ಸಂಪುಟ 20, ಪುಟ 317)*

ನಾನು ಸತ್ಯವಾಗಿ ಹೇಳುತ್ತೇನೆ: ಪರರ ಬಗ್ಗೆ ಕೆಟ್ಟ ಯೋಚನೆಯು ಬಹಳ ಕೆಟ್ಟ ವಿಪತ್ತಾಗಿದೆ. ಅದು ಮನುಷ್ಯನ ಸತ್ಯವಿಶ್ವಾಸವನ್ನು ಧ್ವಂಸಗೊಳಿಸುತ್ತದೆ; ಅವನನ್ನು ಸತ್ಯ ಮತ್ತು ನೇರಮಾರ್ಗದಿಂದ ದೂರಕ್ಕೆಸೆದು ಬಿಡುತ್ತದೆ ಮತ್ತು ಅವನ ಮಿತ್ರರನ್ನು ಶತ್ರುಗಳನ್ನಾಗಿ ಮಾಡುತ್ತದೆ. ಸಿದ್ದೀಖ್ (ಸತ್ಯಸಂಧ) ಎಂಬ ಮಹತ್ತಾದ ಪದವಿ ಪಡೆಯಲು ಮನುಷ್ಯನು ಅನ್ಯರ ಮಾತು ಮತ್ತು ಕೃತಿಯ ಬಗ್ಗೆ ಕೆಟ್ಟದ್ದಾಗಿ ಯೋಚಿಸುವುದನ್ನು ಸಂಪೂರ್ಣ ಬಿಟ್ಟುಬಿಡುವುದು ಅತ್ಯಾವಶ್ಯಕವಾಗಿದೆ. ಯಾರಿಗಾದರೂ ಯಾರ ಬಗ್ಗೆಯಾದರೂ ಕೆಟ್ಟ ಯೋಚನೆ ಉಂಟಾದರೆ ಅಂತಹ ವ್ಯಕ್ತಿ ಕೂಡಲೇ ದೇವನ ಕ್ಷಮೆ ಯಾಚಿಸಿ ಪ್ರಾರ್ಥನೆಗಳನ್ನು ಮಾಡಲಿ. ಹೀಗೆ ಮಾಡಿದರೆ ಅದರ (ಕೆಟ್ಟ ಯೋಚನೆಯ) ಪಾಪದೋಷದಿಂದ ಮತ್ತು ಅದರಿಂದ ಉಂಟಾಗುವ ಕೆಟ್ಟ ಪರಿಣಾಮಗಳಿಂದ ರಕ್ಷಿಸಲ್ಪಡುವನು. ಪರರ ಬಗ್ಗೆ ಕೆಟ್ಟ ಯೋಚನೆಗಳನ್ನು ನೀವು ಸಾಮಾನ್ಯ ಸಂಗತಿಯೆಂದು ತಿಳಿಯಬೇಡಿರಿ. ಅದು ಬಹಳ ಅಪಾಯಕರವಾದ ರೋಗವಾಗಿದೆ. ಆ ರೋಗದಿಂದ ಪೀಡಿತನಾದ ಮನುಷ್ಯನು ಬೇಗನೆ ನಾಶಹೊಂದುತ್ತಾನೆ.

*(ಮಲ್‌ಫೂಝಾ಼ತ್ ಸಂಪುಟ 1, ಪುಟ 372)*

ನೀವು ಪರರೊಂದಿಗೆ ಸಹಾನುಭೂತಿ ಹೊಂದುವ ಮೂಲಕ ಮತ್ತು ನಿಮ್ಮ ಆತ್ಮವನ್ನು ಪರಿಶುದ್ಧಗೊಳಿಸುವ ಮೂಲಕ ಪವಿತ್ರಾತ್ಮದ ಗುಣಗಳ

ಒಂದು ಭಾಗವನ್ನು ಪಡೆಯಿರಿ. ಪವಿತ್ರಾತ್ಮದ ಸಹಾಯವಿಲ್ಲದೆ ನೀವು ವಾಸ್ತವಿಕ ಭಯಭಕ್ತಿ ಗಳಿಸಲಾರಿರಿ. ನೀವು ನಿಮ್ಮ ಸ್ವಂತ ಆಶಾಭಿಲಾಷೆಗಳನ್ನು ಸಂಪೂರ್ಣವಾಗಿ ಬಿಟ್ಟು ದೇವನ ಪ್ರೀತಿ ಗಳಿಸಲು ಅವನ ಮಾರ್ಗವನ್ನು ಅದು ಎಷ್ಟು ದುರ್ಗಮವಾಗಿದ್ದರೂ, ಅನುಸರಿಸಲು ಮುಂದುವರಿಯುವವ ರಾಗಿರಿ. ನೀವು ಪ್ರಾಪಂಚಿಕ ಸುಖ ಭೋಗಗಳಲ್ಲಿ ಮೈಮರೆತವರಾಗಬೇಡಿರಿ. ಅದು ನಿಮ್ಮನ್ನು ದೇವನಿಂದ ಅಗಲಿಸಿ ಬಿಡುವುದು. ನೀವು ದೇವನ ಪ್ರೀತಿ ಸಂಪಾದಿಸಲು ಕಠಿಯಾದ ಜೀವಿತಕ್ರಮವನ್ನು ಸ್ವೀಕರಿಸಿರಿ. ದೇವನು ಸಂಪ್ರೀತ ನಾಗುವ ನೋವು ದೇವನು ಅತೃಪ್ತನಾಗುವ ಸುಖಕ್ಕಿಂತ ಉತ್ತಮವಾಗಿದೆ. ದೇವನು ಸಂಪ್ರೀತನಾಗುವ ಸೋಲು ದೇವನು ಅತೃಪ್ತನಾಗುವ ಗೆಲುವಿಗಿಂತ ಉತ್ತಮವಾಗಿದೆ. ದೇವನ ಕೋಪಕ್ಕೆ ನಿಮ್ಮನ್ನು ಸಮೀಪಗೊಳಿಸುವ (ಅನ್ಯರ ಮೇಲಿನ ನಿಮ್ಮ) ಪ್ರೇಮವನ್ನು ನೀವು ಬಿಟ್ಟುಬಿಡಿರಿ. ನೀವು ಪರಿಶುದ್ಧ ಹೃದಯರಾಗಿ ಅವನ ಕಡೆಗೆ ಬಂದರೆ ಅವನು ನಿಮಗೆ ಪ್ರತಿಯೊಂದು ಮಾರ್ಗದಲ್ಲಿಯೂ ಸಹಾಯ ಮಾಡುವನು ಮತ್ತು ಯಾವುದೇ ಶತ್ರು ನಿಮಗೆ ನಷ್ಟವನ್ನುಂಟು ಮಾಡಲು ಶಕ್ತನಾಗಲಾರನು.

*(ಅಲ್ ವಸಿಯ್ಯತ್; ರೂಹಾನೀ ಖಝಾಇನ್ ಸಂಪುಟ 20, ಪುಟ 307)*

ಭಯಭಕ್ತಿಯ ಎಲ್ಲ ಸೂಕ್ಷ್ಮ ಮಾರ್ಗಗಳಲ್ಲಿ ನಡೆಯುವುದರಲ್ಲಿಯೇ ಮನುಷ್ಯನ ಎಲ್ಲ ಆಧ್ಯಾತ್ಮಿಕ ಸೌಂದರ್ಯವಿದೆ....... ಮನುಷ್ಯನು ತಾನು ಸತ್ಯವಿಶ್ವಾಸ ಸ್ವೀಕರಿಸುವಾಗ ಮಾಡಿದ ಪ್ರತಿಜ್ಞೆಗಳನ್ನು ಮತ್ತು ದೇವನು ಆತನಿಗಿತ್ತ ವಿಶ್ವಸ್ತ ನಿಧಿಗಳನ್ನು ಆತನು ಆತನ ಶಕ್ತಿ ಸಾಮರ್ಥ್ಯಕ್ಕನುಸಾರವಾಗಿ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು........ ಅಲ್ಲದೆ ಆತನು ಮನುಷ್ಯರ ಬಗ್ಗೆ ಇರುವ ತನ್ನ ಕರ್ತವ್ಯಗಳನ್ನು ಸಹ ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗಿದೆ. ಮನುಷ್ಯನ ಆಧ್ಯಾತ್ಮಿಕ ಸೌಂದರ್ಯ ಈ ನಡೆವಳಿಕೆಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ದೇವನು ಪವಿತ್ರ ಖುರ್‌ಆನಿನಲ್ಲಿ ಭಯಭಕ್ತಿಯನ್ನು “ಉಡುಗೆ” ಎಂದು ಹೆಸರಿಸಿರುವನು. ಭಯಭಕ್ತಿಯ ಉಡುಗೆ (ಲಿಬಾಸುತ್ತಖ್ವಾ) ಎಂಬುದು ಪವಿತ್ರ ಖುರ್‌ಆನಿನ ಒಂದು ನುಡಿಗಟ್ಟಾಗಿದೆ. ಆಧ್ಯಾತ್ಮಿಕ ಸೌಂದರ್ಯ ಮತ್ತು ಆಧ್ಯಾತ್ಮಿಕ ಬೆಳವಣಿಗೆ ಭಯಭಕ್ತಿಯಿಂದಲೇ ಉಂಟಾಗುತ್ತವೆ ಎಂದು ಇದು ಸೂಚಿಸುತ್ತದೆ. ದೇವನು ಮನುಷ್ಯನಿಗೆ ವಿಶ್ವಸ್ತ ನಿಧಿಯಾಗಿ ನೀಡಿದ ಅನುಗ್ರಹಗಳನ್ನು, ಮನುಷ್ಯನು ದೇವನೊಂದಿಗೆ ಮಾಡಿದ ವಿಶ್ವಾಸಕ್ಕೆ ಸಂಬಂಧಿಸಿದ ಪ್ರತಿಜ್ಞೆಗಳನ್ನು ಮತ್ತು ಸೃಷ್ಟಿಗಳ ಎಲ್ಲ ವಿಶ್ವಸ್ತನಿಧಿಗಳನ್ನೂ ಅವರೊಂದಿಗೆ ಮಾಡಿಕೊಂಡಿರುವ ಪ್ರತಿಜ್ಞೆಗಳನ್ನೂ ಎಚ್ಚರಿಕೆಯಿಂದ

ಕಾಪಾಡಿಕೊಂಡು ನಡೆಯುವುದೇ ಯಥಾರ್ಥವಾದ ಭಯಭಕ್ತಿ (ತಖ್ವಾ) ಆಗಿದೆ. ಎಂದರೆ ಭಯಭಕ್ತಿಯನ್ನು ಹೊಂದಿದವನು ಪ್ರತಿಯೊಂದು ಕಾರ್ಯದ ಸೂಕ್ಷ್ಮದಿಂದ ಸೂಕ್ಷ್ಮತರವಾದ ಗುಣದೋಷಗಳನ್ನು ಪರಿಗಣಿಸಿ ಕಾರ್ಯೋನ್ಮುಖನಾಗಬೇಕು.

*(ಬರಾಹೀನೆ ಅಹ್ಮದಿಯಾ ಭಾಗ 5; ರೂಹಾನೀ ಖ಼ಝಾಇನ್*
*ಸಂಪುಟ 21, ಪುಟ 209 – 210)*

## ಅಹ್ಮದಿಯಾ ಜಮಾಅತಿನ ಮುಂದಿನ ಸ್ಥಿತಿ.

ನಾನು ಸತ್ಯವಂತನೆಂದೂ ದೇವನ ದಯೆಯಿಂದ ನಾನೇ ಈ ಹೋರಾಟದಲ್ಲಿ ಜಯಶಾಲಿಯಾಗುವೆನೆಂದೂ ಪೂರ್ಣ ಭರವಸೆಯಿಂದಲೂ ದೃಢನಂಬಿಕೆಯಿಂದಲೂ ಘೋಷಿಸುತ್ತೇನೆ. ನಾನು ದೂರಗಾಮಿ ದೃಷ್ಟಿಯಿಂದ ನೋಡುವಾಗ ನಾನು ಲೋಕವನ್ನು ನನ್ನ ಸತ್ಯದ ಪಾದಗಳಡಿಯಲ್ಲಿ ಕಾಣುತ್ತಿದ್ದೇನೆ. ನಾನು ಮಹತ್ತರವಾದ ಜಯಗಳಿಸುವ ಕಾಲವು ಸಮೀಪವಾಗಿದೆ. ಏಕೆಂದರೆ ನನ್ನ ನಾಲಗೆಗೆ ಬೆಂಬಲವಾಗಿ ಇನ್ನೊಂದು ನಾಲಗೆ ಮಾತನಾಡುತ್ತಿದೆ. ನನ್ನ ಕೈಯನ್ನು ಬಲಪಡಿಸಲು ಇನ್ನೊಂದು ಕೈ ಚಲಿಸುತ್ತಿದೆ. ಇದನ್ನೆಲ್ಲ ಲೋಕ ನೋಡುತ್ತಾ ಇಲ್ಲ; ಆದರೆ ನಾನು ನೋಡುತ್ತಿರುವೆನು. ನನ್ನೊಳಗೆ ಒಂದು ದೈವಿಕ ಚೇತನ ಮಾತನಾಡುತ್ತಿದೆ. ಅದು ನನ್ನ ಶಬ್ದ ಶಬ್ದಗಳಿಗೂ ಅಕ್ಷರ ಅಕ್ಷರಗಳಿಗೂ ಜೀವ ನೀಡುತ್ತಿದೆ. ಆಕಾಶದಲ್ಲಿ ಒಂದು ಉತ್ಸಾಹ ಮತ್ತು ಉತ್ತೇಜಕ ಸ್ಥಿತಿಯುಂಟಾಗಿದೆ. ಅದು ಈ ಒಂದು ಮುಷ್ಟಿ ಮಣ್ಣನ್ನು ಒಂದು ಬೊಂಬೆಯನ್ನಾಗಿ ಮಾಡಿ ನಿಲ್ಲಿಸಿದೆ. ಪಾಪಗಳಿಗೆ ಪಶ್ಚಾತ್ತಾಪಗೊಂಡು ದೇವನ ಕಡೆಗೆ ಮರಳುವ ಬಾಗಿಲು ಮುಚ್ಚಲ್ಪಡದ ಪ್ರತಿಯೊಬ್ಬನು ಬೇಗನೆ ತಿಳಿದುಕೊಳ್ಳುವನು – ನಾನು ನನ್ನಿಷ್ಟದ ಪ್ರಕಾರ ವಾದಿಸಿದವನಲ್ಲ ಎಂದು. ಸತ್ಯವಂತನನ್ನು ಗುರುತಿಸಲಾರದ ಕಣ್ಣುಗಳು ದೃಷ್ಟಿಯನ್ನು ಹೊಂದಿವೆಯೋ? ಈ ದೈವಿಕ ಕರೆಯನ್ನು ಲಕ್ಷಿಸದವನು ಸಜೀವವಾಗಿ ಇರುವನೆಂದು ಗ್ರಹಿಸಲ್ಪಡುವನೇ?

*(ಇಝ್ಹಾಲೆ ಔಹಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 403)*

ಇದು (ಅಹ್ಮದಿಯಾ ಜಮಾಅತ್) ದೇವನಿಂದ ನೆಡಲ್ಪಟ್ಟ ಗಿಡವೆಂದು ದೃಢವಾಗಿ ತಿಳಿದುಕೊಳ್ಳಿರಿ. ದೇವನು ನಿಶ್ಚಯವಾಗಿಯೂ ಅದನ್ನು ನಾಶಪಡಿಸಲಾರನು. ಅದು ಪೂರ್ಣ ಬೆಳವಣಿಗೆ ಪಡೆಯುವ ತನಕ ಅವನು ತೃಪ್ತನಾಗಲಾರನು. ಅವನೇ ಅದಕ್ಕೆ ನೀರೆರೆಯುವನು; ಅದರ ಸುತ್ತಲೂ ಬೇಲಿ ಕಟ್ಟುವನು ಮತ್ತು ಅದಕ್ಕೆ ಅತ್ಯಾಶ್ಚರ್ಯಕರವಾದ ಬೆಳವಣಿಗೆಯನ್ನು ನೀಡುವನು. ನೀವು ಅದರ ನಾಶಕ್ಕೆ ಏನೆಲ್ಲ ಪ್ರಯತ್ನ ಮಾಡಿಲ್ಲ? ಇದು ಮಾನವ ಹಸ್ತದಿಂದ ನೆಡಲ್ಪಟ್ಟುದಾಗಿದ್ದರೆ ಈ ಮರ ಎಂದೋ ಕಡಿಯಲ್ಪಡುತ್ತಿತ್ತು ಮತ್ತು ಅದರ ಹೆಸರಾಗಲೀ ಅವಶೇಷಗಳಾಗಲೀ ಉಳಿಯುತ್ತಿರಲಿಲ್ಲ.

*(ಅಂಜಾಮೆ ಆಥಮ್; ರೂಹಾನೀ ಖಝಾಇನ್ ಸಂಪುಟ 11, ಪುಟ 64)*

# ಅಂತಿಮ ವಿಜಯ

ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು.

*(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖ಼ಝಾ಼ಇನ್ ಸಂಪುಟ 21, ಪುಟ 427)*

# ಆತ್ಮ

(ಶರೀರ ಮತ್ತು ಆತ್ಮದ ಬಾಂಧವ್ಯದ ಕುರಿತು) ಗಾಢವಾಗಿ ಚಿಂತಿಸಿದರೆ ಆತ್ಮದ ತಾಯಿ ಶರೀರವೆಂದೇ ತಿಳಿಯುತ್ತದೆ. ಗರ್ಭಿಣಿ ಸ್ತ್ರೀಯ ಗರ್ಭಾಶಯದೊಳಗೆ ಆತ್ಮ ಮೇಲಿನಿಂದ ಎಂದಾದರೂ ಬಂದು ಬೀಳುವುದಿಲ್ಲ. ಅದು ಒಂದು ಪ್ರಕಾಶವಾಗಿರುತ್ತದೆ. ಅದು ವೀರ್ಯದಲ್ಲಿ ಗುಪ್ತರೂಪದಲ್ಲಿ ರಹಸ್ಯವಾಗಿರುತ್ತದೆ. ಅದು ಭ್ರೂಣದ ಬೆಳವಣಿಗೆಯೊಂದಿಗೆ ಪ್ರಕಾಶಿಸುತ್ತಾ ಹೋಗುತ್ತದೆ. ವೀರ್ಯದಿಂದ ಗರ್ಭಾಶಯದಲ್ಲಿ ರೂಪುಗೊಳ್ಳುವ ಭ್ರೂಣದಿಂದಲೇ ಆತ್ಮ ಉದ್ಭವವಾಗುತ್ತದೆ ಎಂದು ಪವಿತ್ರ ಖುರ್‌ಆನ್‌ನಿಂದ ಸ್ಪಷ್ಟವಾಗುತ್ತದೆ: **ಸುಮ್ಮ ಅನ್‌ಶಅ್‌ನಾಹು ಖ಼ಲ್‌ಖನ್ ಆಖರ್. ಫತಬಾರಕಲ್ಲಾಹು ಅಹ್‌ಸನುಲ್ ಖ಼ಾಲಿಖೀನ್** *(23:15)*

*ಭಾವಾರ್ಥ:*

ನಾವು ಅನಂತರ ಗರ್ಭಾಶಯದಲ್ಲಿ ರೂಪಗೊಂಡ ಶರೀರವನ್ನು ಇನ್ನೊಂದು ಹೊಸ ಸೃಷ್ಟಿಕ್ರಿಯೆಗೆ ಒಳಪಡಿಸುತ್ತೇವೆ. ಅದರಿಂದ ಹೊಸದಾದೊಂದು ಸೃಷ್ಟಿ ವಿಕಾಸಗೊಳ್ಳುವಂತೆ ಮಾಡುತ್ತೇವೆ. ಅದು ಆತ್ಮ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ದೇವನು ಬಹಳ ಅನುಗ್ರಹ ನೀಡುವವನೂ ಯಾರೂ (ಅವನಿಗೆ) ಸಮಾನರಿಲ್ಲದಂತಹ ಸೃಷ್ಟಿಕರ್ತನೂ ಆಗಿರುವನು.

*(ಇಸ್ಲಾಮೀ ಉಸೂಲ್ ಕೀ ಫಲಾಸಫೀ; ರೂಹಾನೀ ಖ಼ಝ಼ಾಇನ್ ಸಂಪುಟ 10, ಪುಟ 321)*

ಯಾವುದೇ ತೋಟವು ನೀರಿಲ್ಲದೆ ಹೇಗೆ ನಳನಳಿಸುತ್ತಿರಲಾರದೋ ಹಾಗೆಯೇ ಸತ್ಕಾರ್ಯಗಳನ್ನೊಳಗೊಂಡಿರದ ವಿಶ್ವಾಸವು ಸಜೀವ ವಿಶ್ವಾಸವೆಂದು ಕರೆಯಲರ್ಹವಾಗುವುದಿಲ್ಲ. ವಿಶ್ವಾಸವಿದ್ದು ಅದಕ್ಕೆ ಅನುಯೋಜ್ಯವಾದ ಸತ್ಕೃತ್ಯಗಳಿಲ್ಲ ಎಂದಾದರೆ ಆ ವಿಶ್ವಾಸ ನಿಷ್ಫಲವಾಗಿದೆ. ಅದೇ ರೀತಿ ವಿಶ್ವಾಸವನ್ನು ಹೊಂದದೆ ಮಾಡುವ ಸತ್ಕಾರ್ಯಗಳು ನಿಷ್ಫಲದಾಯಕ ಢಾಂಬಿಕ ಕಾರ್ಯಗಳಾಗಿವೆ. ಇಸ್ಲಾಮ್ ಧರ್ಮದ ಪ್ರಕಾರ ಸ್ವರ್ಗವು ಈ ಲೋಕದಲ್ಲಿ ಮನುಷ್ಯನ ವಿಶ್ವಾಸ ಮತ್ತು ಆತನ ಸತ್ಕಾರ್ಯಗಳ ಒಂದು ಪ್ರತಿಬಿಂಬ ಮಾತ್ರವಾಗಿರುತ್ತದೆ. ಅದು ಹೊರಗಿನಿಂದ ಬಂದು ಮಾನವನಿಗೆ ಸಿಗುವಂತಹ ಹೊಸ ವಸ್ತುವೇನೂ ಅಲ್ಲ. ಮನುಷ್ಯನ ಸ್ವರ್ಗ

ಮನುಷ್ಯನೊಳಗಿನಿಂದಲೇ ಹೊರಬರುತ್ತದೆ. ಪ್ರತಿಯೊಬ್ಬನ ಸ್ವರ್ಗ ಆತನ ವಿಶ್ವಾಸ ಮತ್ತು ಆತನ ಸತ್ಕಾರ್ಯಗಳಿಂದ ರೂಪಿತವಾಗುತ್ತದೆ. ಅವುಗಳಿಂದ ಆತನಿಗೆ ಸ್ವರ್ಗಾನುಭೂತಿಯ ಸುಖ ಈ ಲೋಕದಲ್ಲಿಯೇ ಸಿಗಲು ತೊಡಗುತ್ತದೆ.

*(ಇಸ್ಲಾಮೀ ಉಸೂಲ್ ಕೀ ಫಲಾಸಫೀ; ರೂಹಾನೀ ಖ಼ಝ಼ಾಇನ್ ಸಂಪುಟ 10, ಪುಟ 390)*

# ಮರಣಾನಂತರ ಜೀವಿತ

ಪ್ರತಿಯೊಬ್ಬ ಮನುಷ್ಯನಿಗೆ ಆತನ ಮರಣಾನಂತರ ಕಷ್ಟ ಮತ್ತು ಸುಖದ ಅನುಭೂತಿಯನ್ನು ಹೊಂದಬಲ್ಲ ಒಂದು ಶರೀರ ನೀಡಲ್ಪಡುತ್ತದೆ ಎಂಬುದು ಇಸ್ಲಾಮ್ ಧರ್ಮದ ಶ್ರೇಷ್ಠ ತತ್ವಗಳಲ್ಲೊಂದಾಗಿದೆ. ಆ ಶರೀರ ಯಾವ ಮೂಲ ವಸ್ತುವಿನಿಂದ ರೂಪಿತವಾಗುತ್ತದೆ ಎಂಬುದನ್ನು ನಾವು ನಿಖರವಾಗಿ ಹೇಳಲಾರೆವು. ಏಕೆಂದರೆ ಜಡಶರೀರವು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ. ಅಲ್ಲದೆ ಮೃತವಾದ ಇದೇ ಜಡಶರೀರಗಳಲ್ಲಿ ಕೆಲವು ಚಿತೆಯಲ್ಲಿ ಭಸ್ಮೀಭೂತವಾಗುತ್ತವೆ; ಕೆಲವು ಮೃತದೇಹಗಳು ಮ್ಯೂಸಿಯಮ್‌ಗಳಲ್ಲಿ ಸುರಕ್ಷಿತವಾಗಿಡಲ್ಪಡುತ್ತವೆ ಅಥವಾ ಬೇರೆ ವಿಧಗಳಲ್ಲಿ ಗೋರಿಯಿಂದ ಹೊರಗಡೆ ದೀರ್ಘಕಾಲ ಇರಿಸಲ್ಪಡುತ್ತಿವೆ. ಮರಣಾನಂತರ ಇದೇ ಜಡಶರೀರ ಜೀವಂತವಾಗುವುದಾದರೆ ಹಾಗೆ ಯಾವುದಾದರೂ ಶರೀರ ಜೀವಂತವಾದುದನ್ನು ಜನರು ಕಾಣುತ್ತಿದ್ದರು. ಆದರೆ ಮೃತರಾದವರು ಪುನರುಜ್ಜೀವಿಸಲ್ಪಡುವುದು ಪವಿತ್ರ ಖುರ್‌ಆನ್‌ನಿಂದ ಸಾಬೀತಾಗುತ್ತದೆ. ಆದುದರಿಂದ ಮೃತನಾದ ಮನುಷ್ಯನಿಗೆ ನಾವು ನೋಡಲಾಗದ ಯಾವುದೋ ರೀತಿಯ ಹೊಸ ಶರೀರ ನೀಡಿ ಆತನನ್ನು ಪುನರುಜ್ಜೀವಿಸಲ್ಪಡಲಾಗುತ್ತದೆ ಎಂದು ನಾವು ಮನವರಿಕೆ ಮಾಡಬೇಕಾಗಿದೆ. ಆ ಶರೀರ ಈ ಜಡಶರೀರದ ಸೂಕ್ಷ್ಮ ಮೂಲವಸ್ತುಗಳಿಂದ ನಿರ್ಮಾಣವಾಗುತ್ತಿರಲೂಬಹುದು. ಆತ್ಮಕ್ಕೆ ಹೊಸದಾದೊಂದು ಶರೀರ ದೊರೆತ ಕೂಡಲೇ ಮಾನವನ ಇಂದ್ರಿಯ ಶಕ್ತಿಗಳು ಪುನಃ ಸ್ಥಾಪಿತವಾಗುತ್ತವೆ. ಆದರೆ ಈ ದ್ವಿತೀಯ ಶರೀರವು ಮೊದಲಿನ ಶರೀರಕ್ಕಿಂತ ಬಹಳ ಸೂಕ್ಷ್ಮವಾಗಿರುವ ಕಾರಣ ದೈವಿಕ ನಿಗೂಢ ಸಂಗತಿಗಳನ್ನು ಅರಿಯುವ ಬಾಗಿಲು ಬಹಳ ವಿಶಾಲವಾಗಿ ಅದಕ್ಕೆ ತೆರೆಯಲ್ಪಡುತ್ತದೆ.

*(ಕಿತಾಬುಲ್ ಬರಿಯ್ಯ; ರೂಹಾನೀ ಖ಼ಝಾಇನ್ ಸಂಪುಟ 13, ಪುಟ 70 – 71)*

# ಲೋಕದಲ್ಲಿರುವ ವಿವಿಧ ಧರ್ಮಗಳು

ಯಾವ ತತ್ವಗಳ ಮೇಲೆ ನನ್ನನ್ನು ನೆಲೆಗೊಳಿಸಲಾಗಿದೆಯೋ ಅವುಗಳಲ್ಲಿ ಒಂದು ಇದಾಗಿದೆ: ಲೋಕದಲ್ಲಿ ಪ್ರವಾದಿಗಳ ಮೂಲಕ ಸ್ಥಾಪಿತವಾಗಿ ಪ್ರಚಾರಗೊಂಡು ಲೋಕದ ಒಂದು ಭಾಗದ ಜನರು ಸ್ವೀಕರಿಸಿ ನೆಲೆನಿಲ್ಲಿಸಿರುವ ಮತ್ತು ಹೀಗೆ ಒಂದು ಕಾಲಾವಧಿ ದಾಟಿ ಹೋದ ನಂತರವೂ ನಿಶ್ಶೇಷವಾಗದೆ ಉಳಿದಿರುವ ಯಾವುದೇ ಧರ್ಮವು ತನ್ನ ಮೂಲದಲ್ಲಿ ಸುಳ್ಳಾಗಿರಲು ಸಾಧ್ಯವಿಲ್ಲ ಮತ್ತು ಅಂತಹ ಧರ್ಮಗಳ ಪ್ರವಾದಿಗಳು ಸಹ ಸುಳ್ಳುಗಾರರಲ್ಲ ಎಂದು ನನಗೆ ದೇವನು ತಿಳಿಸಿರುವನು.

*(ತುಹ್‌ಫಯೆ ಖೈಸರಿಯಾ; ರೂಹಾನೀ ಖಝಾಇನ್ ಸಂಪುಟ 12, ಪುಟ 256)*

ಈ ತತ್ವ ಅತ್ಯಂತ ಪ್ರಿಯಕರ, ಶಾಂತಿದಾಯಕ, ಮೈತ್ರಿಗೆ ತಳಪಾಯ ಹಾಕುವಂತಹದ್ದು ಮತ್ತು ನೈತಿಕ ಮೌಲ್ಯಗಳನ್ನು ವರ್ಧಿಸಲು ಸಹಾಯಕವಾದುದಾಗಿದೆ. ಅದೇನೆಂದರೆ, ಭಾರತ, ಪರ್ಶಿಯಾ, ಚೈನಾ ಅಥವಾ ಬೇರೆ ಯಾವುದೇ ರಾಜ್ಯದಲ್ಲಿ ಆಗಮಿಸಿದ ಎಲ್ಲ ಪ್ರವಾದಿಗಳನ್ನು ಸತ್ಯವಂತರೆಂದು ನಾವು ತಿಳಿದುಕೊಳ್ಳಬೇಕು; ದೇವನು ಕೋಟಿಗಟ್ಟಲೆ ಹೃದಯಗಳಲ್ಲಿ ಅವರ ಗೌರವಾದರಗಳನ್ನು ಇರಿಸಿರುವನು ಮತ್ತು ಅವರ ಧರ್ಮದ ಬೇರುಗಳನ್ನು ಬಲಪಡಿಸಿರುವನು.

*(ತುಹ್‌ಫಯೆ ಖೈಸರಿಯಾ; ರೂಹಾನೀ ಖಝಾಇನ್ ಸಂಪುಟ 12, ಪುಟ 259)*

# ಪಾಪ

ಪಾಪ ಯಥಾರ್ಥವಾಗಿ ಒಂದು ವಿಷವಾಗಿದೆ. ದೇವನಿಗೆ ವಿಧೇಯತೆ, ಅವನೊಂದಿಗೆ ಹೊಂದಬೇಕಾದ ಉತ್ಸಾಹಭರಿತ ಪ್ರೇಮ ಮತ್ತು ಅವನ ಪ್ರೇಮಭರಿತ ಸ್ಮರಣೆ - ಇವುಗಳು ಮನುಷ್ಯನಲ್ಲಿ ಇಲ್ಲದಾಗುವ ದೌರ್ಭಾಗ್ಯಕರ ಸ್ಥಿತಿಯಲ್ಲಿ ಅದು (ಪಾಪ) ಉದ್ಭವಿಸುತ್ತದೆ. ಒಂದು ವೃಕ್ಷ ಭೂಮಿಯಿಂದ ಬೇರು ಸಹಿತ ಕಿತ್ತೆಸೆಯಲ್ಪಟ್ಟಾಗ ಅದು ನೀರನ್ನು ಹೀರುವ ಶಕ್ತಿಯನ್ನು ಕಳಕೊಳ್ಳುತ್ತದೆ ಮತ್ತು ಅದು ದಿನಗಳೆದಂತೆ ಒಣಗಲು ತೊಡಗುತ್ತದೆ; ಅದರ ಹಸಿರು ಕೊನೆಗೊಳ್ಳುತ್ತದೆ. ಅಲ್ಲಾಹನ ಪ್ರೇಮದಿಂದ ಯಾರ ಹೃದಯ ಕಿತ್ತೆಸೆಯಲ್ಪಡುತ್ತದೆಯೋ ಆ ಮನುಷ್ಯನ ಸ್ಥಿತಿ ಸಹ ಹೀಗೆಯೇ ಆಗುತ್ತದೆ. ಮರ ಒಣಗುವ ಹಾಗೆ ಪಾಪವು ಮನುಷ್ಯನ ಮೇಲೆ ಪ್ರಭಾವ ಬೀರಿ ಜಯ ಗಳಿಸುತ್ತದೆ. ಮನುಷ್ಯನ ಆಧ್ಯಾತ್ಮಿಕವಾದ ಈ ಶುಷ್ಕಾವಸ್ಥೆಯನ್ನು ಹೋಗಲಾಡಿಸಲು ಮೂರು ಪ್ರಕಾರದ ದೈವಿಕ ಚಿಕಿತ್ಸೆಗಳಿವೆ:

1. ದೇವನೊಂದಿಗೆ ಪ್ರೀತಿಯನ್ನು ವೃದ್ಧಿಗೊಳಿಸುವುದು.

2. ಕ್ಷಮಾಯಾಚನೆ (ಇಸ್ತಿಗ್‌ಫಾರ್). ಇದರ ಮೂಲ ಅರ್ಥ "ಕೆಳಗೆ ದಬ್ಬುವ ಮತ್ತು ಮರೆಮಾಡುವ ಕೋರಿಕೆ" ಎಂದಾಗಿದೆ. ಮರದ ಬೇರುಗಳು ಮಣ್ಣಿನಲ್ಲಿ ಹೂತಿದ್ದು ಎಲ್ಲಿಯವರೆಗೆ ಮರೆಯಾಗಿರುವುವೋ ಅಲ್ಲಿಯವರೆಗೆ ಮರ ಹಚ್ಚಹಸುರಾಗಿ ಇರುವ ಪ್ರತೀಕ್ಷೆ ಹೊಂದಬಹುದಾಗಿದೆ.

3. ಪಶ್ಚಾತ್ತಾಪದಿಂದ ದೇವನ ಕಡೆಗೆ ಮರಳುವುದು (ತೌಬ), ಎಂದರೆ ಜೀವದಾನ ಮಾಡುವ ನೀರನ್ನು ಹೀರಲಿಕ್ಕಾಗಿ ಬಹಳ ವಿನೀತಭಾವದಿಂದ ದೇವನ ಕಡೆಗೆ ಅಭಿಮುಖವಾಗುವುದು, ಅವನಿಗೆ ತನ್ನನ್ನು ಸಮೀಪಗೊಳಿಸುವುದು ಮತ್ತು ಉತ್ತಮ ನಡೆವಳಿಕೆಗಳನ್ನು (ಸತ್ಕರ್ಮ) ಅವಲಂಬಿಸಿ ಪಾಪದ ಪರದೆಯಿಂದ ತನ್ನನ್ನು ಹೊರಬರಿಸುವುದಾಗಿದೆ. ಇದು (ತೌಬ) ಕೇವಲ ಮಾತಿನಿಂದ ಸಾಧಿಸುವಂತಹದ್ದಲ್ಲ. ಬದಲಾಗಿ, ತೌಬದ ಶ್ರೇಷ್ಠತೆ ಸತ್ಕರ್ಮಗಳೊಂದಿಗೆ ಜೋಡಿಸಲ್ಪಟ್ಟಿದೆ. ಎಲ್ಲ ಸತ್ಕರ್ಮಗಳು ಇದನ್ನು (ತೌಬವನ್ನು) ಪರಿಪೂರ್ಣಗೊಳಿಸಲಿಕ್ಕಾಗಿವೆ.

*(ಸಿರಾಜುದ್ದೀನ್ ಈಸಾಯಿ ಕೇ ಚಾರ್ ಸವಾಲೋಂ ಕಾ ಜವಾಬ್; ರೂಹಾನೀ ಖ಼ಝಾ಼ಇನ್ ಸಂಪುಟ 12, ಪುಟ 328 – 329)*

# ಮೋಕ್ಷ

ಮೋಕ್ಷದ ಬಗ್ಗೆ ಬೈಬಲ್ ಸುವಾರ್ತೆಗಳು ವಿವರಿಸಿರುವ ತತ್ವವನ್ನು [ಹಝ್ರತ್ ಈಸಾ[ಅ] ಶಿಲುಬೆಯಲ್ಲಿ ಮೃತರಾಗುವುದರಿಂದಲೇ ಪಾಪ ಪರಿಹಾರವಾಗುವುದು ಎಂಬ ತತ್ವ] ಪವಿತ್ರ ಖುರ್‌ಆನ್ ಅಂಗೀಕರಿಸುವುದಿಲ್ಲ. ಪವಿತ್ರ ಖುರ್‌ಆನ್ ಹಝ್ರತ್ ಈಸಾ ಪ್ರವಾದಿಯನ್ನು ದೇವನ ಮೆಚ್ಚುಗೆಗೆ ಮತ್ತು ಪ್ರೀತಿಗೆ ಪಾತ್ರರಾದ, ದೇವಸಾಮೀಪ್ಯ ಗಳಿಸಿದ ಮತ್ತು ಗೌರವಾರ್ಹನಾದ ಒಬ್ಬ ಪ್ರವಾದಿಯೆಂದು ಅಂಗೀಕರಿಸಿದ್ದರೂ ಅವರು ಕೇವಲ ಒಬ್ಬ ಮನುಷ್ಯರಾಗಿದ್ದರು ಎಂದು ಸಹ ಅದು ವಿವರಿಸುತ್ತದೆ. ಮೋಕ್ಷ ನೀಡಲು ಒಬ್ಬ ಪಾಪಿಯ ಪಾಪಭಾರವನ್ನು ಇನ್ನೊಬ್ಬ ನಿಷ್ಪಾಪಿಯ ಮೇಲೆ ಹೊರಿಸುವುದು ಅತ್ಯಾವಶ್ಯಕವೆಂದು ಪವಿತ್ರ ಖುರ್‌ಆನ್ ಉಪದೇಶೀಸುವುದಿಲ್ಲ. ಅಲ್ಲದೆ ಬಕರ್ ಅಪರಾಧ ಮಾಡಿದರೆ ಝೈದನ್ನು ಅಪರಾಧಿಯಾಗಿ ಹಿಡಿಯುವ ತತ್ವವನ್ನು ಬುದ್ಧಿಯೂ ಅಂಗೀಕರಿಸುವುದಿಲ್ಲ. ಈ ತತ್ವವನ್ನು ಅಂಗೀಕರಿಸಿ ಯಾವುದೇ ಲೌಕಿಕ ಸರಕಾರ ಕೂಡ ಎಂದೂ ಕಾರ್ಯ ಪ್ರವೃತ್ತವಾಗುವುದಿಲ್ಲ. ಮೋಕ್ಷದ ಬಗ್ಗೆ ಕ್ರೈಸ್ತರು ತಪ್ಪುಗ್ರಹಿಕೆಗಳನ್ನು ಹೊಂದಿರುವ ಹಾಗೆಯೇ ಆರ್ಯಸಮಾಜಿಗಳು ಸಹ ಇದೇ ರೀತಿಯ ತಪ್ಪು ಗ್ರಹಿಕೆಗಳನ್ನು ಹೊಂದಿದ್ದಾರೆ ಎಂಬುದು ದುಃಖಕರ. ಅವರು ಸಹ ಯಥಾರ್ಥವನ್ನು ಮರೆತು ಬಿಟ್ಟಿರುವರು. ಆರ್ಯ ಸಮಾಜಕ್ಕೆ ಸೇರಿದವರ ಅಭಿಪ್ರಾಯದ ಪ್ರಕಾರ ದೇವನ ಕಡೆಗೆ ಪಶ್ಚಾತ್ತಾಪದಿಂದ ಹಿಂದಿರುಗುವುದು (ತೌಬ) ಮತ್ತು ಕ್ಷಮೆಯಾಚನೆ (ಇಸ್ತಿಗ್‌ಫಾರ್) ಅರ್ಥಶೂನ್ಯವಾಗಿವೆ. ಒಂದು ಪಾಪದ ಪರಿಹಾರಕ್ಕಾಗಿ ಅದಕ್ಕೆ ಶಿಕ್ಷೆಯಾಗಿ ನಿಗದಿ ಪಡಿಸಲಾದ ವಿವಿಧ ಪುನರ್ಜನ್ಮಗಳನ್ನು ಪಡೆಯುವ ಶಿಕ್ಷೆಯನ್ನು ಅನುಭವಿಸದೇ ಮುಕ್ತಿಯನ್ನು ಪಡೆಯಲು ಸಾಧ್ಯವೇ ಆಗಲಾರದು ಎಂಬುದು ಅವರ ನಂಬಿಕೆಯಾಗಿದೆ.

*(ಚಶ್ಮಯೆ ಮಅ್‌ರಿಫತ್; ರೂಹಾನೀ ಖ಼ಝ಼ಾಇನ್ ಸಂಪುಟ 23, ಪುಟ 414)*

# ಅಲ್ಲಾಹನ ಮಾರ್ಗದಲ್ಲಿ ಕಠಿಣ ಪರಿಶ್ರಮ (ಜಿಹಾದ್ ಫೀ ಸಬೀಲಿಲ್ಲಾಹ್)

ಇಸ್ಲಾಮ್ ಎಂದೂ ಬಲಪ್ರಯೋಗವನ್ನು ಉಪದೇಶಿಸಿಲ್ಲ. ಪವಿತ್ರ ಖುರ್‌ಆನ್, ಹದೀಸಿನ ಎಲ್ಲ ಗ್ರಂಥಗಳು ಮತ್ತು ಚರಿತ್ರೆಯ ಗ್ರಂಥಗಳನ್ನು ಗಾಢವಾಗಿ ಅಧ್ಯಯನ ಮಾಡಿದರೆ ಮತ್ತು ಮನುಷ್ಯನಿಗೆ ಸಾಧ್ಯವಿರುವಷ್ಟು ಚಿಂತಾಶಕ್ತಿಯನ್ನು ಉಪಯೋಗಿಸಿ ಓದಿದರೆ ಅಥವಾ ಶ್ರದ್ಧೆಯಿಂದ ಅವುಗಳನ್ನು ಆಲಿಸಿದರೆ, ಲಭ್ಯವಾಗುವ ಇಷ್ಟೆಲ್ಲ ಮಾಹಿತಿಗಳಿಂದ ದೃಢವಾಗಿ ಮತ್ತು ಪ್ರತಿಮಾತಿಲ್ಲದಂತೆ ಹೀಗೆ ಸ್ಪಷ್ಟವಾಗುವುದು: ಧರ್ಮವನ್ನು ಬಲಪ್ರಯೋಗದಿಂದ ಪ್ರಚಾರಪಡಿಸಲಿಕ್ಕಾಗಿ ಇಸ್ಲಾಮ್ ಖಡ್ಗವನ್ನು ಪ್ರಯೋಗಿಸಿತೆಂಬುದು ಅತ್ಯಂತ ನಿರಾಧಾರವಾದ ಮತ್ತು ನಾಚಿಕೆಗೆಟ್ಟ ಆರೋಪವಾಗಿದೆ. ಇದು ಪೂರ್ವಗ್ರಹ ಪೀಡಿತರಾಗದೆ ಪವಿತ್ರ ಖುರ್‌ಆನ್, ಹದೀಸಿನ ಗ್ರಂಥಗಳು ಮತ್ತು ಚರಿತ್ರೆಯ ಗ್ರಂಥಗಳನ್ನು ಸರಿಯಾಗಿ ಅಧ್ಯಯನ ಮಾಡದ್ದರಿಂದ ಮತ್ತು ಸುಳ್ಳು ಹಾಗು ಮಿಥ್ಯಾಪವಾದಗಳನ್ನು ಈ ವಾದಗಳಿಗೆ ಆಧಾರವನ್ನಾಗಿ ಮಾಡಿದ್ದರಿಂದಾಗಿದೆ. ಆದರೆ ನೇರವಾದ ಮಾರ್ಗವನ್ನು ಅತಿಯಾಗಿ ಬಯಸುವವರು ಈ ಸುಳ್ಳಾರೋಪಗಳ ಹಿಂದೆ ಅವಿತಿರುವ ಸತ್ಯತೆಯನ್ನು ಮನಗಾಣುವರು.

"ಧರ್ಮದಲ್ಲಿ ಸೇರಿಸಿಕೊಳ್ಳಲು ಬಲಪ್ರಯೋಗ ಮಾಡಬಾರದು" ಎಂದು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳಿರುವಾಗ ಇಸ್ಲಾಮ್ ಧರ್ಮ, "ಧರ್ಮವನ್ನು ಬಲಪ್ರಯೋಗವಾಗಿ ಬೋಧಿಸುವ ಧರ್ಮ"ವೆಂದು ಹೇಳಲು ಹೇಗೆ ತಾನೆ ಸಾಧ್ಯ? ಅಲ್ಲದೆ ಮಕ್ಕದಲ್ಲಿ ಹದಿಮೂರು ವರ್ಷಗಳ ಕಾಲ ರಾತ್ರಿ ಹಗಲು "ಕೆಡುಕನ್ನು ಎದುರಿಸಬೇಡಿರಿ; ಸಹಿಷ್ಣುಗಳಾಗಿರಿ" ಎಂದು ತನ್ನ ಅನುಯಾಯಿಗಳಿಗೆ ಉಪದೇಶಿಸುತ್ತಾ ಇದ್ದ ಮಹಾನ್ ಪ್ರವಾದಿಯ ಮೇಲೆ ಬಲಪ್ರಯೋಗದ ಆರೋಪ ಹೊರಿಸಲು ಸಾಧ್ಯವೇ? ಆದರೆ ಶತ್ರುಗಳ ಉಪಟಳಗಳು ಮಿತಿಮೀರಿದಾಗ ಮತ್ತು ಇಸ್ಲಾಮ್ ಧರ್ಮವನ್ನು ನಾಶಗೊಳಿಸಲು ಎಲ್ಲ ಅರಬಿ ಗೋತ್ರಗಳು ಒಗ್ಗೂಡಿದ ಪ್ರಯತ್ನ ನಡೆಸಿದಾಗ ದೇವನು ತನ್ನ ಪ್ರೀತಿಗೆ ಪಾತ್ರರಾದವರನ್ನು ರಕ್ಷಿಸುವ ತನ್ನ ಗುಣವನ್ನು ಪ್ರದರ್ಶಿಸುತ್ತಾ, "ಖಡ್ಗವೆತ್ತುವವರು ಖಡ್ಗದಿಂದಲೇ ಹತರಾಗಲಿ" ಎಂದು ತನ್ನ ನಿರ್ಧಾರವನ್ನು ಪ್ರಕಟಿಸಿದನು. ಆದರೆ ಪವಿತ್ರ ಖುರ್‌ಆನ್ ಬಲಪ್ರಯೋಗದ ಉಪದೇಶ ನೀಡಿಯೇ ಇಲ್ಲ.

ಧರ್ಮಪ್ರಚಾರಕ್ಕಾಗಿ ಇಸ್ಲಾಮ್ ಬಲಪ್ರಯೋಗವನ್ನು ಉಪದೇಶಿಸಿದ್ದರೆ ಹಝ್ರತ್ ಪೈಗಂಬರರ(ಸ) ಶಿಷ್ಯರು ವಿವಿಧ ಪರೀಕ್ಷೆಗಳ ಘಟ್ಟಗಳಲ್ಲಿ ಸತ್ಯಸಂಧರಾದ ವಿಶ್ವಾಸಿಗಳ ಹಾಗೆ ತಮ್ಮ ದೃಢವಿಶ್ವಾಸ ಪ್ರಕಟಿಸಲು ಸಮರ್ಥರಾಗುತ್ತಿರಲಿಲ್ಲ. ಆದರೆ ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಪೈಗಂಬರರ(ಸ) ಶಿಷ್ಯರ ನಿಷ್ಠೆ ಮತ್ತು ವಿಧೇಯತೆ ಪ್ರಸಿದ್ಧವಾಗಿದ್ದು ಅವುಗಳ ಬಗ್ಗೆ ಇಲ್ಲಿ ವಿವರಣೆ ನೀಡುವ ಅಗತ್ಯವೇನೂ ಇರುವುದಿಲ್ಲ. ಸತ್ಯ ಮತ್ತು ನಿಷ್ಠೆಯ ಅನುಷ್ಠಾನದ ಅವರ ಉದಾಹರಣೆಗಳು ಎಂತಹ ಉನ್ನತ ಮಟ್ಟದವುಗಳಾಗಿದ್ದುವೆಂದರೆ ಅವುಗಳಿಗೆ ಸಮಾನವಾದ ಉದಾಹರಣೆಗಳು ಇತರ ಕೋಮುಗಳ ವೃತ್ತಾಂತಗಳಲ್ಲಿ ಕಾಣಸಿಗುವುದು ಕಷ್ಟಕರವೆಂಬ ವಾಸ್ತವಿಕ ಸಂಗತಿ ಯಾರಿಂದಲೂ ಮರೆಯಾಗಿಲ್ಲ. ನಿಷ್ಠಾವಂತರಾದ ಅವರು, ಝಳಪಿಸುವ ಖಡ್ಗಗಳ ಕೆಳಗಡೆಯೂ ತಮ್ಮ ಸತ್ಯ ಮತ್ತು ನಿಷ್ಠೆಯನ್ನು ಬಿಟ್ಟುಬಿಡಲಿಲ್ಲ. ಅವರು ತಮ್ಮ ಪರಿಶುದ್ಧ ಮತ್ತು ಮಹಾನ್ ಪ್ರವಾದಿಯ ಸಹವಾಸದಲ್ಲಿ ಎಂತಹ ಸತ್ಯನಿಷ್ಠೆ ಪ್ರಕಟಿಸಿದರೆಂದರೆ ಅಂತಹ ಸತ್ಯನಿಷ್ಠೆಯನ್ನು ಯಾವುದೇ ಮನುಷ್ಯನು ಆತನ ಹೃದಯವು ಧರ್ಮದ ಬೆಳಕಿನಿಂದ ಪ್ರಕಾಶಮಾನವಾಗುವ ತನಕ ಪ್ರಕಟಿಸಲಾರನು. ಒಟ್ಟಾರೆ ಹೇಳುವುದಾದರೆ, ಇಸ್ಲಾಮಿನಲ್ಲಿ ಬಲಪ್ರಯೋಗಕ್ಕೆ ಸ್ಥಾನವಿಲ್ಲ.

*(ಮಸೀಹ್ ಹಿಂದುಸ್ಥಾನ್ ಮೇ; ರೂಹಾನೀ ಖಝಾಇನ್*
*ಸಂಪುಟ 15, ಪುಟ 11 – 12)*

ಇಸ್ಲಾಮ್ ಧರ್ಮವನ್ನು ಖಡ್ಗದ ಬಲದಿಂದ ಹಬ್ಬಿಸಬೇಕೆಂಬ ನಂಬಿಕೆಯನ್ನು ಈ ಲೋಕದಲ್ಲಿ ಜೀವಿಸಿದ್ದ ಸತ್ಯಸಂಧರಾದ ಮುಸ್ಲಿಮರಲ್ಲಿ ಯಾರೂ ಎಂದೂ ಹೊಂದಿರಲಿಲ್ಲ. ಇಸ್ಲಾಮ್ ತನ್ನ ಸ್ವಂತ ಶ್ರೇಷ್ಠತೆಗಳ ಕಾರಣದಿಂದ ಲೋಕದಾದ್ಯಂತ ವ್ಯಾಪಿಸಿತು. ತಾವು ಮುಸ್ಲಿಮರೆಂದು ಹೇಳಿಕೊಂಡು "ಇಸ್ಲಾಮ್ ಧರ್ಮವನ್ನು ಖಡ್ಗಬಲದಿಂದ ಹಬ್ಬಿಸಬೇಕು" ಎಂದು ಮಾತ್ರ ತಿಳಿದುಕೊಂಡಿರುವವರು ಇಸ್ಲಾಮ್ ಧರ್ಮದಲ್ಲಿ ಅಡಕವಾಗಿರುವ ಅದರದ್ದೇ ಆದ ಶ್ರೇಷ್ಠಗುಣಗಳನ್ನು ಮನದಟ್ಟು ಮಾಡಿಕೊಳ್ಳದವರಾಗಿದ್ದಾರೆ.

*(ತಿರ್ಯಾಖುಲ್ ಖುಲೂಬ್; ರೂಹಾನೀ ಖಝಾಇನ್ ಸಂಪುಟ 15, ಪುಟ 167)*

# ಪ್ರಾರ್ಥನೆಗಳು

ಅಲ್ಲಾಹನ ಕೃಪಾನುಗ್ರಹಗಳು ಮನುಷ್ಯನಿಗೆ ಸಮೀಪವಾಗುತ್ತಿರುವಾಗ ಅವನು ಮನುಷ್ಯನ ಪ್ರಾರ್ಥನೆಗಳು ಸ್ವೀಕರಿಸಲ್ಪಡುವ ಮಾರ್ಗಗಳನ್ನು ಒದಗಿಸಿ ಕೊಡುತ್ತಾನೆ. ಆಗ ಮನುಷ್ಯನ ಹೃದಯದಲ್ಲಿ ಒಂದು ಕೋಮಲ ಸ್ಥಿತಿಯುಂಟಾಗುತ್ತದೆ. ಹೃದಯದಲ್ಲೊಂದು ಉರಿ ಮತ್ತು ಕರಗುವಿಕೆ ಉಂಟಾಗುತ್ತದೆ. ಆದರೆ ಅಲ್ಲಾಹನ ಕಡೆಗೆ ಅಭಿಮುಖೀಕರಿಸಲಿಕ್ಕೆ ಕಾರಣವಾಗುವ ಮನಸ್ಸಮಾಧಾನವು ಪ್ರಾರ್ಥನೆಯು ಸ್ವೀಕರಿಸಲ್ಪಡಲು ಯೋಗ್ಯವಲ್ಲದ ಕಾಲದಲ್ಲಿ ಹೃದಯದಲ್ಲಿ ಉಂಟಾಗುವುದಿಲ್ಲ. ಆಗ ಎಷ್ಟು ಪ್ರಯತ್ನಿಸಿದರೂ ಅಲ್ಲಾಹನ ಕಡೆಗೆ ಪೂರ್ಣ ಗಮನವಿರಿಸಿ ಪ್ರಾರ್ಥಿಸಲು ಆಗುವುದಿಲ್ಲ. ಇದಕ್ಕೆ ಕಾರಣ ಇದಾಗಿದೆ: ಅಲ್ಲಾಹನು ಕೆಲವೊಮ್ಮೆ ತನ್ನ ನಿರ್ಧಾರದಂತೆಯೇ ತನ್ನಿಚ್ಛೆಯನ್ನು ಪ್ರಕಟಗೊಳಿಸುತ್ತಾನೆ; ಕೆಲವೊಮ್ಮೆ ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ. ಅಲ್ಲಾಹನ ತೀರ್ಮಾನ ಹೇಗೆ ಆಗಿದೆಯೆಂಬುದರ ಬಗ್ಗೆ ಸ್ಪಷ್ಟ ಚಿಹ್ನೆಗಳನ್ನು ಕಾಣುವ ತನಕ ನಾನು ನನ್ನ ಪ್ರಾರ್ಥನೆ ಸ್ವೀಕೃತವಾಗುವ ಬಗ್ಗೆ ಕಮ್ಮಿ ಆಶೆಯನ್ನು ಹೊಂದುತ್ತೇನೆ. ಆದರೆ ದೇವನ ನಿರ್ಧಾರ ಪ್ರಕಟವಾದಾಗ ನಾನು ಅವನ ನಿರ್ಧಾರವನ್ನು ನನ್ನ ಪ್ರಾರ್ಥನೆ ಸ್ವೀಕೃತವಾದರೆ ನನಗೆ ಎಷ್ಟು ಸಂತೋಷವಾಗುತ್ತಿತ್ತೋ ಅದಕ್ಕಿಂತ ಹೆಚ್ಚಿನ ಸಂತೋಷದಿಂದ ಸ್ವೀಕರಿಸುತ್ತೇನೆ. ಏಕೆಂದರೆ ಅಲ್ಲಾಹನ ನಿರ್ಧಾರಗಳಿಂದ ತೃಪ್ತನಾಗುವುದರಿಂದ ಸಿಗುವ ನೆಮ್ಮದಿಯ ಫಲಗಳು ಮತ್ತು ಅನುಗ್ರಹಗಳು ಪ್ರಾರ್ಥನೆ ಸ್ವೀಕೃತವಾಗುವಾಗ ಸಿಗುವುದಕ್ಕಿಂತ ಬಹಳ ಹೆಚ್ಚಾಗಿರುತ್ತವೆ.

*(ಮಲ್‌ಫೂಝಾತ್ ಸಂಪುಟ 1, ಪುಟ 460)*

## ಮಾನವರೊಂದಿಗೆ ಸಹಾನುಭೂತಿ

ಎಲ್ಲ ಮನುಷ್ಯರೊಂದಿಗೆ ಸಹಾನುಭೂತಿಯಿಂದ ವರ್ತಿಸಬೇಕು ಎಂಬುದೇ ನಮ್ಮ ತತ್ವವಾಗಿದೆ. ನೆರೆಹೊರೆಯ ಒಬ್ಬ ಹಿಂದುವಿನ ಮನೆಗೆ ಬೆಂಕಿ ಹತ್ತಿದ್ದಾಗ ನೋಡಿಯೂ ಅದನ್ನು ನಂದಿಸುವುದರಲ್ಲಿ ನೆರವಾಗಲು ಮುಂದಾಗದವನು ನಿಶ್ಚಯವಾಗಿಯೂ ನನ್ನ ಅನುಯಾಯಿಗಳ ಸಮೂಹಕ್ಕೆ ಸೇರಿದವನಾಗಲಾರ ಎಂದು ನಾನು ಸತ್ಯವಾಗಿ ಹೇಳುತ್ತೇನೆ. ಹಾಗೆಯೇ ಒಬ್ಬ ಕ್ರೈಸ್ತನನ್ನು ಯಾರಾದರೂ ಕೊಲೆ ಮಾಡಲು ಯತ್ನಿಸುತ್ತಿರುವುದನ್ನು ನನ್ನ ಶಿಷ್ಯರಲ್ಲಿ ಯಾರಾದರೂ ನೋಡಿಯೂ ಅವನನ್ನು ರಕ್ಷಿಸಲು ಪ್ರಯತ್ನಿಸುವುದಿಲ್ಲವಾದರೆ, ಅವನು ನಮ್ಮವನಲ್ಲ ಎಂದು ನಾನು ಖಚಿತವಾಗಿ ಹೇಳುತ್ತೇನೆ.

*(ಸಿರಾಜ್ ಮುನೀರ್; ರೂಹಾನೀ ಖ಼ಝ಼ಾಇನ್ ಸಂಪುಟ 12, ಪುಟ 28)*

ಈ ಲೋಕದಲ್ಲಿ ಯಾರನ್ನೂ ನಾನು ನನ್ನ ಶತ್ರುವಾಗಿ ಕಾಣುವುದಿಲ್ಲ ಎಂದು ನಾನು ಎಲ್ಲ ಮುಸ್ಲಿಮರು, ಕ್ರೈಸ್ತರು, ಹಿಂದುಗಳು ಮತ್ತು ಆರ್ಯ ಸಮಾಜಿಗಳಿಗೆ ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ವಾತ್ಸಲ್ಯಮಯಿಯಾದ ತಾಯಿ ತನ್ನ ಮಕ್ಕಳನ್ನು ಪ್ರೀತಿಸುವ ಹಾಗೆ ಅಥವಾ ಅದಕ್ಕಿಂತಲೂ ಮಿಗಿಲಾಗಿ ನಾನು ಸಕಲ ಮಾನವರನ್ನು ಪ್ರೀತಿಸುತ್ತೇನೆ. ಆದರೆ ನಾನು ಕೇವಲ ಅವರ ಮಿಥ್ಯ ವಿಶ್ವಾಸಗಳ ವಿರೋಧಿಯಾಗಿದ್ದೇನೆ. ಅವುಗಳಿಂದ ಸತ್ಯದ ಕೊಲೆಯಾಗುತ್ತದೆ. ಮನುಷ್ಯರೊಂದಿಗೆ ಸಹಾನುಭೂತಿ ತೋರಿಸುವುದು ನನ್ನ ಕರ್ತವ್ಯವಾಗಿದೆ. ಸುಳ್ಳು, ಬಹುದೇವಾರಾಧನೆ, ದೌರ್ಜನ್ಯ, ಪ್ರತಿಯೊಂದು ನೀಚಕೃತ್ಯ, ಅನ್ಯಾಯ ಮತ್ತು ದುರ್ನಡತೆಯ ಬಗ್ಗೆ ಅಸಂತೃಪ್ತಿ ಹೊಂದುವುದು ನನ್ನ ತತ್ವವಾಗಿದೆ.

*(ಅರ್‌ಬಈನ್ ನಂ. 1; ರೂಹಾನೀ ಖ಼ಝ಼ಾಇನ್ ಸಂಪುಟ 17, ಪುಟ 344)*

# ದಿವ್ಯದೂತರು (ಮಲಾಯಿಕ)

ಮನುಷ್ಯ ಮತ್ತು ವಿಶ್ವದ ಸಂಪೂರ್ಣ ಸೃಷ್ಟಿಗಳ ಆಂತರಿಕ ಮತ್ತು ಬಾಹ್ಯ ಬೆಳವಣಿಗೆಗಾಗಿ ಅವರ ಮತ್ತು ದೇವನ ಮಧ್ಯೆ ಕೆಲವು ಮಧ್ಯವರ್ತಿಗಳಿರುವುದು ಅತ್ಯಾವಶ್ಯಕವೆಂದು ಪವಿತ್ರ ಖುರ್‌ಆನಿನ ಗಹನವಾದ ಅಧ್ಯಯನದಿಂದ ತಿಳಿದುಬರುತ್ತದೆ. ಪವಿತ್ರ ಖುರ್‌ಆನಿನ ಕೆಲವು ಸೂಚನೆಗಳಿಂದ ಹೀಗೆ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ, ದಿವ್ಯದೂತರು (ಮಲಾಯಿಕ) ಎಂದು ಕರೆಯಲ್ಪಡುವ ಪರಿಶುದ್ಧ ಸೃಷ್ಟಿಗಳಿಗೆ ವಿವಿಧ ಆಕಾಶ ಕಾಯಗಳೊಂದಿಗೆ ವಿಶಿಷ್ಟ ಸಂಬಂಧಗಳು ಇರುತ್ತವೆ. ಕೆಲವರು ತಮ್ಮ ವಿಶಿಷ್ಟ ಪ್ರಭಾವದಿಂದ ಗಾಳಿಯ ಚಲನೆಯನ್ನು ನಿಯಂತ್ರಿಸುತ್ತಾರೆ. ಕೆಲವರು ಮಳೆಬರಿಸುತ್ತಾರೆ ಮತ್ತು ಬೇರೆ ಕೆಲವರು ಬೇರೆ ಕೆಲವು ಪ್ರಭಾವಗಳು ಬಾಹ್ಯಾಂತರಿಕ್ಷದಿಂದ ಭೂಮಿಗೆ ಇಳಿದು ಬರುವಂತೆ ಮಾಡಲು ನಿಯುಕ್ತರಾಗಿದ್ದಾರೆ.

*(ತೌಝೀಹೆ ಮರಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 70)*

ದಿವ್ಯದೂತರ ಸಹಜ ಶಕ್ತಿಗಳು ಮನುಷ್ಯನ ಸಹಜ ಶಕ್ತಿಗಳಿಗಿಂತ ಶ್ರೇಷ್ಠವಲ್ಲವೆಂದು ಇಸ್ಲಾಮ್ ಧರ್ಮ ಕಲಿಸುತ್ತಿದೆಯೆಂದು ಇಲ್ಲಿ ನೆನಪಿಟ್ಟುಕೊಳ್ಳಬೇಕಾಗಿದೆ. ಬದಲಾಗಿ, ಮನುಷ್ಯನ ವೈಶಿಷ್ಟ್ಯಗಳು ದಿವ್ಯದೂತರ ವೈಶಿಷ್ಟ್ಯಗಳಿಗಿಂತ ಶ್ರೇಷ್ಠವಾದುದಾಗಿವೆ. ಭೌತಿಕ ಲೋಕದಲ್ಲೂ ಆಧ್ಯಾತ್ಮಿಕ ಲೋಕದಲ್ಲೂ ಅವರು ಮಧ್ಯವರ್ತಿಗಳಾಗಿರುವುದರಿಂದ ಮಾತ್ರ ಅವರು ಶ್ರೇಷ್ಠರೆಂದು ಸಾಬೀತುಗೊಳ್ಳುವುದಿಲ್ಲ. ಪವಿತ್ರ ಖುರ್‌ಆನಿನ ಪ್ರಕಾರ ಅವರು (ದೇವನ) ಸೇವಕರಾಗಿ ಈ ಕಾರ್ಯಗಳಿಗೆ ನಿಯುಕ್ತರಾಗಿದ್ದಾರೆ.

*(ತೌಝೀಹೆ ಮರಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 74)*

ದಿವ್ಯದೂತರ ಅವತರಣ ಎಂಬುದರ ಅರ್ಥವೇನು ಎಂದು ಪ್ರಶ್ನಿಸುವುದಾದರೆ ಅದು ಹೀಗೆ ಎಂದು ತಿಳಿದುಕೊಳ್ಳಲಿ: ಯಾವುದೇ ಸಂದೇಶವಾಹಕ, ಪ್ರವಾದಿ ಅಥವಾ ಉದ್ಧಾರಕ ಜನರ ಸುಧಾರಣೆಗಾಗಿ ಆಕಾಶದಿಂದ ಇಳಿದು ಬರುವಾಗ ಅಂತಹ ವ್ಯಕ್ತಿಯ ಜೊತೆಗೆ ದಿವ್ಯದೂತರು (ಮಲಾಯಿಕ) ಸಹ ಇಳಿದು ಬರುತ್ತಾರೆ; ಅವರು ಸತ್ಯವನ್ನು ಸ್ವೀಕರಿಸಲು ಸನ್ನದ್ಧರಾದ ಹೃದಯಗಳಿಗೆ ಮಾರ್ಗದರ್ಶನ ನೀಡುತ್ತಾರೆ ಮತ್ತು ಒಳಿತಿನ

ಕಡೆಗೆ ಅವರು ಆಕರ್ಷಿತರಾಗುವಂತೆ ಮಾಡುತ್ತಾರೆ ಎಂಬುದು ದೇವನಿಂದ ಸುಸ್ಥಾಪಿತವಾದ ಕಾರ್ಯವಿಧಾನವಾಗಿದೆ. ಅವಿಶ್ವಾಸ ಮತ್ತು ಅಧರ್ಮದ ಅಂಧಕಾರ ದೂರ ಸರಿದು ವಿಶ್ವಾಸ ಮತ್ತು ಸದಾಚಾರದ ಮುಂಬೆಳಕು ಉದಿಸುವ ತನಕ ಅವರು ಇಳಿಯುತ್ತಾ ಇರುತ್ತಾರೆ. ಪವಿತ್ರ ಖುರ್‌ಆನ್‌ನಲ್ಲಿ ಈ ಬಗ್ಗೆ ಅಲ್ಲಾಹನು ಹೀಗೆಂದಿರುವನು:

***"ದಿವ್ಯದೂತರು ಮತ್ತು ಆ ಪರಿಪೂರ್ಣಾತ್ಮ (ರೂಹುಲ್ ಖುದ್‌ಸ್ - ಜಿಬ್ರೀಲ್) ತಮ್ಮ ಸೃಷ್ಟಿಕರ್ತನ ಆಜ್ಞೆಯಂತೆ ಎಲ್ಲ ಸಂಗತಿಗಳ ಬಗ್ಗೆ ಆಜ್ಞೆಗಳನ್ನು ಪಡೆದುಕೊಂಡು ಅದರಲ್ಲಿ (ಅಂಧಕಾರದಲ್ಲಿ) ಇಳಿದು ಬರುತ್ತಾರೆ. ಮುಂಬೆಳಗಿನ ತನಕ ಎಲ್ಲವೂ ಶಾಂತಮಯವಾಗಿರುತ್ತದೆ." (97:5,6)***

ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ. ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

*(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)*

# ಯಅ್‌ಜೂಜ್ ಮಅ್‌ಜೂಜ್

ವಾಗ್ದತ್ತ ಮಸೀಹ್ (ಮಸೀಹ್ ಮೌಊದ್) ಯಅ್‌ಜೂಜ್ ಮಅ್‌ಜೂಜರ ಕಾಲದಲ್ಲಿ ಬರುವುದು ಅತ್ಯಾವಶ್ಯಕವಾಗಿದೆ. ಈ ಎರಡು ಶಬ್ದಗಳು "ಅಜೀಜ್" (ಬೆಂಕಿ) ಎಂಬ ಶಬ್ದದಿಂದ ಉತ್ಪತಿಯಾಗಿವೆ. ಯಅ್‌ಜೂಜ್ ಮಅ್‌ಜೂಜ್ ಜನಾಂಗಗಳು ಇತರ ಎಲ್ಲ ಜನಾಂಗಗಳಿಗಿಂತ ಬೆಂಕಿಯನ್ನು ತಮ್ಮ ಎಲ್ಲ ಕಾರ್ಯಗಳಿಗೆ ಪ್ರಧಾನ ಅಂಶವನ್ನಾಗಿ ಸ್ವೀಕರಿಸಿದವರೂ ಬೆಂಕಿಯ ನಾನಾ ಉಪಯೋಗಗಳನ್ನು ಆವಿಷ್ಕರಿಸಿದವರೂ ಆಗಿರುತ್ತಾರೆ. ಅವರ ಹಡಗುಗಳು, ಅವರ ರೈಲುಬಂಡಿಗಳು, ಅವರ ಯಂತ್ರೋಪಕರಣಗಳು ಬೆಂಕಿಯ ಶಕ್ತಿಯ ಮೂಲಕ ಚಲಿಸುವುವು. ಅವರ ಯುದ್ಧಗಳು ಬೆಂಕಿ ಸುರಿಸುವ ಆಯುಧಗಳ ಮೂಲಕವಾಗಿರುವುವು. ಅವರು ಬೆಂಕಿಯನ್ನು ತಮ್ಮ ಕಾರ್ಯೋದ್ಯಮಗಳಿಗೆ ಅಳವಡಿಸುವ ಕಲೆಯಲ್ಲಿ ಲೋಕದ ಇತರ ಎಲ್ಲ ಜನಾಂಗಗಳಿಗಿಂತ ಹೆಚ್ಚಿನ ನಿಪುಣತೆ ಪಡೆದವರಾಗುವರು. ಇದೇ ಕಾರಣದಿಂದ ಅವರು ಯಅ್‌ಜೂಜ್ ಮಅ್‌ಜೂಜ್ ಎಂದು ಕರೆಯಲ್ಪಟ್ಟಿರುವರು. ಈ ಎಲ್ಲ ವಿವರಣೆಗಳಿಂದ, ಹೀಗೆ ಹೇಳಿದುದು ಯುರೋಪಿಯನ್ ಜನಾಂಗಗಳ ಬಗ್ಗೆಯೆಂದು ಸ್ಪಷ್ಟವಾಗುತ್ತದೆ. ಅವರು ಬೆಂಕಿಯನ್ನು ತಮ್ಮ ಉಪಯೋಗಗಳಿಗೆ ಅಳವಡಿಸಿರುವ ಕಲೆಯಲ್ಲಿ ಎಷ್ಟು ನುರಿತರೂ ಸಮರ್ಥರೂ ಪ್ರಸಿದ್ಧರೂ ಆಗಿರುವರೆಂದರೆ ಅವರ ಬಗ್ಗೆ ಹೆಚ್ಚಿನ ವಿವರ ನೀಡುವ ಅಗತ್ಯವಿರುವುದಿಲ್ಲ. ಇಸ್ರಾಈಲ್ ಸಂತತಿಗಳಲ್ಲಿ ಆಗಮಿಸಿದ ಪ್ರವಾದಿಗಳಿಗೆ ನೀಡಲಾದ ದೈವಿಕ ಗ್ರಂಥಗಳಲ್ಲಿ ಸಹ ಯುರೋಪಿಯನ್ನರನ್ನು ಯಅ್‌ಜೂಜ್ ಮಅ್‌ಜೂಜ್ ಎಂದೇ ಹೆಸರಿಸಲಾಗಿದೆ; ಅಲ್ಲದೆ ಪುರಾತನ ಕಾಲದಿಂದ ರಶ್ಯಾದ ರಾಜಧಾನಿಯಾಗಿರುವ ಮೋಸ್ಕೋ ನಗರದ ಹೆಸರು ಸಹ ಅವುಗಳಲ್ಲಿ ಉಲ್ಲೇಖಿತವಾಗಿದೆ. ವಾಗ್ದತ್ತ ಮಸೀಹ್ ಯಅ್‌ಜೂಜ್ ಮಅ್‌ಜೂಜರ ಪ್ರತಾಪದ ಕಾಲದಲ್ಲಿ ಆಗಮಿಸುವುದು ದೇವನಿಂದ ಮೊದಲೇ ನಿಗದಿಪಡಿಸಲಾಗಿತ್ತು.

*(ಅಯ್ಯಾಮುಸ್ಸುಲ್‌ಹ್; ರೂಹಾನೀ ಖಝಾಇನ್*
*ಸಂಪುಟ 14, ಪುಟ 424 – 425)*

## ಪ್ರಕಾಶದ ಕಾಲ

ವೃಕ್ಷಗಳು ಫಲಭೂಯಿಷ್ಟವಾಗಲು ನಿಶ್ಚಿತ ಕಾಲವಿದೆಯೆಂದು ನೀವು ನೋಡುತ್ತಿರುವಿರಿ. ಅದೇ ರೀತಿ ಪ್ರಕಾಶ ಸಹ ಅದರ ನಿಗದಿತ ಸಮಯದಲ್ಲಿಯೇ ಇಳಿದು ಬರುತ್ತದೆ. ಅದು ಸ್ವತಃ ಇಳಿದು ಬರುವ ಮೊದಲು ಯಾರೂ ಅದನ್ನು ಇಳಿಸಲಾರರು. ಅದು ಒಮ್ಮೆ ಇಳಿದುಬಿಟ್ಟರೆ ಅದನ್ನು ತಡೆಯಲು ಸಹ ಯಾರಿಂದಲೂ ಸಾಧ್ಯವಿಲ್ಲ. ಜಗಳಗಳು ಮತ್ತು ವಿರೋಧಾಭಿಪ್ರಾಯಗಳು ಉಂಟಾಗುವುವು. ಆದರೆ ಕೊನೆಗೆ ಸತ್ಯಕ್ಕೆ ಜಯವಾಗುವುದು. ಏಕೆಂದರೆ ಅದು ಮನುಷ್ಯ ನಿರ್ಮಿತವಾದುದಲ್ಲ ಮತ್ತು ಆದಮ್ ಸಂತತಿಗೆ ಸೇರಿದ ಯಾರೊಬ್ಬನ ಕೈಗಳಿಂದಲೂ ಅದು ನಿರ್ಮಿತವಾದುದಲ್ಲ. ಅದು ಋತುಗಳನ್ನೂ ಕಾಲಗಳನ್ನೂ ಬದಲಾಯಿಸುವ ಮತ್ತು ಹಗಲಿನಿಂದ ರಾತ್ರಿಯನ್ನೂ ರಾತ್ರಿಯಿಂದ ಹಗಲನ್ನೂ ಹೊರಬರಿಸುವ ದೇವನ ಕೃತಿಯಾಗಿದೆ. ಅವನು ಅಂಧಕಾರವನ್ನು ಉಂಟುಮಾಡುತ್ತಾನಾದರೂ ಪ್ರಕಾಶವನ್ನು ಇಷ್ಟಪಡುತ್ತಾನೆ. ಅವನು ಬಹುದೇವಾರಾಧನೆ ಹಬ್ಬಲು ಬಿಡುತ್ತಾನಾದರೂ ಅವನಿಗೆ ಪ್ರೀತಿ ಇರುವುದು ತನ್ನ ಏಕತ್ವದ ಬಗ್ಗೆಯಾಗಿದೆ. ತನ್ನ ವೈಭವಕ್ಕೆ ಬೇರೆಯವರನ್ನು ಪಾಲುಗಾರರನ್ನಾಗಿ ಕಲ್ಪಿಸುವುದನ್ನು ಅವನು ಇಷ್ಟಪಡುವುದಿಲ್ಲ. ಮನುಷ್ಯ ಸೃಷ್ಟಿಯ ಆರಂಭದ ಮೊದಲ್ಗೊಂಡು ಅಂತ್ಯದ ವರೆಗೆ ಅಲ್ಲಾಹನ ಬದಲಾವಣೆ ಹೊಂದದ ನಿಯಮ ಇದಾಗಿದೆ: ಅವನು ಏಕದೇವ ವಿಶ್ವಾಸ ಹೊಂದಿರುವವರ ಸದಾ ರಕ್ಷಣೆ ಮಾಡುತ್ತಾನೆ.

*(ಮಸೀಹ್ ಹಿಂದುಸ್ಥಾನ್ ಮೇ; ರೂಹಾನೀ ಖ಼ಝ಼ಾಇನ್ ಸಂಪುಟ 15, ಪುಟ 65)*

ಆಯೆ ಖುದಾ ಅಯೆ ಕಾರ್ ಸಾಝ್ಽೋ ಐಬ್ ಪೋಶೋ ಕಿರ್ದ್‌ಗಾರ್
ಅಯೆ ಮೆರೆ ಪ್ಯಾರೇ ಮೆರೆ ಮುಹ್‌ಸಿನ್ ಮೆರೆ ಪರ್‌ವರ್‌ದಿಗಾರ್
ಅರ್ಥ: ಸರ್ವಕಾರ್ಯಗಳ ಕಾರಣಕರ್ತನಾದ, ನ್ಯೂನತೆಗಳನ್ನು
ಮರೆ ಮಾಡುವವನಾದ ಸರ್ವಶಕ್ತನಾದ ದೇವಾ,
ನನ್ನ ಪ್ರಿಯಕರ, ನನ್ನ ಹಿತೈಷಿ, ನನ್ನ ಸಂರಕ್ಷಕನೇ,

ಯೆಃ ಸರಾಸರ್ ಫರ್ಝ್‌ಲೋ ಇಹ್‌ಸಾನ್ ಹೇ ಕೆ ಮೇ ಆಯಾ ಪಸಂದ್
ವರ್‌ನ ದರ್‌ಗಾಹ್ ಮೇ ತೆರಿ ಕುಛ್ ಕಮ್ ನ ಥೆ ಖಿದ್‌ಮತ್ ಗುಝ಼ಾರ್
ಅರ್ಥ: ನಾನು ನಿನಗೆ ಮೆಚ್ಚಿಗೆಯಾದುದು (ನನ್ನ ಮೇಲಿನ)
ನಿನ್ನ ಅನುಗ್ರಹ ಮತ್ತು ಹಿತಕಾಂಕ್ಷೆಯಿಂದಾಗಿದೆ.
ನಿನ್ನ ಸನ್ನಿಧಿಯಲ್ಲಿ ಸೇವಕರು ಕಮ್ಮಿಯೇನೂ ಇರಲಿಲ್ಲ.

ದೋಸ್ತೀ ಕಾ ದಮ್ ಜೋ ಭರ್ತೆ ಥೆ ವಹ್ ಸಬ್ ದುಶ್ಮನ್ ಹುಯೇ
ಪರ್ ನ ಛೋಡಾ ಸಾಥ್ ತೂನೆ ಅಯೆ ಮೆರೆ ಹಾಜತ್ ಬರಾರ್.
ಅರ್ಥ: ನನ್ನೊಂದಿಗೆ ಸ್ನೇಹಭಾವ ಪ್ರಕಟಿಸುತ್ತಿದ್ದವರೆಲ್ಲರೂ (ನನ್ನ) ಶತ್ರುಗಳಾದರು.
ಆದರೆ ನನ್ನ ಕೋರಿಕೆಗಳನ್ನು
ನೆರವೇರಿಸುತ್ತಿರುವ ನೀನು ನನ್ನ ಕೈ ಬಿಡಲಿಲ್ಲ.

ಅಯೆ ಮೆರೆ ಯಾರೆ ಯಗಾನ ಅಯೆ ಮೆರೆ ಜಾನ್ ಕಿ ಪನಃ
ಬಸ್ ಹೇ ತೂ ಮೆರೆ ಲಿಯೆ ಮುಝ್ ಕೋ ನಹೀಂ ತುಝ್‌ಬಿನ್ ಬಕಾರ್
ಅರ್ಥ: ನನ್ನ ಏಕೈಕನಾದ ಪ್ರಿಯ ದೇವಾ, ನನ್ನ ಜೀವದ ಆಶ್ರಯದಾತನೇ,
ನೀನೇ ನನಗೆ ಸಾಕು. ನೀನಿಲ್ಲದೆ ನನಗೆ ಜೀವಿತವಿಲ್ಲ.

ಮೇ ತೋ ಮರ್‌ಕರ್ ಖ಼ಾಕ್ ಹೋತಾ ಗರ್ ನ ಹೋತಾ ತೇರಾ ಲುತ್‌ಫ್
ಫಿರ್ ಖ಼ುದಾ ಜಾನೆ ಕಹಾಂ ಯೆಃ ಫೇಂಕ್ ದೀ ಜಾತೀ ಗ಼ುಬಾರ್
ಅರ್ಥ: ನಿನ್ನ ದಯೆಯಿಲ್ಲದಿದ್ದರೆ ನಾನೆಂದೋ ಮೃತನಾಗಿ ಧೂಳಾಗುತ್ತಿದ್ದೆ.
ಅನಂತರ ಆ ಧೂಳು ಎಲ್ಲೆಲ್ಲ
ಎಸೆದುಬಿಡಲಾಗುತ್ತಿತ್ತೆಂದು ಯಾರಿಗೆ ಗೊತ್ತು.

ಅಯೆ ಫಿದಾ ಹೋ ತೇರಿ ರಾಹ್ ಮೇ ಮೇರಾ ಜಿಸ್‌ಮೋ ಜಾನೋ ದಿಲ್
ಮೇ ನಹೀಂ ಪಾತಾ ಕೆ ತುಝ್ ಸಾ ಕೊಯೀ ಕರ್ತಾ ಹೋ ಪ್ಯಾರ್
ಅರ್ಥ: ಹೇ ದೇವಾ, ನಿನ್ನ ಮಾರ್ಗದಲ್ಲಿ ನನ್ನ ದೇಹ,
ನನ್ನ ಜೀವ ಮತ್ತು ಆತ್ಮ ಅರ್ಪಿತವಾಗಲಿ ಎಂದು ನಾನು ಬಯಸುತ್ತೇನೆ.
ನಿನ್ನ ಹಾಗೆ ಪ್ರೀತಿಸುವ ಬೇರೆ ಯಾರನ್ನೂ ನಾನು ಕಾಣುವುದಿಲ್ಲ.

ಇಬ್ತಿದಾ ಸೆ ತೇರೇ ಹೀ ಸಾಯ ಮೇ ಮೇರೇ ದಿನ್ ಕಟೇ
ಗೋದ್ ಮೇ ತೇರಿ ರಹಾ ಮೇ ಮಿಸ್‌ಲೆ ತಿಫ್‌ಲೆ ಶೀರ್ ಖ಼್ವಾರ್
ಅರ್ಥ: ನನ್ನ ಜೀವಿತದ ಪ್ರಾರಂಭದಿಂದಲೇ
ನಿನ್ನ ನೆರಳಿನ ಆಶ್ರಯದಲ್ಲಿ ನಾನು ದಿನ ಕಳೆದೆ.
ಹಾಲು ಕುಡಿಯುವ ಮಗುವಿನೋಪಾದಿ ನಾನು ನಿನ್ನ ಮಡಿಯಲ್ಲಿದ್ದೆನು.

ನಸ್‌ಲೆ ಇನ್‌ಸಾನ್ ಮೇ ನಹೀ ದೇಖಿ ವಫಾ ಜೋ ತುಝ್ ಮೇ ಹೇ
ತೇರೆ ಬಿನ್ ದೇಖಾ ನಹೀ ಕೊಯೀ ಭೀ ಯಾರೆ ಗಮ್‌ಗುಸಾರ್
ಅರ್ಥ: ನಿನ್ನ ಹಾಗೆ ವಚನ ಪಾಲನೆ ಮಾಡುವವನನ್ನು
ನಾನು ಮನುಷ್ಯರಲ್ಲಿ ಯಾರನ್ನೂ ಕಂಡಿಲ್ಲ.
ನಿನ್ನ ಹೊರತು ಬೇರೆ ಯಾರನ್ನೂ ನಾನು
ದುಃಖ ಪರಿಹರಿಸುವ ಸ್ನೇಹಿತನಾಗಿ ಕಾಣಲಿಲ್ಲ.

ಲೋಗ್ ಕಹ್ತೇ ಹೇಂ ನಾಲಾಇಖ್ ನಹೀ ಹೋತಾ ಖಬೂಲ್
ಮೈ ತೋ ನಾಲಾಇಖ್ ಭೀ ಹೋಕರ್ ಪಾಗಯಾ ದರ್ಗಹ್ ಮೇ ಬಾರ್
ಅರ್ಥ: ಜನರು ಹೇಳುತ್ತಾರೆ: ಅಯೋಗ್ಯನು ದೇವನ
ಸನ್ನಿಧಿಯಲ್ಲಿ ಸ್ವೀಕಾರರ್ಹನಾಗುವುದಿಲ್ಲ.
ಆದರೆ ನಾನು ಅಯೋಗ್ಯನಾಗಿಯೂ
ನಿನ್ನ ಸನ್ನಿಧಿಯಲ್ಲಿ ಸ್ವೀಕೃತನಾದೆ.

ಇಸ್ ಖದರ್ ಮುಝ್ ಪರ್ ಹುಯಿಂ ತೇರಿ ಇನಾಯತೋ ಕರಮ್
ಜಿನ್ ಕಾ ಮುಶ್‌ಕಿಲ್ ಹೇ ಕೆ ತಾ ರೋಝ಼ೇ ಖಿಯಾಮತ್ ಹೋ ಶುಮಾರ್
ಅರ್ಥ: ನನ್ನ ಮೇಲೆ ನಿನ್ನ ವರದಾನಗಳು ಮತ್ತು ದಯೆ ಎಷ್ಟೆಲ್ಲ ಆದವು.
ಅವುಗಳನ್ನು ಪುನರುತ್ಥಾನ ದಿನದ ತನಕ
ಎಣಿಸುವುದು ಸಹ ಬಹಳ ಕಷ್ಟಕರ.

*(ಬರಾಹೀನೆ ಅಹ್ಮದಿಯಾ ಭಾಗ 5; ರೂಹಾನೀ ಖ಼ಝ಼ಾಇನ್ ಸಂಪುಟ 21, ಪುಟ 127)*